ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ನಮಗೇ ಸಮಯಾವಕಾಶ ಕೊಟ್ಟುಬಿಡಿ. ಅವರಿಗೆ ಬೇಡ. ಹೇಗೂ ಅವರು ಆಡಳಿತ ಪಕ್ಷದವರು. ನಮಗೇ ಕೊಟ್ಟುಬಿಡಿ ಅಷ್ಟೇ.

ಶ್ರೀ ಕೆ. ಶಿವಮೂರ್ತಿ:- ಬಿಜೆಪಿಯವರು ಇಡೀ ದೇಶದಲ್ಲಿಯೇ ಮಾತನಾಡುತ್ತಾರಲ್ಲಾ, ಏಕೆ?

ಅಧ್ಯಕ್ಷರು:- ಒಂದು ನಿಮಿಷ.

ಶ್ರೀ ಗೋವಿಂದ ಎಂ. ಕಾರಜೋಳ:- ಮಂತ್ರಿಗಳೂ ಬಂದಿಲ್ಲ ಸಾರ್.

3. ANNOUNCEMENT

MR. SPEAKER:- Hon'ble Mr. Lord Raj Loomba, Member, House of Lords, British Parliament, United Kingdom and Lady Loomba, Mr. Chris Parsons, British Lawyer and Ambassador of the Loomba Foundation and Members of the delegation are witnessing proceedings of this August House from the distinguished visitors' gallery and on behalf of the Hon'ble Members of this House, I welcome them.

4. ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಮುಂದುವರಿದ ಚರ್ಚೆ:-

ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ್):- ಮಾನ್ಯ ಅಧ್ಯಕ್ಷರೆ, ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಮೊದಲು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಕರ್ನಾಟಕದಲ್ಲಿ ಸರ್ಕಾರ ಅಧಿಕಾರಕ್ಕೆ ಬಂದು 1 ವರ್ಷ 9 ತಿಂಗಳಾಯಿತು. ಅಧಿಕಾರಕ್ಕೆ ಬರುವುದಕ್ಕಿಂತ ಮುಂಚೆ ಸರ್ಕಾರ ಅನೇಕ ಭರವಸೆಗಳನ್ನು ನೀಡಿ ಮತ ಪಡೆದು ಬಹುಮತದಿಂದ ಇವತ್ತು ಅಧಿಕಾರವನ್ನು ನಡೆಸುತ್ತಿದೆ. ಗೃಹ ಇಲಾಖೆಯದ್ದೇ ಒಂದು ವಿಷಯವನ್ನು ಈ ಸದನದ ಗಮನಕ್ಕೆ ತರಲಿಕ್ಕೆಬಯಸುತ್ತೇನೆ. ಕಳೆದ 1 ವರ್ಷ 9 ತಿಂಗಳಲ್ಲಿ ಗೃಹ

ಇಲಾಖೆ ಮಾಡಿರತಕ್ಕಂಥ ದಾಖಲೆ ಏನೆಂದರೆ, ಅಪರಾಧಗಳ ಸಂಖ್ಯೆ ನೋಡಿದರೆ ತಮಗೆ ಗೊತ್ತಾಗುತ್ತದೆ. October 2014ರವರೆಗೆ ರಾಜ್ಯದಲ್ಲಿ ನಡೆದಿರುವ rape ಸಂಖ್ಯೆ 1056. Dowry harassment 1957. ಅಷ್ಟಲ್ಲದೆ, murder 497. Robbery 784. Totally, October 2014ರವರೆಗೆ 2014–15ನೇ ಸಾಲಿನಲ್ಲಿ 11,625 ಪ್ರಕರಣಗಳಿವೆ. ಇವು ವರದಿಯಾಗಿರತಕ್ಕಂಥವು. ವರದಿಯಾಗದೇ ಇರುವುದು ಇದರ ಹತ್ತು ಪಟ್ಟು ಇರುತ್ತದೆ.

ಶ್ರೀ ಕೆ.ಜೆ. ಜಾರ್ಜ್ (ಗೃಹ ಸಚಿವರು):– ಒಂದು ನಿಮಿಷ ಹೇಳುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ:– ಉತ್ತರ ಕೊಡುವಾಗ ಹೇಳಿ.

ಶ್ರೀ ಕೆ.ಜೆ. ಜಾರ್ಜ್:– ಅವರು ಉತ್ತರ ಕೊಡುತ್ತಾರೆ. ಈ ಅತ್ಯಾಚಾರ ವಿಚಾರ ಮೊದಲಿನಿಂದಲೂ ಹೇಳಿಕೊಂಡೇ ಬಂದಿದ್ದೀರಿ. ನಾನು ಅದಕ್ಕೆ explanation ಕೊಡಲಿಕ್ಕೆ ಸಾಕಷ್ಟು ಪ್ರಯತ್ನ ಮಾಡಿದ್ದೇನೆ. ನಾಳೆ ಪತ್ರಿಕೆಯಲ್ಲಿ ಬರುತ್ತದೆ. ಈಗ ಏನಾಗಿದೆ ಎಂದರೆ, ನಿರ್ಭಯಾ ಕೇಸ್ ಆದಮೇಲೆ IPC 375, 376 ಅನ್ನು amend ಮಾಡಿದ್ದಾರೆ. Rape ಗೆ wider definition ಕೊಟ್ಟಿದ್ದಾರೆ. POCSO Act ತಂದಿದ್ದಾರೆ. ಅದರಲ್ಲಿ 18 ವರ್ಷಗಳ ಕೆಳಗಡೆ ಇರುವವರಿಗೆ ಏನಾದರೂ good touch, bad touch ಎಂದು ಹೇಳಿದ್ದಾರೆ. ಆ bad touch ಆದ ಕೂಡಲೇ ಅದನ್ನು rape ಎಂದೇ consider ಮಾಡಬೇಕು. ಮೊದಲು rape ಎಂದರೆ ಸಾರ್ವಜನಿಕರಲ್ಲಿ ಮತ್ತು ಕೆಲವರಲ್ಲಿ ಅಭಿಪ್ರಾಯ ಏನಿತ್ತು ಎಂದರೆ, intercourse ಆಗಿರಬೇಕು. ಈಗ intercourse ಆಗಬೇಕಾಗಿಲ್ಲ. ಈಗ ಪ್ರತಿಯೊಂದು ವಿಚಾರದಲ್ಲಿಯೂ rape case ಅನ್ನೇ ನಾವು ಮಾಡಬೇಕಾಗಿದೆ. 98% investigation ಮಾಡಿ ನಾವು book

ಮಾಡಿದ್ದೇವೆ. ನೀವು dowry case ಹೇಳುತ್ತೀರಿ. ನಾವು ಮೊದಲನೇ ಬಾರಿಯ meeting ನಲ್ಲಿ ನಾವು, Chief Minister ರವರು ಎಲ್ಲಾ senior officers ಅನ್ನು ಕರೆಸಿ ಏನು ಹೇಳಿದ್ದೇವೆಂದರೆ, ಪ್ರತಿಯೊಂದು complaint ಬಂದರೂ case book ಮಾಡಬೇಕು. ಯಾರಾದರೂ case book ಮಾಡುವಲ್ಲಿ fail ಆದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಅದಕ್ಕೋಸ್ಕರ ಎಲ್ಲಾ case ಗಳೂ book ಆಗುತ್ತಿವೆ. ದಯವಿಟ್ಟು, ಈ ರೀತಿ ಈ ತರಹ ಹೆಚ್ಚು ಬರುತ್ತಿದೆ. ಎಲ್ಲಿ ಹೆಚ್ಚು ಬಂದರೂ ತಪ್ಪಿಲ್ಲ. ನಾವು ಎಲ್ಲಾದರಲ್ಲಿಯೂ ವಿಚಾರಣೆ ಮಾಡಿ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಮಾನ್ಯ ಅಧ್ಯಕ್ಷರ ಮೂಲಕ ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಕೆ.ಜಿ. ಬೋಪಯ್ಯ:- ನೀವು ಗೃಹ ಮಂತ್ರಿಯಾದ ಮೇಲೆ ಕಡಿಮೆ ಆಗಿದೆ ಎಂದು ಲೆಕ್ಕವೇ?

ಶ್ರೀ ಜಗದೀಶ್ ಶೆಟ್ಟರ್:- Complaint ಕೊಡುವುದಕ್ಕೆ ಹೋದರೂ ಎಲ್ಲಿಯೂ ಆಗುತ್ತಿಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಮೊನ್ನೆ ನಾನು ಒಂದು ವಿಷಯವನ್ನು ಪತ್ರಿಕೆಯಲ್ಲಿ ಬಂದದ್ದನ್ನು refer ಮಾಡಿದೆ. ಒಂದು school ನಲ್ಲಿ ಇವತ್ತು ಎಷ್ಟೋ ಜನ ಆ ರೀತಿ harassment, rape ಪ್ರಯತ್ನ ಆದಂಥ ಪ್ರಕರಣ ಇದ್ದಾಗ್ಯೂ ಗೌರವದ ದೃಷ್ಟಿಯಿಂದ ಅವರು complaint ಕೊಡಲಿಕ್ಕೆ ಹೋಗಿಲ್ಲ. ಬಹಳ ಜನ complaint ಕೊಡುತ್ತಾರೆಂದು ನೀವು ಹೇಳುತ್ತೀರಲ್ಲ, ಇನ್ನೂ

ಎಷ್ಟೋ ಜನ complaint ಕೊಡಲಿಕ್ಕೆ ಹೋಗುತ್ತಿಲ್ಲ. ವಾತಾವರಣ ಹಾಗೇ ಇದೆ. Highlight ಆಗಲಿ, ಎಲ್ಲಾ ಆಗಲಿ. ಎಲ್ಲರೂ ಧೈರ್ಯದಿಂದ ಮುಂದೆ ಬರುವುದಿಲ್ಲ. ಅದಕ್ಕೆ ಆ ಭಯಮುಕ್ತವಾದಂಥ ಒಂದು ವಾತಾವರಣ ನಿರ್ಮಾಣ ಮಾಡುವುದು ಆಗಬೇಕು. ರಕ್ಷಣೆ ಕೊಡಬೇಕು. Trial speed up ಮಾಡಿ. ಎಲ್ಲಿಯವರೆಗೆ ಈ ರೀತಿ rape ಮಾಡುವವರು ಇದ್ದಾರಲ್ಲ ಅವರಿಗೆ conviction ಆಗುವುದಿಲ್ಲ, ಅಲ್ಲಿಯವರೆಗೆ ಯಾರಿಗೂ ಹೆದರಿಕೆ ಬರುವುದಿಲ್ಲ. Conviction rate ಕಡಿಮೆ ಇದೆ. ಇನ್ನೂ trial ನಡೆಯುತ್ತಿವೆ. ನೀವು ನೋಡಿ. ಆದರೆ, ಏನೂ ಆಗುವುದಿಲ್ಲ. ನಾನು ಮೊನ್ನೆ refer ಮಾಡಿದೆ. ನಾನು ಅದರ documents ತರಿಸುತ್ತಿದ್ದೇನೆ. ಮೊನ್ನೆ ಹಾಸನದ ವ್ಯಕ್ತಿಯ ಒಬ್ಬ ತಂದೆ ಬರೆದುಕೊಟ್ಟಿದ್ದಾನೆ. ಅಲ್ಲಿಯ ನಿಮ್ಮ ಅಧಿಕಾರಿಗಳು ಮಿಲಾಖ್ ಆಗಿ ಆತನಿಗೆ bail ಕೊಡುಸುವಂಥ ಪ್ರಯತ್ನ ಮಾಡಿದರು. Trial ಇದ್ದದ್ದು ಬಹಳ slow ಆಗುತ್ತಿದೆ. ಹೀಗಾಗಿ, ಆ ರೀತಿ ಇದ್ದಂಥ ವ್ಯಕ್ತಿಗಳಿಗೆ ರಕ್ಷಣೆ ಕೊಡುವಂಥ ಕೆಲಸವನ್ನು ನೀವು ಮಾಡಬೇಕು. ಆ ಭಯದ ವಾತಾವರಣ ಹೋಗದೇ ಇದ್ದರೆ ಇದು ಏನು ಮಾಡಿದರೂ ಸಾಧ್ಯವಿಲ್ಲ. ಆ ರೀತಿಯ ಮುಕ್ತ ವಾತಾವರಣ ಕೊಡಬೇಕು.

ಅಧ್ಯಕ್ಷರು:- ನೀವೂ Advocate ಆಗಿದ್ದವರು. ಅನುಭವವಿದೆ. ನಮ್ಮ Court ಗಳಲ್ಲಿ ಹೇಗೆ trial ನಡೆಯುತ್ತವೆ . . . .

ಶ್ರೀ ಜಗದೀಶ್ ಶೆ ಟ್ಟರ್:- Speed up ಮಾಡಿ. ನಾನು ಮೊನ್ನೆಯೂ ಹೇಳಿದೆ. Governor's address ನಲ್ಲಿ, criminal case ಗಳಲ್ಲಿ 80% acquit

ಆಗುತ್ತವೆ. 10–15% ಮಾತ್ರ conviction ಆಗುತ್ತಿವೆ, ಈ ರೀತಿಯ ಪರಿಸ್ಥಿತಿ ಇದೆ.

ಅಧ್ಯಕ್ಷರು:– ಅದಕ್ಕೆ ತಪ್ಪು ಏನೀದೆ ಎಂದರೆ, ಈ ವ್ಯವಸ್ಥೆಯಲ್ಲಿ ಬದಲಾವಣೆಯಾಗಬೇಕಾದಂಥ ಅಗತ್ಯವಿದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– Definitely.

(ಗೊಂದಲ)

ಅಧ್ಯಕ್ಷರು:– ಈಗ High court ನಲ್ಲಿ judges post ಎಷ್ಟು vacancy ಇವೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– Judges post vacancy ಇವೆ, ಸಾಕ್ಷಿಗಳು ಸರಿಯಾಗಿ ಹೇಳುವುದಿಲ್ಲ. ಸಾಕ್ಷಿಗೆ ಹೊಡೆಯುತ್ತಾರೆ.

(ಗೊಂದಲ)

ಅಧ್ಯಕ್ಷರು:– High court ನಲ್ಲಿ ಎಷ್ಟು pending ಇವೆ ಗೊತ್ತೆ? ಮೊನ್ನೆ ಯಾರೋ ಹೇಳುತ್ತಿದ್ದರು, argument ಆಗಿ ಎರಡು ವರ್ಷಗಳಾದರೂ ಇನ್ನೂ judgment ಕೊಟ್ಟಿಲ್ಲವಂತೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಆಗಿಲ್ಲ ಸಾರ್, ಆಗುತ್ತಿಲ್ಲ. conviction ಆಗದೇ ಇದ್ದರೆ ಹೆದರಿಕೆ ಬರುವುದಿಲ್ಲ. 4 ಜನಕ್ಕೆ conviction ಆದರೆ ಹೆದರಿಕೆ ಬರುವುದು, ಇಲ್ಲದಿದ್ದರೆ ಬರುವುದೇ ಇಲ್ಲ. ನೀವು Fast Track Court ಎಂದು ಹೇಳಿದಿರಿ, ಇಲ್ಲಿಯತನಕ ಎಷ್ಟು Fast track Court ಮಾಡಿದಿರಿ, ಎಷ್ಟು trial ನಡೆಯುತ್ತಿದೆ, ಎಷ್ಟು speedy justice ಸಿಗುತ್ತಿವೆ, ಇದನ್ನೆಲ್ಲಾ ತಾವು ನೋಡಿ ಅದನ್ನು ಮಾಡದಿದ್ದರೆ ಆಗುವುದಿಲ್ಲ.

ಶ್ರೀ ಆರ್. ಅಶೋಕ್:- ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಗೃಹ ಸಚಿವರು ಹೇಳುತ್ತಿದ್ದಾರೆ. ಅವರು ಬಂದ ಮೇಲೆ ಈ ಅತ್ಯಾಚಾರ ಇವೆಲ್ಲಾ ಕಡಿಮೆಯಾಗಿದೆ ಎನ್ನುವ ಭಾವನೆಯಿಂದ ಹೇಳುತ್ತಿದ್ದಾರೆ. ಒಂದು ಸಾರಿ ಅವರು ಅಂಕಿಸಂಖ್ಯೆ ತೆಗೆದು ನೋಡಲಿ. ಪತ್ರಿಕೆಗಳನ್ನು ತೆಗೆದು ನೋಡಲಿ ಆಗ ಅವರಿಗೆ ಗೊತ್ತಾಗುತ್ತದೆ. ಕಳೆದ ಒಂದು ವರ್ಷದಲ್ಲಿ ಯಾವ ರೀತಿ ಅತ್ಯಾಚಾರಗಳು ದಿನನಿತ್ಯ ಬೀದಿಯಲ್ಲಿ ಆಗುತ್ತಿವೆ, ಅದನ್ನು ಯಾವ ರೀತಿಯಾಗಿ highlight ಆಗುತ್ತಿದೆ, ಯಾವ ರೀತಿ ಕರ್ನಾಟಕದ ಮಾನ ಹರಾಜು ಆಗುತ್ತಿದೆ ಎಂಬುದು ಅರ್ಥವಾಗುತ್ತದೆ. ಅಂಗೈ ಹುಣ್ಣಿಗೆ ಕನ್ನಡಿ ಬೇಕೆ? ಇಷ್ಟೆಲ್ಲಾ ಇವರು ಹೇಳಿದ್ದು ನೋಡಿದರೆ, ನಾವು ಕಾನೂನು ಮಾಡಿಬಿಟ್ಟಿದ್ದೇವೆ, ಇದೆಲ್ಲಾ ಕಡಿಮೆಯಾಗಿದೆ, ಕಾನೂನಿಂದ ಜನ ದೂರು ಕೊಡುತ್ತಿದ್ದಾರೆ, ಅದು ಯಾವುದೂ ಇಲ್ಲ. ಮೊದಲಿನಿಂದಲೂ ಜನ ಏನು ಎಚ್ಚರ ಇದ್ದಾರೆ ಆ ಎಚ್ಚರ ಇದ್ದೆ ಇದೆ. Compliant ಏನು ಕೊಡಬೇಕೋ ಆ ಕೊಡುವಂಥ ವ್ಯವಸ್ಥೆ ಏನಿದೆ ಅದು ಮೊದಲಿನಿಂದಲೂ ಪೊಲೀಸ್

ಇಲಾಖೆಯಲ್ಲಿ ಇದೆ. ಈಗೇನು ಹೊಸದಾಗಿ ನಿರ್ಭಯ case ಆದ ಮೇಲೆ ಜಾಸ್ತಿಯಾಗಿದೆ ಎನ್ನುವುದು ಅದು ತಪ್ಪಿಸಿಕೊಳ್ಳುವುದಕ್ಕೆ, ಮರೆ ಮಾಚುವುದಕ್ಕೆ ಹೇಳುತ್ತಿದ್ದಾರೆ ಹೊರತು ಅದರಲ್ಲಿ ಯಾವುದೇ ರೀತಿ ಉರುಳಿಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ:- ಸನ್ಮಾನ್ಯ ಅಧ್ಯಕ್ಷರೆ,

ಶ್ರೀ ಕೆ.ಜೆ. ಜಾರ್ಜ್:- ಕಾರಜೋಳ್ ರವರೆ ಒಂದು ನಿಮಿಷ ಅವರು ಹೇಳಿದ್ದಕ್ಕೆ ಉತ್ತರ ಕೊಟ್ಟು ಬಿಡುತ್ತೇನೆ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜಜೋಳ:- ಅವರು ಉತ್ತರ ಕೊಡುವಾಗ ಕೊಡಲಿ. ನಾನು ಏನು ಮಾತನಾಡಿಲ್ಲ. ಮಾತನಾಡುವುದಕ್ಕಿಂತ ಮುಂಚೆ ಉತ್ತರ ಕೊಟ್ಟರೆ ಹೇಗೆ?

(ಗೊಂದಲ)

ಅಧ್ಯಕ್ಷರು:- ಆಯಿತು ಬಿಡ್ರಿ, ಇದರಲ್ಲಿ ಕಾಲ ಕಳೆಯುವುದು ಬೇಡ. ಬೇಗ ಹೇಳ್ರಿ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:- ಮಾನ್ಯ ಅಶೋಕರವರಿಗೆ ನಾನು ಹೇಳಿದ್ದು ಅರ್ಥವಾಗಲಿಲ್ಲವೆಂದು ಕಾಣುತ್ತದೆ. ನಾನು ಏನು ಹೇಳಿದ್ದೇನೆ, ನಿರ್ಭಯ ಕೇಸ್ ಆದ ಮೇಲೆ 375, 376 amendment ಆದಮೇಲೆ ಹೆಚ್ಚು rape ದ್ದು ಬರುತ್ತಿದೆ, ಕಡಿಮೆಯಾಗಿದೆ ಎಂದು ನಾನು ಹೇಳಲಿಲ್ಲ. ನೀವು ಉದಾಹರಣೆ

ತೆಗೆದುಕೊಳ್ಳಿ, ಇಡೀ National Level ನಲ್ಲಿ ಇದರ rate ಈಗ ಜಾಸ್ತಿಯಾಗಿದೆ. ಈಡೀ ದೇಶದಲ್ಲಿ ಮಧ್ಯಪ್ರದೇಶವೇ highest ಇದೆ.

(ಗೊಂದಲ)

ಶ್ರೀ ಆರ್. ಅಶೋಕ್:- ಬೇರೆ ರಾಜ್ಯದ್ದು ಹೇಳಿದರೆ ಹೇಗೆ? ಚೈನಾದಲ್ಲಿ ಏನಾಗಿದೆ, ಆಫ್ರಿಕಾ ದೇಶದಲ್ಲಿ ಹೀಗೆ ಆಗುತ್ತಿದೆ ಎಂದು ಕೊಟ್ಟರೆ ಅದನ್ನು ನಾವು ಕೇಳಿಸಿಕೊಳ್ಳುತ್ತೇವೆ. ನಮ್ಮ ರಾಜ್ಯದ್ದು ಹೇಳಿ. ನಮ್ಮ ರಾಜ್ಯದಲ್ಲಿ ಏನು, ಬೇರೆ ರಾಜ್ಯಗಳಿಗೆ ಕರ್ನಾಟಕವನ್ನು ಹೋಲಿಕೆ ಮಾಡಬೇಡಿ.

ಶ್ರೀ ಕೆ.ಜೆ. ಜಾರ್ಜ್:- ಒಂದು ನಿಮಿಷ ಕೇಳಿ ಸ್ವಾಮಿ. ನೀವು ಕೇಳಲಿಕ್ಕೆ ತಯಾರಿಲ್ಲವೆಂದರೆ ಹೇಗೆ?

(ಗೊಂದಲ)

ಶ್ರೀ ಆರ್. ಅಶೋಕ್:- ಮೊದಲಿನಿಂದಲೂ ಕರ್ನಾಟಕ ಬೇರೆ ರಾಜ್ಯಗಳಿಗಿಂತ ಎಲ್ಲಾ ರೀತಿಯಿಂದಲೂ ಬಹಳ ಉತ್ತಮವಾದ ಕೆಲಸ ಮಾಡುತ್ತಿದೆ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:- ನೋಡಿ, I.P.C. amend ಆಗಿದ್ದು ನಮ್ಮ ರಾಜ್ಯಕೋಸ್ಕರವಲ್ಲ. ಇಡೀ ರಾಷ್ಟ್ರದಲ್ಲಿ I.P.C amend ಆಗಿರುವುದಕ್ಕಾಗಿ, ಇಂದು ಮಧ್ಯ ಪ್ರದೇಶ, ರಾಜಸ್ಥಾನ, ಡೆಲ್ಲಿ, ಗುಜರಾತ್, ಹೀಗೆ ಇಲ್ಲಿ ಎಲ್ಲಾ ತೆಗೆದುಕೊಂಡು ನೋಡಿ. ಪ್ರತಿಯೊಂದು ಪ್ರದೇಶಗಳಲ್ಲಿಯೂ ಕೂಡ ಇದು ಹೆಚ್ಚಾಗುತ್ತಿದೆ, ಇದು ಹೆಚ್ಚಿಗೆ ಆದ ಕೂಡಲೇ ನಾವು ಒಪ್ಪಬೇಕೆಂದಿಲ್ಲ. ನಾವು

ವಿಚಾರಣೆ ಮಾಡುತ್ತಿದ್ದೇವೆ, ತಪ್ಪಿತಸ್ಥರನ್ನು ಕರೆದುಕೊಂಡು ಬಂದು ಶಿಕ್ಷೆ ಕೊಡಿಸುವಂಥದ್ದನ್ನು ಮಾಡುತ್ತಿದ್ದೇವೆ.

ಶ್ರೀ ಗೋವಿಂದ ಎಂ. ಕಾರಜೋಳ:- ನನಗೆ ಕೊಟ್ಟಿದ್ದ ಸಮಯ ಎಲ್ಲಾ ಅವರೇ ತೆಗೆದುಕೊಂಡು ಬಿಟ್ಟರು.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:- ತಾವು ಸ್ವಲ್ಪ ಕೇಳಿ ಸ್ವಾಮಿ. ನಿಮಗೆ ಪ್ರಶ್ನೆ ಕೇಳಬೇಕು ಉತ್ತರ ನಿಮಗೆ ಬೇಡವೆ?

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:- ಉತ್ತರ ಆಮೇಲೆ ಕೊಡಿ.

ಶ್ರೀ ಕೆ.ಜೆ. ಜಾರ್ಜ್:- ನಿಮಗೆ ಏನು ಆಗಬೇಕು, ಪ್ರಶ್ನೆ ಕೇಳಬೇಕು ನಾಳೆ ದಿವಸ ಅದು ಪತ್ರಿಕೆಯಲ್ಲಿ ಬರಬೇಕು, ಕರ್ನಾಟಕದಲ್ಲಿ rape ಜಾಸ್ತಿಯಾಗಿದೆ ಎಂದು ಬರಬೇಕು, ಇದೆಲ್ಲಾ ನಿಮ್ಮ ಉದ್ದೇಶ?

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:- ನಾನು ಮಾತನಾಡುವರೆಗೆ ಸ್ವಲ್ಪ ಶಾಂತರೀತಿಯಿಂದ ಕೇಳ್ರಿ.

ಶ್ರೀ ಕೆ.ಜೆ. ಜಾರ್ಜ್ ನೀವು ಪ್ರಶ್ನೆ ಕೇಳಿಬಿಟ್ಟು ಉತ್ತರ ಕೇಳಲಿಕ್ಕೆ ತಯಾರಿಲ್ಲವೆಂದರೆ ಹೇಗೆ? ಇವರ ಕಾಲದಲಿ ಅಶೋಕರವರು ಇರುವಾಗ ರಾಮರಾಜ್ಯವಾಗಿತ್ತು. ಯಾವುದೇ rape ಇರಲಿಲ್ಲ, ಡಕಾಯಿತಿ ಇರಲಿಲ್ಲ.

(ಗೊಂದಲ)

ಶ್ರೀ ಆರ್. ಅಶೋಕ:- ಆಗ ರಾಮರಾಜ್ಯವೆ. ಈಗ ಜಾರ್ಜ್‌ರಾಜ್ಯ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:- ನೀವು ಹಾಳು ಮಾಡಿ ಹೋಗಿರುವುದು, ನಾವು ಸುಧಾರಿಸುತ್ತಿದ್ದೇವೆ.

(ಗೊಂದಲ)

ಶ್ರೀ ಆರ್. ಅಶೋಕ:- ಯಾರು ಹಾಳು ಮಾಡಿದರು ಎಂದು ಪತ್ರಿಕೆಗಳನ್ನು ನೋಡಿದರೆ ಗೊತ್ತಾಗುತ್ತದೆ. ಪತ್ರಿಕೆಯಲ್ಲಿ ಗೃಹ ಸಚಿವರು ಹೇಗೆ ಕಾರ್ಯನಿರ್ವಹಿಸುತ್ತಿದ್ದಾರೆಂದು ಹೇಳಿ ಬರುತ್ತಿದೆ.

(ಗೊಂದಲ)

ಶ್ರೀ ಸಿ.ಟಿ. ರವಿ:- ಅಧ್ಯಕ್ಷರೆ, rape ಇವರಿಬ್ಬರೆ ಮಾಡಿದ ಹಾಗೆ ಮಾತನಾಡುತ್ತಿದ್ದರಲ್ಲ.

(ಗೊಂದಲ)

ಅಧ್ಯಕ್ಷರು:- ಕಾರಜೋಳರವರೆ ನೀವು ಹೇಳಿ.

(ಗೊಂದಲ)

ಶ್ರೀ ಸಿ.ಟಿ. ರವಿ:- ಈಗ ಅವರ capacity ಜಾಸ್ತಿ ಇದೆಯೋ ಇವರ capacity ಜಾಸ್ತಿ ಇದೆ ಎನ್ನುವುದಕ್ಕೆ, ಅಶೋಕರವರಿಗಿಂತ ನಿಮ್ಮ capacity ಜಾಸ್ತಿ ಬಿಡಿ ಜಾರ್ಜ್‌ರವರೆ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:- ಚಿಕ್ಕಮಗಳೂರಿನಲ್ಲಿ ಸರಿಯಾಗಿದ್ದರೆ ಸಾಕು ಅಲ್ಲಿ ಗಲಾಟೆ ಮಾಡುವುದಕ್ಕೆ ಹೋಗಬೇಡಿ ಅಷ್ಟೆ. ಈಗ ಅವರು Fast Track Court ವಿಚಾರ ಕೇಳಿದರು. 10 Fasst Track Court ಅನ್ನು sanction ಮಾಡಿ

ಕಳುಹಿಸಿದ್ದೇವೆ. Special Prosecutorನ appoint ಮಾಡಿದ್ದೇವೆ, Chief Justice ರವರನ್ನು ನಾನು ಮತ್ತು Law Minister ಹೋಗಿ meet ಮಾಡಿದ್ದೇವೆ. ಈಗಾಗಲೇ 3 Fast Track Court ಗೆ immediate ಆಗಿ ಕೊಡುತ್ತೇವೆಂದು ಹೇಳಿದ್ದಾರೆ. ಬಾಕಿ ಇರುವುದಕ್ಕೆ attach ಮಾಡಿದ್ದಾರೆ, 10 ಕ್ಕೆ ಕೊಟ್ಟಿದ್ದಾರೆ, ಅದಷ್ಟು ಬೇಗನೆ trial ಮಾಡಿ ಅವರಿಗೆ ಶಿಕ್ಷೆ ಕೊಡಿಸುವಂಥ ಕೆಲಸ ಮಾಡುತ್ತೇವೆ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಮನವಿ ಮಾಡಿ ಈ ಸಾರಿ ರಾಜ್ಯೋತ್ಸವದ ಪ್ರಶಸ್ತಿಯನ್ನು ನಿಮಗೆ ಕೊಡಿಸೋಣ ಬಿಡಿ. ಮಾನ್ಯ ಮುಖ್ಯಮಂತ್ರಿಗಳೇ, ದಯವಿಟ್ಟು ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ, ಅವರಿಗೆ ಪ್ರಶಸ್ತಿ ಕೊಡಿ. ಸನ್ಮಾನ್ಯ ಸಭಾಧ್ಯಕ್ಷರೆ, ನಾನಿನ್ನು ಮಾತನ್ನೆ ಪ್ರಾರಂಭಿಸಿಲ್ಲ ಮೊದಲೇ ಹೀಗೆ ಎದ್ದು ನಿಂತರೆ, ನಾನು ಏನು ಮಾತನಾಡಬೇಕೆಂದು ನನಗೆ ಗೊತ್ತಾಗಲಿಲ್ಲ. 2014–15 ನೇ ಸಾಲಿನ ಗೃಹ ಇಲಾಖೆಯ ಆಡಳಿತದ ಬಗ್ಗೆ ಚರ್ಚೆ ಪ್ರಾರಂಭ ಮಾಡಲಿಕ್ಕಿಚ್ಚಿಸಿದ್ದೇನೆ. ಇನ್ನು ಪ್ರಾರಂಭಿಸಿಲ್ಲ. ಅಕ್ಟೋಬರ್–2014 ರವರೆವಿಗೂ 2014–15 ರಲ್ಲಿ ಒಟ್ಟು ಅಪರಾಧಗಳ ಸಂಖ್ಯೆ:1,75,830. ಇದರಲ್ಲಿ ಮಹಿಳೆಯರ ಮೇಲೆ ಆಗಿರತಕ್ಕಂಥ ದೌರ್ಜನ್ಯಗಳು 11,625. ಇದರಲ್ಲಿ SC/ST ದು ಬಿಟ್ಟಿದ್ದೇನೆ. ಇದರ ಹೊರತು ಪಡಿಸಿ ten times ಹೆಚ್ಚಾಗಿರುತ್ತದೆ. ಅಪರಾಧಗಳು report ಆಗಿರುವುದಿಲ್ಲ, ಜನ Police Station ಗೆ ಬಂದು compliant ಕೊಡುವುದಿಲ್ಲ. ಊರಿನಲ್ಲಿ ನ್ಯಾಯ ಪಂಚಾಯಿತಿ ಮಾಡುವವರು ಬೇರೆ, Police Station agentರು ಬೇರೆ, ಅವರು ಅಲ್ಲಿಯೇ ಬಗೆಹರಿಸಿ ಕಳುಹಿಸಿತಕ್ಕಂಥವರು. ಮತ್ತು PSI ರವರು ರಾಜಿ ಮಾಡತಕ್ಕಂಥದ್ದು ಬೇರೆ, ಈ ಪ್ರಕರಣಗಳನ್ನು ಬಿಟ್ಟು ಆಗಿರತಕ್ಕಂಥದ್ದು. ಅದಕ್ಕೆ ನಾನು ಗೃಹ ಸಚಿವರಿಗೆ ಏನು ಹೇಳುತ್ತೇನೆಂದರೆ, ನಿಮ್ಮ ಕಾಲದಲ್ಲಿ ರಾಮರಾಜ್ಯ ಎಂದು certificate ಕೊಡೋಣ ಏನು ತೊಂದರೆಯಿಲ್ಲ.

(ಗೊಂದಲ)

ಅಧ್ಯಕ್ಷರು:- ಈಗ ರಾಮರಾಜ್ಯ ರಾಮರಾಜ್ಯವೆಂದು ಹೇಳುತ್ತಿರಲ್ಲ ರಾಮನೇ ಹೆಂಡ್ತಿಯನ್ನು ಏಕೆ ಕಾಡಿಗೆ ಕಳುಹಿಸಿದ?

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:- ಅದು ಇರಲಿ ಬಿಡಿ ಸಾರ್. ಈಗ ಅವರು ಹೇಳಿದರು ಎಂದು ನಾನು ಹೇಳಿದೆ. ಇಲ್ಲದಿದ್ದರೆ ನಾನು ಹೇಳುತ್ತಿರಲಿಲ್ಲ.

(ಗೊಂದಲ)

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:- ರಾಮನ ಧರ್ಮ ಪತ್ನಿಯೇ ಹೋಗಿಬಿಟ್ಟಳೆಂದು ಈಗೇನು ತಾವು ಹೇಳಿದಿರಲ್ಲ, ನಮ್ಮ ಕ್ಷೇತ್ರದಲ್ಲಿ ಒಂದು ಹೆಣ್ಣು ಮಗಳು ಅಪಹರಣ ಆಗಿ ಆರು ತಿಂಗಳಾಯಿತು, ಇನ್ನೂ ಪೊಲೀಸ್‌ನವರಿಗೆ ಪತ್ತೆ ಹಚ್ಚಲಿಕ್ಕೆ ಆಗಿಲ್ಲ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು:- ನೀವು ಬಚ್ಚಿಟ್ಟರೆ, ಅವರು ಹೇಗೆ ಪತ್ತೆ ಹಚ್ಚುತ್ತಾರೆ.

(ಗೊಂದಲ)

ಅಧ್ಯಕ್ಷರು:- ನೀವು ಹೇಳಿ.

ಶ್ರೀ ಗೋವಿಂದ ಎಂ. ಕಾರಜೋಳ:- 2012 ನೇ ಸಾಲಿನಲ್ಲಿ ಅಪರಾಧ ಪ್ರಕರಣಗಳು 20,843 ಆಗಿದ್ದರೆ ಮಾನ್ಯ ಜಾರ್ಜ್‌ರವರ ಆಡಳಿತದಲ್ಲಿ 22,667 ಆಗಿವೆ. ಅಂದರೆ ಹೆಚ್ಚಾಯಿತೋ ಕಡಿಮೆಯಾಯಿತೋ ನನಗೆ ಗೊತ್ತಾಗಲಿಲ್ಲ. ಅಶೋಕ ರವರ ಆಡಳಿತದಲ್ಲಿ ಆಯಿತೋ ಜಾರ್ಜ್‌ರವರ ಆಡಳಿತದಲ್ಲಿ ಆಯಿತೋ ನನನಗೆ ಗೊತ್ತಿಲ್ಲ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:- ಕಾರಜೋಳರವರೆ, latest ಮಾಹಿತಿ ಇದೆ ನಿಮಗೆ ಕೊಡುತ್ತೇನೆ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:- ನನ್ನ ಹತ್ತಿರವೂ ಮಾಹಿತಿ ಇದೆ. ನಾನು ಮಾಹಿತಿ ತಂದಿದ್ದೇನೆ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:- ನನ್ನ ಹತ್ತಿರ ಇರುವ ಪ್ರಕಾರ..

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:- ಕಳುಹಿಸಿ ಕೊಡಿ, ಉತ್ತರ ಕೊಡುವಾಗ ಕಳುಹಿಸಿ ಕೊಡಿ, ನೀವು ಉತ್ತರ ಕೊಡುವಾಗ ಕೊಡಿ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:- ನನ್ನ ಇಲಾಖೆಯ ಮೇಲೆ ಹೇಳಿದರು ಅದಕ್ಕೆ ನಾನು ಹೇಳಬೇಕಾಯಿತು.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:- ನಾನು ಎಲ್ಲಾ ಇಲಾಖೆಗಳು ಸೇರಿದಂತೆ ಸರ್ಕಾರದ ಮೇಲೆ ಹೇಳುತ್ತಿದ್ದೇನೆ. ಸರ್ಕಾರದ ಆಡಳಿತ Law and Order ಪರಿಸ್ಥಿತಿ ಸರಿಯಿಲ್ಲ.

(ಗೊಂದಲ)

ಶ್ರೀ ಕೆ.ಜಿ. ಬೋಪಯ್ಯ:- ನಿಮ್ಮ ಇಲಾಖೆಯ ಮೇಲೆ ಚರ್ಚೆ ಮಾಡುವುದು ಬೇಡ ಎಂದು ಹೇಳಿಬಿಡಿ.

(ಗೊಂದಲ

ಶ್ರೀ ಗೋವಿಂದ ಎಂ. ಕಾರಜೋಳ:– ಜನ ಹೇಳುತ್ತಿದ್ದಾರೆ ನಾನು ಹೇಳುತ್ತಿಲ್ಲ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:– Record ನಲ್ಲಿ ತಪ್ಪು ಮಾಹಿತಿ ಹೋಗಬಾರದು.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:– ತಪ್ಪು ಮಾಹಿತಿ ಹೋಗುವುದಿಲ್ಲ, ನೀವು ಉತ್ತರ ಕೊಟ್ಟ ಮೇಲೆ correction ಆಗುತ್ತದೆ, ನಿಮ್ಮ ಉತ್ತರ ಆದ ಮೇಲೆ automatic ಆಗಿ ಅದು correction ಆಗುತ್ತದೆ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:– ಒಂದೊಂದು ಇಲಾಖೆಯ ಮೇಲೆ ಅವರು ಉತ್ತರ ಕೊಡಲಿಕ್ಕೆ ಆಗುವುದಿಲ್ಲ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:– ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಬಡವರು, ಮಧ್ಯಮ ವರ್ಗದವರು, ಪರಿಶಿಷ್ಟ ಜಾತಿ ಜನಾಂಗದವರು, ಅಲ್ಪಸಂಖ್ಯಾತರು ನೆಮ್ಮದಿಯಿಂದ ಬಾಳುವುದಕ್ಕೆ ಆಗಬೇಕಲ್ಲವೆ? ಅದು ಆಗುತ್ತಿಲ್ಲ. ಏನಾಗಿದೆ ಎಂದರೆ, ಆಡಳಿತದಲ್ಲಿ ಎಲ್ಲಿ ವೈಫಲ್ಯ ಆಗಿದೆ ಎಂದರೆ, ಈ police ಅಧಿಕಾರಿಗಳನ್ನು ನೇಮಕ ಮಾಡುತ್ತಿರಲ್ಲ, ನೇಮಕ ಮಾಡುವುದರಲ್ಲಿ ಬಹಳಷ್ಟು corruption ಆಗುತ್ತಿದೆ. ಒಬ್ಬ Police Sub–Inspector ಒಂದು Police Station ಗೆ report ಮಾಡಬೇಕಾದರೆ ಮೂರು ಹಂತದಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ. ದಯವಿಟ್ಟು, ನಾನು ಗೃಹ ಸಚಿವರು corrupt ಎಂದು ಹೇಳುತ್ತಿಲ್ಲ. ಮೂರು ಹಂತದಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ. ಒಬ್ಬ Sub Inspector ಬರಬೇಕಾದರೆ ಮೂರು ಹಂತದಲ್ಲಿ 15 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಒಂದು Police Station ಗೆ ಬಂದು

ಕುಳಿತ ಎಂದರೆ ಅವನು ಏನು ಮಾಡಲಿಕ್ಕೆ ಸಾಧ್ಯವಿದೆ? ಅದು ಅವನಿಗೆ ಇರುವುದು ಒಂದೇವರ್ಷ.

(ಗೊಂದಲ)

ಶ್ರೀ ಜಿ.ಟಿ. ಪಾಟೀಲ್:– ಕಾರಜೋಳ್‌ರವರೆ, ದಯಮಾಡಿ ಆ ಮೂರು ಹಂತ ಯಾವುದೆಂದು ಹೇಳಿ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:– please, ನಾನು ಹೇಳುತ್ತೇನೆ. ನಾನು personal ಆಗಿ ಜಾರ್ಜ್‌ರವರಿಗೂ ಹೇಳಿದ್ದೇನೆ.

(ಗೊಂದಲ

ಶ್ರೀ ಸಿದ್ದರಾಮಯ್ಯ:– ಎಲ್ಲೆಲ್ಲಿ ಆ ಮೂರು ಹಂತ?

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:– ನಾನು ಹೇಳುತ್ತೇನೆ ಸಾರ್. ದಯಮಾಡಿ ನಾನು ಹೇಳುತ್ತೇನೆ. ನನ್ನ ಕ್ಷೇತ್ರದ್ದೆ ಬೇಕಾದರೆ ಹೇಳಿ ಬಿಡುತ್ತೇನೆ. ಉಳಿದಿದ್ದು ಬೇಡ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ನೀವು ಅವರಿಗೆ writing ನಲ್ಲಿ ಕೊಡಿ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:– ಅವರಿಗೆ ನಾನು ಸ್ವತಃ ಹೋಗಿ ಹೇಳಿದ್ದೇನೆ. ನಾನು writing ನಲ್ಲಿಯೂ ಕೊಡುತ್ತೇನೆ. ಅದಕ್ಕೆ ಈ ರೀತಿಯಾದರೆ ಸುಧಾರಣೆ ಮಾಡಲಿಕ್ಕೆ ಸಾಧ್ಯವಿಲ್ಲ. ಕೆಲವು ಸೋತವರಿಗೂ ಉಂಬಳಿ ಹಾಕಿ ಕೊಟ್ಟು ಬಿಟ್ಟಿದ್ದಾರೆ, ಸೋತವರಿಗೆ ಅವರು posting

ಮಾಡಿಸುವುದು transfer ಮಾಡಿಸುವುದು ಉದ್ಯೋಗವಾಗಿಬಿಟ್ಟಿದೆ. ಅವರು ಒಂದು ವರ್ಷದ ನಂತರ ..

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:- ಕಾರಜೋಳರವರು ಈ ರೀತಿಯಾಗಿ.,

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:- ನೀವು ಉತ್ತರ ಹೇಳುವಾಗ ಹೇಳಿ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:- ಉತ್ತರ ಹೇಳುವಾಗ ಮಾನ್ಯ ಮುಖ್ಯಮಂತ್ರಿಗಳು ಇಡೀ State ವಿಚಾರ ಮಾತನಾಡಬೇಕಾಗುತ್ತದೆ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:- ನಾನು yield ಆಗಿಲ್ಲ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:- ಇಲ್ಲಿ ಕೇಳಿ, ನಮಗೆ ಒಂದು system ಇದೆ. PEB Board ನವರು upto DSP ತನಕ DGP ಕೆಳಗಡೆ ಒಂದು Board ಇದೆ ಅವರು ತೆಗೆದುಕೊಳ್ಳುತ್ತಾರೆ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು):- ನೀವು ಹೇಳುತ್ತಿರುವುದು ನೇರವಾಗಿ I.G. ಮತ್ತು S.P.ಯವರ ಮೇಲೆ ಬರುತ್ತದೆ. ಅವರುಗಳು Sub-Inspectorಗಳನ್ನು ನೇಮಕ ಮಾಡುವವರು ಆಗಿದ್ದಾರೆ. ನೇಮಕಾತಿಯ ಸಂಬಂಧ ಯಾರಾದರೂ ದುಡ್ಡನ್ನು ಕೊಟ್ಟಿದ್ದರೆ ಅದಕ್ಕೆ

ಸಂಬಂಧಪಟ್ಟಂತೆ ದಾಖಲೆಯನ್ನು ಕೊಡಿ. ನೀವು ಯಾವತ್ತೋ ಬಂದು ಹೇಳಿದ್ದೀರಿ, ನೀವು ದಾಖಲೆಯನ್ನು ನನಗೆ ಕೊಡಲೇ ಇಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ:– D.D.ಯನ್ನು ಕೊಟ್ಟಿರುವ ದಾಖಲೆ ಇಲ್ಲವೇ?

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:– ನೀವು ನನಗೆ ಯಾವ ದಾಖಲೆಯನ್ನು ಕೊಡಲೇ ಇಲ್ಲ. ನೀವು ದಾಖಲೆಯನ್ನು ಕೊಡಿ immediate ಆಗಿ enquiry ಮಾಡಿಸಿಬಿಡುತ್ತೇನೆ.

(ಗೊಂದಲ)

ಶ್ರೀ ಸಿ.ಟಿ. ರವಿ:– ಲೋಕಾಯುಕ್ತದವರು raid ಮಾಡಿದ್ದಾರಲ್ಲಾ ಅವರನ್ನು ನೀವು ಏನು ಮಾಡಿದ್ದೀರಿ?

ಶ್ರೀ ಕೆ.ಜೆ. ಜಾರ್ಜ್:– ದಯವಿಟ್ಟು, ನೀವು ಇದನ್ನು ರಾಜಕೀಯ ಭಾಷಣ ಮಾಡುವುದಕ್ಕೆ ಹೋಗಬೇಡಿ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:– ಇದು ರಾಜಕೀಯವಲ್ಲ. ನಾನು ಯಾವಾಗಲೂ ಅಸತ್ಯವನ್ನು ನುಡಿಯುವುದಿಲ್ಲ. ಸತ್ಯವನ್ನೇ ಮಾತನಾಡುತ್ತೇನೆ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:– ಒಂದು ದಿವಸ ನೀವು ನನಗೆ ... ಒಂದು receipt ಕೊಟ್ಟಿಲ್ಲ. ದಾಖಲಾತಿಯನ್ನು ಕೊಟ್ಟಿದ್ದೇನೆ ಎಂದು ಹೇಳಿದರೆ ಇದು ಯಾವ ನ್ಯಾಯ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:- ನೀವು ನನಗೆ ಯಾವುದನ್ನು ಕೊಟ್ಟಿರುವುದಿಲ್ಲ. ಮಾನ್ಯ ಬಸವರಾಜಬೊಮ್ಮಾಯಿರವರೆ ನೀವು ಸುಮ್ಮನೆ ಮಾತನಾಡುವುದಕ್ಕೆ ಹೋಗಬೇಡಿ. ನಾವು ಪಾರದರ್ಶಕವಾದ ದಕ್ಷವಾದ ಆಡಳಿತವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ನಿಮ್ಮ ಕಾಲದಲ್ಲಿ IG ಮತ್ತು S.P.ಗಳನ್ನು ಕೊಟ್ಟಿದ್ದೀರಿ.

ಶ್ರೀ ಬಸವರಾಜ ಬೊಮ್ಮಾಯಿ:- ಎಲ್ಲಾ ಕಾಲದಲ್ಲಿಯೂ I.G. ಮತ್ತು S.P.ಗಳು ಇದ್ದಾರೆ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:- ನಿಮ್ಮ ಕಾಲದಲ್ಲಿ ಏನು ಮಾಡಿದ್ದೀರೆಂದು ನನಗೆ ಗೊತ್ತಿದೆ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ:- ನಿಮ್ಮ ಕಾಲದಲ್ಲಿ ನಡೆಯುತ್ತಿರುವುದನ್ನು ಹೇಳಿ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ:- ಹಿಂದಿನವರು ತಪ್ಪು ಮಾಡಿದ್ದಾರೆಂದು ಅದೇ ರೀತಿಯಾಗಿ ಅದನ್ನು ನೀವು ಮುಂದುವರೆಸಿಕೊಂಡು ಹೋಗುತ್ತೀರಾ?

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:- ನಾವು ತಪ್ಪು ಮಾಡುತ್ತಿಲ್ಲವೆಂದು ಧೈರ್ಯವಾಗಿ ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ:- ನೀವು shelter ತೆಗೆದುಕೊಳ್ಳುವುದಕ್ಕೆ ಹೋಗಬೇಡಿ. ನಿಮ್ಮ ಆಡಳಿತದ ವೈಫಲ್ಯವನ್ನು ಹೇಳುತ್ತಿದ್ದೇವೆ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:- ಯಾರಿಗೆ ದುಡ್ಡು ಕೊಟ್ಟಿದ್ದಾರೆ, ನನಗೆ ತಾವು ದಾಖಲೆಯನ್ನು ಕೊಡಿ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ:- ನೀವು ಈ ಬಗ್ಗೆ ನಿರಾಕರಣೆಯನ್ನು ಮಾಡಿ.

(ಗೊಂದಲ)

ಶ್ರೀ ಸಿ.ಟಿ. ರವಿ:- ಲೋಕಾಯುಕ್ತದವರು raid ಮಾಡಿ ದಾಖಲೆ ಸಹಿತ ಹಿಡಿದರಲ್ಲಾ ನೀವು ಎಸ್.ಪಿಯವರಿಗೆ ನೀವು ಏನು ಮಾಡಿದ್ದೀರಿ? ನಿಮ್ಮ ಕೈಯಲ್ಲಿ ನಾವು ದಾಖಲೆಗಳನ್ನು ಕೊಡಬೇಕು.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:- ಯಾರು ತಪ್ಪು ಮಾಡಿದ್ದಾರೆ ಇದಕ್ಕೆ ಸಂಬಂಧಪಟ್ಟಂತೆ ನೀವು ದಾಖಲೆಯನ್ನು ಕೊಡಿ ನಾವು ಅವರ ಮೇಲೆ action ತೆಗೆದುಕೊಳ್ಳುತ್ತೇವೆ.

ಶ್ರೀ ಸಿ.ಟಿ. ರವಿ:- ಲೋಕಾಯುಕ್ತ ಎಸ್.ಪಿ.ಯವರಾದ ಶ್ರೀ ಮಹೇಶ್‌ರವರು 1100 ದಾಖಲೆಗಳನ್ನು ಹಿಡಿದಿದ್ದರಲ್ಲಾ ನೀವು ಅವರಿಗೆ ಏನು ಮಾಡಿದ್ದೀರಿ? ನೀವು ಅವರನ್ನು ರಕ್ಷಣೆ ಮಾಡುವುದಕ್ಕಾಗಿ ಏನು ಮಾಡಿದ್ದೀರಿ, ಅವರನ್ನು transfer ಮಾಡಿದ್ದೀರಿ. ನೀವು ಕಳ್ಳರನ್ನು ರಕ್ಷಣೆ ಮಾಡಿದಿರಿ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:- ಒಂದು ನಿಮಿಷ ತಾವು ಕೇಳಿ.

ಶ್ರೀ ಸಿ.ಟಿ. ರವಿ:- ನಿಮ್ಮ ಕೈಯಲ್ಲಿ ನಾವು ದಾಖಲೆಗಳನ್ನು ಕೊಡಬೇಕಾ? ನಿಮಗೆ ಇನ್ನೇನು ದಾಖಲೆ ಬೇಕು?

(ಗೊಂದಲ

ಶ್ರೀ ಕೆ.ಜೆ. ಜಾರ್ಜ್:- ನೋಡಿ, ಶ್ರೀ ಮಹೇಶ್‌ರವರು ಒಳ್ಳೆಯ Officer ಆಗಿದ್ದಾರೆ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:- Terrorist ವಿಚಾರವನ್ನು ಮಾತನಾಡುತ್ತೀರಲ್ಲ, ಅಂಥ ಒಳ್ಳೆಯ officer ಅನ್ನು Terrorist dutyಗೆ ಹಾಕಿದ್ದೇವೆ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:- ನೀವು ಹೇಗೆ ಕಳೆದ 6 ತಿಂಗಳಿಂದ ಆಡಳಿತವನ್ನು ನಡೆಸಿದ್ದಾರೆಂಬ ಬಗ್ಗೆ ದೆಹಲಿಯ ಜನರು ಉತ್ತರವನ್ನು ಕೊಟ್ಟಿದ್ದಾರೆ. ನೀವು ಏನು ಭಾರಿ ಮಾತನಾಡುತ್ತಿದ್ದೀರಿ.

ಶ್ರೀ ಆರ್. ಅಶೋಕ್:- ಮಾನ್ಯ ಅಧ್ಯಕ್ಷರೆ, ತಾವು ಕಾರಜೋಳರವರಿಗೆ ಮಾತನಾಡುವುದಕ್ಕೆ ಹೇಳಿದ್ದೀರಿ. ಈಗ ಮಾನ್ಯ ಕಾರಜೋಳರವರು ಮಾತನಾಡಲಿ. ಅವರು ಮಾತನಾಡಿದ ನಂತರ ಮಾನ್ಯ ಸಚಿವರು ಉತ್ತರವನ್ನು ಕೊಡುವುದಕ್ಕೆ ಸಮಯವನ್ನು ಕೊಡಿ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:- ಮಾನ್ಯ ಸಚಿವರು ಉತ್ತರ ಕೊಟ್ಟ ಮೇಲೆಯೇ ನಾನು ಮಾತನಾಡುತ್ತೇನೆ.

ಶ್ರೀ ಆರ್. ಅಶೋಕ್:- First ಮಾನ್ಯ ಸಚಿವರು ಉತ್ತರವನ್ನು ಕೊಡಲಿ ಆಮೇಲೆ ಮಾನ್ಯ ಕಾರಜೋಳರವರು ಮಾತನಾಡಿಲಿ. ಇಲ್ಲವೇ, ಮಾನ್ಯ ಕಾರಜೋಳರವರು ಮಾತನಾಡಿದ ನಂತರ ಮಾನ್ಯ ಸಚಿವರು ಉತ್ತರವನ್ನು ಕೊಡಲಿ. ಮಾನ್ಯ ಸಭಾಧ್ಯಕ್ಷರೆ, ಯಾವುದಾದರೂ ಒಂದು ಮಾಡಲಿ ಇವರು ಮಾತನಾಡುವುದು ಮಾನ್ಯ ಸಚಿವರು ಉತ್ತರ ಕೊಡುವುದು ಬರಿ debate ಆಗಿಬಿಡುತ್ತದೆ.

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು):– ಮಾನ್ಯಸದಸ್ಯರು ಬಹಳ senior ಸದಸ್ಯರಾಗಿದ್ದಾರೆ. ಸದನದಲ್ಲಿ ಗೊಂದಲವನ್ನುಂಟು ಮಾಡುವ ರೀತಿಯಲ್ಲಿ ಮಾತನಾಡಬಾರದು. ನೀವು senior member ಆಗಿದ್ದೀರಿ. ಸಭೆಯಲ್ಲಿ ಬೇರೆ ರೀತಿಯಲ್ಲಿ ಪ್ರಚೋದನೆ ಕೊಡುವಂತಹ ರೀತಿಯಲ್ಲಿ ಮಾತನಾಡಬಾರದು.

ಶ್ರೀ ಬಸವರಾಜ ಬೊಮ್ಮಾಯಿ:– ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಕಾರಜೋಳರವರು ನಿಮ್ಮ ಹೆಸರನ್ನು ತೆಗೆದುಕೊಂಡು ಮಾತನಾಡಲಿಲ್ಲ. ಇರುವಂತಹ ವ್ಯವಸ್ಥೆಯ ಬಗ್ಗೆ ಅವರು ಹೇಳಿದ್ದಾರೆ. ಇದು ಇವತ್ತು ಇದೆಯೋ ನಿನ್ನೆ ಇದೆಯೋ ನಿನ್ನೆ ಬೇಡ. "ಕುಂಬಳಕಾಯಿ ಕಳ್ಳ ಎಂದರೆ ನೀವು ಎತಕ್ಕಾಗಿ ಹೆಗಲಮುಟ್ಟಿ ನೋಡಿಕೊಳ್ಳುತ್ತೀರಾ" ದಯವಿಟ್ಟು ತಾವು ಉತ್ತರ ಕೊಡುವಾಗ ಕೊಡಿ. ಇಲ್ಲಿ ಸತ್ಯವನ್ನು ಹೇಳಿದರೆ ಸಿಟ್ಟಿಗೆದ್ದು ನೀವು ಏತಕ್ಕಾಗಿ ಹಾಗೆ ಮಾತನಾಡುತ್ತೀರಿ?

ಶ್ರೀ ಕೆ.ಜೆ. ಜಾರ್ಜ್:– ಮಾನ್ಯ ಬಸವರಾಜ ಬೊಮ್ಮಾಯಿಯವರೆ, ಕುಂಬಳಕಾಯಿ ಯಾರು ಕದ್ದಿದ್ದಾರೆ ಅವರು ತಲೆಯನ್ನು ಮುಟ್ಟಿಕೊಳ್ಳುತ್ತಾರೆಯೇ ಹೊರತು ಕುಂಬಳಕಾಯಿಯನ್ನು ಕದ್ದು ನಿಮ್ಮಲ್ಲಿಯ ಜನರು ಸಿಕ್ಕಿಹಾಕಿಕೊಂಡಿರುವುದು.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ:– ಮಾನ್ಯ ಸಚಿವರೇ, ನಾನು ನಿಮ್ಮ ಬಗ್ಗೆ ಹೇಳುತ್ತಿಲ್ಲ. ನೀವು ಏಕೆ ಹೀಗೆ ಮಾಡುತ್ತಿದ್ದೀರಾ? ಮಾನ್ಯ ಕಾರಜೋಳರವರು ನಿಮ್ಮ ಹೆಸರನ್ನು ತೆಗೆದುಕೊಂಡು ಮಾತನಾಡಲಿಲ್ಲ.

ಶ್ರೀ ಕೆ.ಜೆ. ಜಾರ್ಜ್:– ನನಗೆ ಎಲ್ಲವೂ ಗೊತ್ತಿದೆ. ದೆಹಲಿಯಲ್ಲಿ 8 ತಿಂಗಳಿಂದ ಆಡಳಿತವನ್ನು ನಡೆಸಿದ್ದೀರಿ. ಇವತ್ತು ಏನಾಗಿದೆ ನೋಡಿ. ಜನರು ಯಾವ ರೀತಿ ಇದ್ದಾರೆ ನೋಡಿ.

(ಗೊಂದಲ)

ಶ್ರೀ ಆರ್. ಅಶೋಕ:- ನಿಮ್ಮದು Zero ಆಗಿದೆ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:- ನೀವು ಸುಮ್ಮನೆ ಏತಕ್ಕಾಗಿ ಮಾತನಾಡುತ್ತೀರಾ?

(ಗೊಂದಲ)

ಅಧ್ಯಕ್ಷರು:- ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು:- ಸಾಕು, ತಾವು ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಆರ್. ರಾಮಲಿಂಗಾರೆಡ್ಡಿ (ಮಾನ್ಯ ಸಾರಿಗೆ ಸಚಿವರು):- ನಮಗೆ ಏನೋ ಸೊನ್ನೆ ಬಂದಿದೆ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್:- ನಾವು ಯಾವ ರೀತಿಯಾಗಿ ಉತ್ತರವನ್ನು ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಿಗೆ ಗೊತ್ತಿದೆ.

(ಗೊಂದಲ)

ಅಧ್ಯಕ್ಷರು:- ಕುಳಿತುಕೊಳ್ಳಿ, please resume. ಮಾನ್ಯ ಕಾರಜೋಳರವರೆ ತಾವು ಮಾತನಾಡಿ.

ಶ್ರೀ ಎನ್.ಹೆಚ್. ಕೋನರೆಡ್ಡಿ:- ದೆಹಲಿಯಲ್ಲಿ ಇಬ್ಬರು ಸೋತಿದ್ದೀರಿ ಇಲ್ಲಿ ಏತಕ್ಕಾಗಿ ಚರ್ಚೆ ಮಾಡುತ್ತೀರಿ?

ಶ್ರೀ ಪ್ರಮೋದ್ ಮಧ್ವರಾಜ್:- ನೀವು 60 ಇದ್ದದ್ದು ಈಗ 3ಕ್ಕೆ ಬಂದಿದ್ದೀರಿ.

ಶ್ರೀ ಗೋವಿಂದ ಎಂ. ಕಾರಜೋಳ:- ಮಾನ್ಯ ಅಧ್ಯಕ್ಷರೆ, ಸರ್ಕಾರವನ್ನು ನಡೆಸುವವರು patienceನಿಂದ ಕೇಳಿ ನಗುನಗುತ್ತಾ ಉತ್ತರವನ್ನು ಕೊಡಬೇಕು. ನೀವು ಮಾತಿನ ಮಧ್ಯೆ ಎದ್ದುನಿಂತುಕೊಂಡು ಮಾತನಾಡಿದರೆ ಹೇಗೆ? ಇದಕ್ಕೆ ನಾವು ಏನು ಹೇಳೋಣ. ಜಾರ್ಜ್‌ರವರೆ, ನಾವು ಮಾತನಾಡಬೇಡಿ ಎಂದು ಹೇಳಿದರೆ ನಾವು ಮಾತನಾಡುವುದನ್ನು ಬಿಡುತ್ತೇವೆ. ನೀವು ನಾವು ಹೇಳಿರುವುದನ್ನು ಸರಿಪಡಿಸಿಕೊಂಡು ನಮಗೆ ಉತ್ತರ ಕೊಟ್ಟರೆ ನಾವು ಖುಷಿಪಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧಪಕ್ಷದ ನಾಯಕರು):- ತಾವುಗಳು ತಾಳ್ಮೆಯಿಂದ ಕೇಳಿ. ಮತ್ತು ಪುನಃ interveneಆಗುವುದು ಬೇಡ.

ಶ್ರೀ ಕೆ.ಜೆ. ಜಾರ್ಜ್:- ಒಂದು ಸಾರಿ ನಾನು ನಗಾಡಿ ಉತ್ತರ ಕೊಟ್ಟಿದ್ದಕ್ಕೆ ಮಾನ್ಯ ಸುರೇಶ್ ಕುಮಾರ್‌ರವರು ಅದನ್ನೇ ದೊಡ್ಡದು ಮಾಡಿದರು. ನಗುತ್ತಾ ಉತ್ತರ ಕೊಟ್ಟರೆ ಅದು ತಪ್ಪು, Serious ಆಗಿ ಉತ್ತರವನ್ನು ಕೊಟ್ಟರೆ ಅದು ತಪ್ಪು, ನಾನು ಅಳುತ್ತಾ ಉತ್ತರವನ್ನು ಕೊಡಬೇಕೇ?

(ಗೊಂದಲ)

ಶ್ರೀ ಎನ್.ಹೆಚ್. ಕೋನರೆಡ್ಡಿ:- ಮಾನ್ಯ ಅಧ್ಯಕ್ಷರೆ, ಇವತ್ತು ಸದನ ಸ್ವಲ್ಪ tense ಆಗಿದೆ. ದೆಹಲಿಯಲ್ಲಿ ಎರಡಕ್ಕೂ ಕೈಬಿಟ್ಟಿದ್ದಾರೆ ಇಲ್ಲಿ ದೊಡ್ಡ ಚರ್ಚೆಯಾಗುತ್ತಿದೆ. ಇಲ್ಲಿ tension ಯಾರು ತೆಗೆದುಕೊಳ್ಳುವುದಕ್ಕೆ ಹೋಗಬೇಡಿ. ಇಲ್ಲಿ ಆರಾಮವಾಗಿ ಹೋಗಿ.

ಒಬ್ಬ ಮಾನ್ಯ ಸದಸ್ಯರು:- ಮಾನ್ಯ ಕೋನರೆಡ್ಡಿಯವರೆ ಕರ್ನಾಟಕದಲ್ಲಿ ಏನಾಗಿದೆ ಅದನ್ನು ನೋಡಿ.

ಅಧ್ಯಕ್ಷರು:- ಮಾನ್ಯ ಸದಸ್ಯರುಗಳು ಚರ್ಚೆ ಮಾಡುವಾಗ ಸಾಧ್ಯವಾದಷ್ಟು ಮಟ್ಟಿಗೆ ಬೇರೆಯವರು ಪ್ರವೇಶ ಮಾಡದ ರೀತಿಯಲ್ಲಿ ಸೊಗಸಾಗಿ ಸುಂದರವಾಗಿ ಹೇಳಬೇಕು.

ಶ್ರೀ ಗೋವಿಂದ ಎಂ. ಕಾರಜೋಳ:- ನಾನು ಅದೇ ತರಹ ಹೇಳಿದ್ದೇನೆ. ಅದನ್ನು ಬಿಟ್ಟು ನಾನು ಏನೂ ಹೇಳಲಿಲ್ಲ. ನಾವು ಬಿಜಾಪುರದ ಹಿಂದುಳಿದ ಪ್ರದೇಶದಿಂದ ಬಂದವರಾಗಿದ್ದೇವೆ. ಶಿವಮೊಗ್ಗದವರ ತರಹ ನಮಗೆ ಸೂಕ್ಷ್ಮವಾಗಿ ಮಾತನಾಡುವುದಕ್ಕೆ ಬರುವುದಿಲ್ಲ. ಸಾಹಿತ್ಯ ಭಾಷೆಯ ತರಹ ಮಾತನಾಡುವುದಕ್ಕೆ ಬರುವುದಿಲ್ಲ. ಕೊಡಗಿನವರಹಾಗೆ ಸೂಕ್ಷ್ಮತೆ ನಮ್ಮಲ್ಲಿ ಇಲ್ಲ.

ಅಧ್ಯಕ್ಷರು:- ಕೆ.ವಿ. ಪುಟ್ಟಪ್ಪನವರು ಹೇಳಿರುವ ಕೆಲವು ವಾಕ್ಯಗಳನ್ನು ಪುಸ್ತಕ ಮಾಡಿದ್ದೇನೆ. ನಿಮಗೆಲ್ಲಾ ಅದನ್ನು ಎಲ್ಲರಿಗೂ ಕಳುಹಿಸಿಕೊಡುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ:- ಇವತ್ತು ಸರ್ಕಾರವು ಉತ್ತಮವಾದಂತಹ ಆಡಳಿತವನ್ನು ಕೊಡಬೇಕೆನ್ನುವಂತಹ ದೃಷ್ಟಿಯಿಂದ ಸಲಹೆಸೂಚನೆಗಳನ್ನು ಮತ್ತು ಆಗಿರುವಂತಹ ಲೋಪದೋಷಗಳನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಮಾನ್ಯ ಸಭಾಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿಯೇ 843 accidentಗಳು ಆಗಿವೆ. ಇದರಿಂದಾಗಿ ಸುಮಾರು 357 ಜನರು ಸತ್ತು ಹೋಗಿದ್ದಾರೆ. Accident ಮಾಡಿದವರು ವಾಹನಗಳನ್ನು ಹಾಯಿಸಿಕೊಂಡುವ್ಯಕ್ತಿ ಸತ್ತು ಹೋಗಿದ್ದಾರೆ. ಇವತ್ತಿಗೂ ಈ ಬಗ್ಗೆ detection ಮಾಡುವುದಕ್ಕಾಗಿರುವುದಿಲ್ಲ. ಕಳೆದ 4 ವರ್ಷದಲ್ಲಿ ಸುಮಾರು 47 ಮಂದಿ... ನಿಮ್ಮ periodದ್ದು ಹೇಳಿ ಎಂದರೆ ಹೇಳುತ್ತೇನೆ. ನಿಮ್ಮ periodನಲ್ಲಿ October 2013 ರಲ್ಲಿ 65 ಆಗಿದೆ. ಈ ವರ್ಷ October 2015ರಲ್ಲಿ 55 accidentಗಳು ಆಗಿವೆ. ಇದುವರೆಗೂ 2013ರಲ್ಲಿ total accident 156 ಆಗಿದೆ. 2014 October ವರೆಗೆ 128 accidentಗಳು ಆಗಿವೆ. ವಾಹನಗಳು ಹಾಯಿಸಿಕೊಂಡಿದ್ದರಿಂದ ಸುಮಾರು 47 ಮಂದಿ ಸತ್ತು ಹೋಗಿದ್ದಾರೆ ಅವರನ್ನು ನಿಮ್ಮ ಪೊಲೀಸ್‌ನವರಿಗೆ ಹುಡುಕುವುದಕ್ಕೆ ಆಗಿರುವುದಿಲ್ಲ. ಅಂದ ಮೇಲೆ ನಿಮ್ಮ ಇಲಾಖೆಯು ಎಷ್ಟು ದಕ್ಷತೆಯಿಂದ ಕೆಲಸ ಮಾಡುತ್ತದೆ ಎನ್ನುವುದನ್ನು ತಾವೇ ಅರ್ಥಮಾಡಿಕೊಳ್ಳಬೇಕು. ಈ ಬಗ್ಗೆ ನಾನೇನೂ ಹೇಳುವುದಿಲ್ಲ. ಪಾಪ ಬಡವರು accidentನಿಂದಾಗಿ ಸತ್ತುಹೋಗಿದ್ದಾರೆ ಯಾರು ವಾಹನವನ್ನು ಅವರ ಮೇಲೆ ಹಾಯಿಸಿಕೊಂಡು ಹೋದವರನ್ನು

ಹುಡುಕುವುದಕ್ಕೆ ಆಗಲಿಲ್ಲವೆಂದರೆ ಪೊಲೀಸ್ ಇಲಾಖೆಯು ಏತಕ್ಕಾಗಿ ಇರಬೇಕು. Insurance ಇಲ್ಲ. ಯಾರು ಹಾಯಿಸಿದ್ದಾರೆಂದು ಗೊತ್ತಿಲ್ಲ, ಆ ವಾಹನಗಳನ್ನು ಜಪ್ತಿ ಮಾಡಲಿಲ್ಲಿ, ಈ ರೀತಿಯಾಗಿ ಪೊಲೀಸ್ ಇಲಾಖೆಯವರು ಕೆಲಸ ಮಾಡಿದರೆ ಇದರಿಂದ ಪೊಲೀಸ್ ಇಲಾಖೆಯವರಿಗೆ ಒಳ್ಳೆಯ ಹೆಸರು ಬರುತ್ತದೆಯೇ? ನಾನು ಆ ಕಡೆಯಿದ್ದು ಬಂದಿದ್ದೇನೆ. ಈ ರೀತಿ ಆದರೆ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುವುದಿಲ್ಲ. ನಾನು ತಮ್ಮಲ್ಲಿ ಕಳಕಳಿಯಿಂದ ಹೇಳುವುದಕ್ಕೆ ಬಯಸುತ್ತೇನೆಂದರೆ ನೀವು ಸ್ವಲ್ಪ ಒಳ್ಳೆಯ ಕೆಲಸಗಾರರನ್ನು ಅಲ್ಲಿಗೆ ಹಾಕಿ ಇಲ್ಲಿ recommendation ಮುಖ್ಯ ಅಲ್ಲ ಯಾರು ಒಳ್ಳೆಯ ಕೆಲಸ ಮಾಡುತ್ತಾರೆ ಅವರನ್ನು Executive postಗೆ ಹಾಕಬೇಕು. ನಾನೇನು ನಮ್ಮ ಸೋದರಮಾವನ ಮಗನನ್ನು ಹಾಕಿ ಎಂದು ಹೇಳುವುದಿಲ್ಲ, ನಮ್ಮ ದೊಡ್ಡಪ್ಪನ ಮಗನನ್ನು ಅಲ್ಲಿಗೆ ಹಾಕಿ ಎಂದು ಹೇಳುವುದಿಲ್ಲ. ಇಲ್ಲಿ ನನ್ನ ವಿನಂತಿ ಇಷ್ಟೆ ಅಲ್ಲಿಗೆ ಒಳ್ಳೆಯವರನ್ನು ಹಾಕಿ ಎಂದು ನಾನು personal ಆಗಿ ಹೇಳಿದ್ದೇನೆ. ಅದು ನಿಮಗೆ ಗೊತ್ತಿದೆ. Houseನಲ್ಲಿ ಕೆಲವು ...

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹಸಚಿವರು):– Transfer ಮಾಡುವಂತಹ power ಅನ್ನು ನೀವೆಲ್ಲರೂ ನನಗೆ ಕೊಡಿ ನಾನು ಒಳ್ಳೆಯವರನ್ನು ಅಲ್ಲಿಗೆ ಹಾಕುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ:– ಆಯಿತು. ಸರ್ಕಾರವನ್ನು ನೀವು ನಡೆಸುವವರಾಗಿದ್ದು ನನಗೆ ಅಧಿಕಾರವನ್ನು ಕೊಡಿ ಎಂದು ಹೇಳಿದರೆ ಹೇಗೇ? ತಪ್ಪು ಮಾಡಿದವರನ್ನು ಕಿವಿ ಹಿಂಡಿ ಹೇಳುವುದು ಬೇಡ ಅಂದರೆ ಹೇಗೆ? ನೀವು ಈ ಬಗ್ಗೆ DGPಯವರಿಗೆ direction ಕೊಡಿ.

ಶ್ರೀ ಕೆ.ಜೆ. ಜಾರ್ಜ್:– ಈ ಬಗ್ಗೆ PEB Board ಎಂದು ಮಾಡಿದ್ದಾರೆ. ನಾವು ಅಧಿಕಾರವನ್ನು ಅವರಿಗೆ ಕೊಟ್ಟುಬಿಟ್ಟಿದ್ದೇವೆ. Sub-Inspector, Circle Inspector ಇವರನ್ನು ಮಾಡುವುದಕ್ಕೆ ......

ಶ್ರೀ ಗೋವಿಂದ ಎಂ. ಕಾರಜೋಳ:– ಇದನ್ನು ನಾವು ನಮ್ಮ ಕಾಲದಲ್ಲಿಯೇ ಕೊಟ್ಟಿದ್ದೇವೆ.

ಶ್ರೀ ಕೆ.ಜೆ. ಜಾರ್ಜ್:- ಈ ಬಗ್ಗೆ ನಾನು ಏನು ಮಾಡುವುದಕ್ಕಾಗುತ್ತದೆ? ನಾವು ಅವರಿಗೆ ಅಧಿಕಾರವನ್ನು ಕೊಟ್ಟಿದ್ದೇವೆ.

ಶ್ರೀ ಗೋವಿಂದ ಎಂ. ಕಾರಜೋಳ:- No, No, ಸರ್ಕಾರವನ್ನು ನಡೆಸುವವರು ನೀವು. ನಾವು ಏನು ಮಾಡುವುದಕ್ಕಾಗುವುದಿಲ್ಲವೆಂದು ಹೇಳುವುದಕ್ಕೆ ಆಗುತ್ತದೆಯೇ? ನೀವು ಸರ್ಕಾರದಲ್ಲಿದ್ದುಕೊಂಡು ಅವರ ಕೈಯಿಂದ ಕೆಲಸವನ್ನು ಮಾಡಿಸಬೇಕು.

ಶ್ರೀ ಕೆ.ಜೆ. ಜಾರ್ಜ್:- ಮೊದಲು ಎರಡು ವರ್ಷ ಎಂದು ಇತ್ತು. ಒಂದು ವರ್ಷದ ತನಕ ಯಾರನ್ನು ಕೂಡ transfer ಮಾಡಿಸುವುದಕ್ಕಾಗುವುದಿಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ:- ನೀವು ನಿಮ್ಮ DGPಯವರನ್ನು tight ಮಾಡಿ.

ಶ್ರೀ ಕೆ.ಜೆ. ಜಾರ್ಜ್:- ಅದನ್ನು ನಾವು ಮಾಡುತ್ತಿದ್ದೇವೆ.

ಶ್ರೀ ಗೋವಿಂದ ಎಂ. ಕಾರಜೋಳ:- ನಿಮ್ಮ DGPಯವರು ಏನು ಮಾಡುತ್ತಿದ್ದಾರೆ? ಅವರು ಈ ಬಗ್ಗೆ inspection ಮಾಡಬೇಕೆಂದು ಇವತ್ತು ನಿಮಗೆ ಹೇಳುತ್ತಿದ್ದೇನೆ. ಇಷ್ಟು ಪೇಪರ್‌ಗಳನ್ನು ನಿಮಗೆ ಕೊಡುತ್ತೇನೆ ನೀವು ಇದನ್ನು ತೆಗೆದುಕೊಂಡು ಹೋಗಿ police stationಗೆ ಹೋಗಿ Crime Register ಅನ್ನು ತೆಗೆಯಿರಿ ಎಂದು ಹೇಳಿ. ಏತಕ್ಕಾಗಿ ಈ ಬಗ್ಗೆ investigation ಆಗಲಿಲ್ಲವೆಂದು ಕೇಳಿ. ಅವನನ್ನು ಅಲ್ಲಿಯೇ suspend ಮಾಡಿ ಮಾತನಾಡಿ ಅವನು ಹಾಕಿರುವಂತಹ ಖಾಕಿ ಬಟ್ಟೆಯನ್ನು ಕಳಚುವುದಕ್ಕೆ ಹೇಳಿ. ಮೊದಲು ಆ ಕೆಲಸ ಮಾಡಿ ಇದು ಆದಾಗ ಆಡಳಿತಕ್ಕೆ ಬೆಲೆ ಬರುತ್ತದೆ. ನಾನು ಹೇಳುವುದರ ಬಗ್ಗೆ ತಾವು ಅಪಾರ್ಥ ಮಾಡಿಕೊಳ್ಳುವುದಕ್ಕೆ ಹೋಗಬಾರದು. ನಿಮ್ಮ ಬಗ್ಗೆ ನಮಗೆ ಅಪಾರವಾದಂತಹ ಗೌರವವಿದೆ. As a Home Minister, ಜಾರ್ಜ್‌ರವರ ಬಗ್ಗೆ ನೀವು ಪ್ರಾಮಾಣಿಕರೆಂದು ನಮಗೆ ನಿಮ್ಮ ಬಗ್ಗೆ ಗೌರವ ಇದೆ. ನಾವು ನಿಮ್ಮ ಬಗ್ಗೆ ಮಾತನಾಡುತ್ತಿಲ್ಲ. ನಿಮ್ಮ ಕೈಕೆಳಗಿರುವಂತಹ ಇಲಾಖೆಯು ಎಷ್ಟು ಹೊಲಸಾಗಿದೆ ಎಂಬುವುದರ ಬಗ್ಗೆ ಹೇಳುತ್ತಿದ್ದೇನೆ.

ದಯಮಾಡಿ ತಾವು ಅರ್ಥ ಮಾಡಿಕೊಳ್ಳಬೇಕು. ನೀವು ಇನ್ನಷ್ಟು police stationಗಳನ್ನು ಮಾಡಿ ಸಿಬ್ಬಂದಿಗಳನ್ನು ಹೆಚ್ಚು ಮಾಡಬೇಕು. ನಿನ್ನೆ ದಿನ ಮಾನ್ಯ ರಮೇಶ್ ಕುಮಾರ್‌ರವರು ಮಾತನಾಡುತ್ತಾ ಹೇಳಿದರು. IGPಗಳನ್ನು, Additional IGPಗಳನ್ನು, DGPಗಳನ್ನು, DIGಗಳನ್ನು ಹೆಚ್ಚು ಮಾಡಿ. ಸಂಖ್ಯೆಯನ್ನು ಕೊಡುವುದರ ಬದಲಾಗಿ constables, Sub-Inspectorಗಳನ್ನು ಹೆಚ್ಚಿಗೆ ಮಾಡಿ ಅವರುಗಳನ್ನು ಕೆಲಸಕ್ಕೆ ಹಾಕಿ. ನೀವು ಆಡಳಿತ ಸುಧಾರಣೆಯನ್ನು ತರಬೇಕೆಂದರೆ ಈ ರೀತಿಯಾಗಿ ಮಾಡಬೇಕು. ಇದಕ್ಕಿಂತಲೂ ಹೆಚ್ಚಿಗೆ ಏನು ಮಾಡುವುದಕ್ಕಾಗುವುದಿಲ್ಲ. ಆದರೆ ಯಾರು corrupt ಎಂದು charges ಬರುತ್ತದೆಯೋ ಯಾರು investigation ಮಾಡುವುದರಲ್ಲಿ in-efficient ಎಂದು ಬರುತ್ತದೆಯೋ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರಕ್ಕೆ ಅಧಿಕಾರ ಇಲ್ಲವೇ? ನಿಮ್ಮ DGPಯವರು transfer ಮಾಡುವುದಿಲ್ಲ. ಅವರಿಗಿಲ್ಲ ಬಿಡಿ, ನಿಮಗೆ ಅಧಿಕಾರ ಇದೆಯಲ್ಲಾ? ಆ ಕೆಲಸವನ್ನು ನೀವು ಮಾಡಬೇಕು. ನಾನು ಜನಸಂಖ್ಯೆಯ ಆಧಾರದ ಮೇಲೆ police stationಗಳನ್ನು ಕೊಡಬೇಕು. Crime rateಅನ್ನು ನೋಡಿಕೊಂಡು police stationಗಳನ್ನು ಹೆಚ್ಚು ಕಡಿಮೆ ಮಾಡಬೇಕು. ಆ ಕೆಲಸವನ್ನು ನೀವು ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇನ್ನು ಸಮಮಾಜ ಕಲ್ಯಾಣ ಇಲಾಖೆಯ ಬಗ್ಗೆ ಹೇಳುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಗಳು ಜನಸಂಖ್ಯೆಯ ಆಧಾರದ ಮೇಲೆ ಬಜೆಟ್‌ನಲ್ಲಿ allocation ಮಾಡಿದ್ದಾರೆ. Budget allocation ಮಾಡಿರುವುದಕೋಸ್ಕರ ಅದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಆದರೆ ಅದು implementation ಆಗಬೇಕಲ್ಲವೇ? ಸಮಾಜಕಲ್ಯಾಣ ಇಲಾಖೆಯೊಳಗಡೆ 20% implementation ಆಗಿರುವುದಿಲ್ಲ. ಈ ಸರ್ಕಾರ ಅಧಿಕಾರಕ್ಕೆ ಬಂದು 1 ವರ್ಷ 9 ತಿಂಗಳು ಆಗಿದೆ. Land Purchase Schemeನಲ್ಲಿ SC/ST ಜನಾಂಗದವರರಿಗೆ ನಾವು ಭೂಮಿ ಕೊಡುವ ಯೋಜನೆಯನ್ನಿಟ್ಟುಕೊಂಡಿದ್ದೇವೆ. ಗಂಗಾಕಲ್ಯಾಣ ಯೋಜನೆಯಲ್ಲಿ ನೀರಾವರಿಯನ್ನು ಕೊಡುವುದನ್ನಿಟ್ಟುಕೊಂಡಿದ್ದೇವೆ. SC/ST Hostelಗಳ ಸಂಖ್ಯೆಯನ್ನು ಹೆಚ್ಚು ಮಾಡುವುದಕ್ಕೆ ಅನುಕೂಲ ಮಾಡಿಕೊಡಬೇಕು. ವಸತಿ

ಶಾಲೆಗಳನ್ನು ಹೆಚ್ಚು ಮಾಡಿಕೊಡಬೇಕು. ಬಡವರ ಮಕ್ಕಳಿಗೆ ವಿದ್ಯಾಭ್ಯಾಸ ಮಾಡುವುದಕ್ಕಾಗಿ ಎಲ್ಲಾ ಅನುಕೂಲಗಳನ್ನು ಕೊಡಬೇಕು ಅದರ ಜೊತೆಯಲ್ಲಿ SC/ST ಜನಾಂಗದಲ್ಲಿ 65% ಇರುವಂತಹ ಯುವಕರು ತಮ್ಮ ಕಾಲ ಮೇಲೆ ತಾವು ನಿಲ್ಲುವ ಹಾಗೆ ಕಾರ್ಯಕ್ರಮಗಳನ್ನು ರೂಪಿಸಬೇಕಾಗಿದೆ ಆ ಕೆಲಸವು ಆಗಲಿಲ್ಲ. ಸಮಾಜಕಲ್ಯಾಣ ಇಲಾಖೆಯಡಿಯಲ್ಲಿ ಕಳೆದ ಎರಡು ವರ್ಷಗಳಲ್ಲಿ SC/ST ಜನಾಂಗದವರಿಗೆ ಒಂದೇ ಒಂದು ಬೋರ್‌ವೆಲ್‌ಗಳನ್ನು ಕೊರೆದಿರುವುದಿಲ್ಲ. ಇವರು target ಅನ್ನು ಕೊಟ್ಟಿದ್ದಾರೆ. ಅವರು target ಕೊಟ್ಟ ಮೇಲೆ ನಾವು selection ಮಾಡಿ ಕೊಟ್ಟಿದ್ದೇವೆ. ಇದುವರೆಗೂ tender ಪ್ರಕ್ರಿಯೆಯೇ ಪ್ರಾರಂಭವಾಗಿರುವುದಿಲ್ಲ. ಇದುವರೆಗೂ tender finalize ಮಾಡಿರುವುದಿಲ್ಲ ಏಕೆ ಎಂದು ನನಗೆ ಗೊತ್ತಿಲ್ಲ. ಈ ಬಗ್ಗೆ ಮೊದಲು tender finalization ಮಾಡಿಕೊಡಬೇಕಲ್ಲಾ? ಮೊದಲು ನಮ್ಮ ಸರ್ಕಾರ ಅಧಿಕಾರದಲ್ಲಿದ್ದಂತಹ ಸಂದರ್ಭದಲ್ಲಿ ನಾವು ಅವರೇ tender ಕರೆದು ಕೊಳವೆ ಬಾವಿಗಳನ್ನು ತೋಡಿಸುವಂತಹ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ಕೊಟ್ಟಿದ್ದೆವು. ಏತಕ್ಕಾಗಿ ಇಲ್ಲಿ ಇವರು centralize ಮಾಡಿಕೊಂಡರೋ ನನಗೆ ಗೊತ್ತಿಲ್ಲ. ಇದನ್ನು ಸರ್ಕಾರದ ಮಟ್ಟದಲ್ಲಿ ಏತಕ್ಕಾಗಿ ಇಟ್ಟುಕೊಂಡಿದ್ದಾರೆಂದು ನನಗೆ ಗೊತ್ತಿಲ್ಲ.

ಅಧ್ಯಕ್ಷರು:- ಇದನ್ನು ಬದಲಾವಣೆ ಮಾಡಿ ಎಂದು ನಾನು ಹೇಳಿದ್ದೇನೆ. ಈ ಬಗ್ಗೆ ಒತ್ತಡವನ್ನು ಸಹ ಹಾಕಿದ್ದೇನೆ.

ಶ್ರೀ ಗೋವಿಂದ ಎಂ. ಕಾರಜೋಳ:- ಆದರೆ ಅದು ಆಗುತ್ತಿಲ್ಲ.

ಶ್ರೀ ಈ. ತುಕಾರಾಂ:- ಮಾನ್ಯ ಅಧ್ಯಕ್ಷರೆ, 2013-14ನೇ ಸಾಲಿನ ಬೋರ್‌ವೆಲ್‌ಅನ್ನು ಕೊರೆದಿದ್ದಾರೆ.

ಆನಂದ್ @ ವಿಶ್ವನಾಥ ಚಂದ್ರಶೇಖರ ಮಾಮನಿ:- ಎಲ್ಲಿಯೂ ಕೊರೆದಿಲ್ಲ. ಒಂದು ಕಡೆಯೂ ಬೋರ್‌ವೆಲ್‌ಗಳನ್ನು ಕೊರೆದಿರುವುದಿಲ್ಲ.

ಶ್ರೀ ಈ. ತುಕಾರಾಂ:- ನಮ್ಮ ಕ್ಷೇತ್ರದಲ್ಲಿ 2013-14ನೇ ಸಾಲಿನದ್ದು ಆಗಿದೆ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:– ನಾನು ಸಮಾಜಕಲ್ಯಾಣ ಸಚಿವರು ಮತ್ತು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಕೆ. ಶಿವಮೂರ್ತಿ:– SC/ST ಜನಕ್ಕೆ ಹಣ ದುರುಪಯೋಗ ಆಗಬಾರದು ಎಂದು ಹೇಳಿ ಒಂದು ಹೊಸ ಕಾಯಿದೆಯನ್ನು ಕಾಂಗ್ರೆಸ್ ಸರ್ಕಾರ ತಂದಿದೆ. SC/ST ಜನಕ್ಕೆ ಸಾಲವನ್ನು ಮನ್ನಾ ಮಾಡುವ ಕೆಲಸವನ್ನು ಕಾಂಗ್ರೆಸ್ ಸರ್ಕಾರದವರು ಮಾಡಿದ್ದಾರೆ. ನೀವು ಏನು ಮಾಡಿದ್ದೀರಿ ಸ್ವಾಮಿ?

ಶ್ರೀ ಗೋವಿಂದ ಎಂ. ಕಾರಜೋಳ:– ಅದನ್ನು ನಾನು ಹೇಳುತ್ತೇನೆ.

ಶ್ರೀ ಕೆ. ಶಿವಮೂರ್ತಿ:– ನೀವು ಕೇಂದ್ರದಲ್ಲಿಯೂ ಸಹ ಇದ್ದೀರಿ. ರಾಜ್ಯದಲ್ಲಿಯೂ ಸಹ ಇದ್ದೀರಿ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ:– ಮೀಸಲಾತಿಯನ್ನು ವಿರೋಧ ಮಾಡಿದವರು ನೀವೇ.......

(ಗೊಂದಲ)

ಅಧ್ಯಕ್ಷರು:– ಮಾನ್ಯ ಕಾರಜೋಳರವರು yield ಆಗಿರುವುದಿಲ್ಲ ನೀವು ಎದ್ದು ನಿಂತುಕೊಂಡು ಮಾತನಾಡಿದರೆ ಹೇಗೇ? ಏನಿದು? ತಾವು ಕುಳಿತುಕೊಳ್ಳಿ.

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಸಭಾಧ್ಯಕ್ಷರೆ, Land Purcchase Schemeನಲ್ಲಿ 15,000 ಕೋಟಿ ರೂಪಾಯಿಗಳಲ್ಲಿ 1,000 ಕೋಟಿ ರೂಪಾಯಿಗಳನ್ನು ಇಡಿ. ಅವರಿಗೆ ಲ್ಯಾಂಡ್ ಅನ್ನು ಕೊಡಿ. ಒಂದು ಕುಟುಂಬಕ್ಕೆ ಎರಡು ಎಕರೆ ಭೂಮಿಯನ್ನು ಕೊಟ್ಟರೆ ಅವರ ಕಾಲ ಮೇಲೆ ಅವರುಗಳು ನಿಂತುಕೊಳ್ಳುತ್ತಾರೆ. ಈಗ ಅನೇಕ ಜನ ಯುವಕರು ವಿದ್ಯಾವಂತರಾಗಿದ್ದಾರೆ. SC ಒಳಗಡೆ 65% 35 ವರ್ಷದ ಜನಸಂಖ್ಯೆ ಇದ್ದಾರೆ.

ಅವರಿಗೆ training class ಕೊಟ್ಟು ದುಡಿಯುವಂಥದ್ದಕ್ಕೆ ವ್ಯವಸ್ಥೆ ಮಾಡಬೇಕು. ನಮ್ಮ ಆರೋಗ್ಯ ಇಲಾಖೆಯಲ್ಲಿ ಕನಿಷ್ಟ 5 ಲಕ್ಷ ಜನರಿಗೆ ಉದ್ಯೋಗದ ಅವಕಾಶ ಇದೆ. 4 Revenue Divisionsನಲ್ಲಿ Laboratory Attenders, X-Ray Technicians, Paramedical Workersನಲ್ಲಿ ANMಗಳಿಗೆ training centerಗಳನ್ನು ಮಾಡಿ ಅವರನ್ನು train up ಮಾಡಿದರೆ ಇದರಿಂದ ಸರ್ಕಾರಕ್ಕೆ ಹೊರೆ ಆಗುವುದಿಲ್ಲ. ಅವರು ಖಾಸಗಿ ಕೆಲಸವನ್ನು ಮಾಡಿ ಬದುಕುತ್ತಾರೆ. ಯಾರಾದರೂ ಅವರುಗಳಿಗೆ 15 ರಿಂದ 20 ಸಾವಿರ ರೂಪಾಯಿಗಳ ಸಂಬಳವನ್ನು ಕೊಡುತ್ತಾರೆ. ಆ ಕೆಲಸವನ್ನು ಸರ್ಕಾರ ಮಾಡಬೇಕೆಂದು ನಮ್ಮ ಸಲಹೆಯಾಗಿದೆ. ಅದನ್ನು ಬಿಟ್ಟು ಇವರು ಸುಮ್ಮನೆ ದಿನನಿತ್ಯ ಒಂದೊಂದು,.. ಮಾನ್ಯ ಸಮಾಜಕಲ್ಯಾಣ ಸಚಿವರಾದ ಶ್ರೀ ಆಂಜನೇಯವರು ಒಂದು statement ಕೊಡುತ್ತಿದ್ದಾರೆ ಅದನ್ನು ನಾವು ನೋಡುತ್ತಿದ್ದೇವೆ. ನಾವು ಬಹಳ ದೊಡ್ಡ ಪ್ರಮಾಣದಲ್ಲಿ ಕೆಲಸ ನಡೆದಿದೆ ಎಂದು ಭಯಂಕರವಾಗಿ ಖುಷಿಪಡುತ್ತೇವೆ. ಆದರೆ ಇಲ್ಲಿ ಸಾಧನೆ ಶೂನ್ಯವಾಗಿದೆ. ಅದಕ್ಕಾಗಿ ನಾನು ಇಲಾಖೆಗೆ ಸಂಬಂಧಪಟ್ಟಂತೆ ಪೂರ್ಣ ಫೈಲ್‌ಗಳನ್ನು ತೆಗೆದುಕೊಂಡು ಬಂದಿದ್ದೇನೆ. ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈ hostelಗಳಲ್ಲಿ, Residential Schoolಗಳಲ್ಲಿ Watchmen, ಅಡಿಗೆಯವರು ಮತ್ತು Hostel Superintendents, clean ಮಾಡುವಂತಹವರು, Sweepers ಅವರೆಲ್ಲರನ್ನು ತಾವು ನೇಮಕಾತಿ ಮಾಡಿಕೊಳ್ಳಿ. ಈ ಹುದ್ದೆಗಳನ್ನು out sourceನಿಂದ ತೆಗೆದುಕೊಳ್ಳುವಂತಹದ್ದು ಅಲ್ಲ. ಏತಕ್ಕಾಗಿ out sourceನಿಂದ ತೆಗೆದುಕೊಳ್ಳಬಾರದು ಎಂದು ಹೇಳುತ್ತಿದ್ದೇನೆಂದರೆ ಅವುಗಳು permanent ಇರುವಂತಹ ಸಂಸ್ಥೆಗಳಾಗಿವೆ. ಅಲ್ಲಿ permanent employees ಇದ್ದರೆ ಅವರು ಜವಾಬ್ದಾರಿಯಿಂದ ಕೆಲಸ ಮಾಡುತ್ತಾರೆ. ಇವತ್ತು ಅನೇಕ ಕಡೆಗಳಲ್ಲಿ ದೌರ್ಜನ್ಯಗಳು ಆಗುತ್ತಿರುವುದಕ್ಕೆ ಜವಾಬ್ದಾರಿಗಳು ಇಲ್ಲದವರು ಅಲ್ಲಿಗೆ ಬಂದಿರುವುದಕ್ಕಾಗಿ ದೌರ್ಜನ್ಯಗಳು ಆಗುತ್ತಿವೆ. ಇವತ್ತು ಬಿಜಾಪುರ ಜಿಲ್ಲೆಯ ಆಲಮೇಲ್‌ನಲ್ಲಿ SC Residential Schoolನಲ್ಲಿ ಹೆಣ್ಣುಮಕ್ಕಳ schoolನಲ್ಲಿ ದೌರ್ಜನ್ಯ ಆಗಿದೆ. ಇದಕ್ಕೆ

ಕಾರಣವೇನೆಂದರೆ ಅಲ್ಲಿರುವಂತಹ out source ಜನ. ಅವರಿಗೆ ಏನೂ ಜವಾಬ್ದಾರಿ ಇರುವುದಿಲ್ಲ. ಅದಕ್ಕಾಗಿ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ. ವಿಶೇಷವಾಗಿ 1200–1300 ಜನರು D–ದರ್ಜೆಯ ಗುಂಪಿನ ನೌಕರರು ಬೇಕಾಗುತ್ತಾರೆ. ಅವರನ್ನು ನೇಮಕಾತಿ ಮಾಡಿ ಅವರಿಗೆ ಅನುಕೂಲ ಮಾಡಿಕೊಡಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುವುದಕ್ಕೆ ಬಯಸುತ್ತೇನೆ. ಇನ್ನು Social Welfare Departmentನಲ್ಲಿ 7215 vacancyಗಳು ಇವೆ. ಇಲ್ಲಿ Backlog vacanciesಗೆ appointments ಆಗುತ್ತಲೆ ಇಲ್ಲ. ಹಿಂದೆ ನಮ್ಮ ಸರ್ಕಾರವು ಅಧಿಕಾರದಲ್ಲಿದ್ದಾಗ ಮಾನ್ಯ ಜಗದೀಶ್ ಶೆಟ್ಟರ್ ಸಾಹೇಬರವರು ನನ್ನನ್ನೇ ಸಮಾಜಕಲ್ಯಾಣ ಇಲಾಖೆಯ backlog vacanciesಗೆ ಸಂಬಂಧಪಟ್ಟಂತೆ Cabınet Sup–Committeeಗೆ Chairman ಮಾಡಿದ್ದರು. ಆಗಲೂ ಸಹ ಸಾಕಷ್ಟು ಪ್ರಯತ್ನಗಳನ್ನು ಮಾಡಿ 15,911 ಮಂದಿಗೆ ಮಾಡಿದ್ದೇನೆ.

ಅಧ್ಯಕ್ಷರು:– ಆಗ ಇದನ್ನು ಮಾಡಿರುವುದಲ್ಲ. ನಾವು ಅಧಿಕಾರದಲ್ಲಿದ್ದಾಗ ಮಾಡಿರುವುದು.

ಶ್ರೀ ಗೋವಿಂದ ಎಂ. ಕಾರಜೋಳ:– ನೀವು ಇದ್ದಾಗ ಮಾಡಿರುವುದನ್ನು ಸೇರಿ ಹೇಳುತ್ತೇನೆ.

ಅಧ್ಯಕ್ಷರು:– ಸೇರಿಸಿ ಹೇಳಿ.

ಶ್ರೀ ಗೋವಿಂದ ಎಂ. ಕಾರಜೋಳ:– ಸೇರಿಯೇ ಹೇಳುತ್ತಿದ್ದೇನೆ. ನಾನು ಈ ಬಗ್ಗೆ ಪ್ರಯತ್ನ ಪಟ್ಟಿರುವುದನ್ನು ಹೇಳುತ್ತೇನೆ. 19,115 vacancies ಇತ್ತು. ಅದರಲ್ಲಿ ನನ್ನ period end ಆಗುವವರೆಗೂ 15911ಮಂದಿಗೆ appointment ಆಗಿದೆ. ಅದರೊಳಗೆ ಹಿಂದಿನವರದು ಎಲ್ಲರೂ ಬಂದಿರುತ್ತದೆ. ಇನ್ನು 7215 ಹುದ್ದೆಗಳು ಇದೆ. ಇವು Aided Schoolಗಳಲ್ಲಿ, Aided collegeಗಳಲ್ಲಿ ಉಳಿದಿದೆ ಮತ್ತು ನಮ್ಮ University ಗಳಲ್ಲಿ ಉಳಿದಿವೆ. ಸರ್ಕಾರಕ್ಕೂ Universityಗಳಿಗೂ ಏನೂ ಸಂಬಂಧ ಇಲ್ಲವೇನು? ಅವರುಗಳು ಸರ್ಕಾರದ grantಅನ್ನು ಪಡೆದುಕೊಳ್ಳುತ್ತಾರೆ.

ಅಧ್ಯಕ್ಷರು:- ನಾನು ಇದ್ದಾಗ ಆಗಲೇ ಈ ಬಗ್ಗೆ extend ಮಾಡಿದ್ದೇನೆ.

ಶ್ರೀ ಗೋವಿಂದ ಎಂ. ಕಾರಜೋಳ:- ನೀವು ಇದ್ದಾಗ ಮಾಡಿದ್ದೀರಿ. ಅವರು ಮಾಡುತ್ತಿಲ್ಲ.

ಅಧ್ಯಕ್ಷರು:- ಮಾಡದೆ ಇದ್ದರೆ ಈ ಬಗ್ಗೆ departmentಗಳು ಇಲ್ಲವಾ?

ಶ್ರೀ ಗೋವಿಂದ ಎಂ. ಕಾರಜೋಳ:- ಆ ಬಗ್ಗೆಯೆ ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು:- Act ಪ್ರಕಾರ action ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲವೇ?

ಶ್ರೀ ಗೋವಿಂದ ಎಂ. ಕಾರಜೋಳ:- Act ಪ್ರಕಾರವೇ action ತೆಗೆದುಕೊಳ್ಳಬೇಕೆಂದೆ ನಾನು ಸರ್ಕಾರಕ್ಕೆ propose ಮಾಡುತ್ತಿರುವುದು.

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಳವಳ್ಳಿ):- ಮಾನ್ಯ ಅಧ್ಯಕ್ಷರೆ, ಮಾನ್ಯ ಕಾರಜೋಳರವರು ಮಾತನಾಡುತ್ತಿರುವ ಸಂದರ್ಭದಲ್ಲಿ ಯಾವ್ಯಾವ ಇಲಾಖೆಗಳಲ್ಲಿ ಎಷ್ಟೆಷ್ಟು ಬ್ಯಾಕ್‌ಲಾಗ್ ಹುದ್ದೆಗಳು ಉಳಿದಿವೆ ಎನ್ನುವ ಪ್ರಶ್ನೆಯನ್ನು ಎತ್ತಿದ್ದಾರೆ. ಇದರಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳು ಅನುದಾನಕ್ಕೆ ಯಾವ್ಯಾವುದು ಒಳಪಟ್ಟಿವೆ, ಅವುಗಳನ್ನು ಹಿಂದಿನ ಎಲ್ಲಾ ಸರ್ಕಾರಗಳು, ಆ ಸರ್ಕಾರ, ಈ ಸರ್ಕಾರ ಎಂದೇನೂ ಇಲ್ಲ. ಎಲ್ಲಾ ಸರ್ಕಾರಗಳು ಅನುದಾನಕ್ಕೆ ಒಳಪಡಿಸಬೇಕಾದಾಗ ಅವರಲ್ಲಿರುವಂತಹ staff pattern ಪೂರ್ತಿ approval ಕೊಟ್ಟಿದ್ದಾರೆ. ಅಲ್ಲಿ 18% ಎಲ್ಲಿಯೂ fulfill ಆಗಿಲ್ಲ. ಅದಕ್ಕೆ objection ಅನ್ನು ಆರ್ಥಿಕ ಇಲಾಖೆಗೆ ಕೇಳಿದಾಗ ಒಂದು ಅಫಿಡವಿಟ್‌ಅನ್ನು ಆಧಾರವಾಗಿಟ್ಟುಕೊಳ್ಳುತ್ತಿದ್ದಾರೆ. ಇಲ್ಲಿಯತನಕ ಇದೊಂದು ಕೆಟ್ಟ ಸಂಪ್ರದಾಯ ನಡೆದು ಬಂದಿದೆ. ಏನು ಆ ಅಫಿಡವಿಟ್? ಈಗಾಗಲೇ ಈ ಸಂಸ್ಥೆಯಲ್ಲಿ ಇಷ್ಟು ಜನ ಕೆಲಸ ಮಾಡುತ್ತಿದ್ದಾರೆ. ಮೀಸಲಾತಿ ಅಡಿಯಲ್ಲಿ ಮಾಡಬೇಕಾದರೆ ಈಗ ಕೆಲಸ ಮಾಡುತ್ತಿರುವವರನ್ನು ತೆಗೆಯಬೇಕಾಗುತ್ತದೆ. ಇವರುಗಳ ನಿವೃತ್ತಿಯಿಂದ

ತೆರವಾಗುವಂತಹ ಸ್ಥಾನಕ್ಕೆ ಮೀಸಲಾತಿಯನ್ನು ನಾವು ಅಳವಡಿಸುತ್ತೇವೆ ಎಂದು ಹೇಳುತ್ತಾರೆ. 25–30 ವರ್ಷದ ತನಕ ಮೀಸಲಾತಿ ಬರುವುದಿಲ್ಲ.

ಅಧ್ಯಕ್ಷರು:– As and when vacancy arises ಅಲ್ಲಿ ಬ್ಯಾಕ್‌ಲಾಗ್ ಅನ್ನು ತುಂಬಬೇಕೆಂದು ನಾವು ನಿಯಮವನ್ನು ಮಾಡಿದ್ದೇವೆ.

ಶ್ರೀ ಪಿ.ಎಂ. ನರೇಂದ್ರಸ್ವಾಮಿ:– 25–30 ವರ್ಷಗಳ ತನಕ ಈ ಬ್ಯಾಕ್‌ಲಾಗ್ ಅನ್ನು ನಾವು ಕಾಯುತ್ತಾ ಕೂರಬೇಕಾಗುತ್ತದೆ. ಇದಕ್ಕೆ ಒಂದು ಸೂಕ್ತ ಪರಿಹಾರವನ್ನು ಸರ್ಕಾರ ಕಂಡುಹಿಡಿಯಬೇಕು ಎನ್ನುವುದು ನಮ್ಮ ಎಸ್.ಸಿ/ಎಸ್.ಟಿ ಸಮಿತಿಯಲ್ಲಿ ಮಾನ್ಯ ಕಾರಜೋಳರವರೂ ಸದಸ್ಯರಿದ್ದಾರೆ, ಸಮಿತಿಯಲ್ಲಿ ಅದನ್ನೇ ಚರ್ಚೆ ಮಾಡುವುದು ಎನ್ನುವುದನ್ನು ತಮ್ಮ ಮುಂದೆ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಅಧ್ಯಕ್ಷರೆ, co-operative institutions ನಲ್ಲಿ ಮಾಡುತ್ತಿಲ್ಲ. ಸರ್ಕಾರ ಸಹಕಾರ ಕ್ಷೇತ್ರಕ್ಕೆ ದೊಡ್ಡ ಪ್ರಮಾಣದಲ್ಲಿ 10,000 ಕೋಟಿ ರೂ.ಗಳಿಗಿಂತಲೂ ಹೆಚ್ಚು ಸಾಲವನ್ನು 0% ನಂತೆ ಕೊಡುವಂತಹ ವ್ಯವಸ್ಥೆ ಮಾಡಿದೆ. ಅಲ್ಲಿರುವಂತಹ ಸಂಸ್ಥೆಗಳಲ್ಲಿ ನಿಮಗೆ ಔಷಧಕ್ಕೂ ಒಬ್ಬರು ಕೂಡ ಸಿಗುವುದಿಲ್ಲ. ಅಲ್ಲಿ reservation ಬರಬೇಕಲ್ಲವೇ? ಸರ್ಕಾರ ಅದನ್ನು ಮಾಡಬೇಕಲ್ಲವೇ? ಸಹಕಾರ ಮಂತ್ರಿಗಳು ಸೀಟಿನಲ್ಲಿದ್ದಾರೆಯೇ? ಇಲ್ಲ. 29,000 ದಷ್ಟು institutions ಇವೆ. ನೌಕರಿ ಕೊಡಬೇಕಲ್ಲವೇ? ಕೊಡುತ್ತಿಲ್ಲ. ಅದಕ್ಕೆ ನಾನು ಸರ್ಕಾರಕ್ಕೆ ಏನು ಸಲಹೆ ಮಾಡುತ್ತೇನೆ ಎಂದರೆ, ಈ ವರ್ಷದಲ್ಲೇ ಕಟ್ಟುನಿಟ್ಟಾಗಿ ಯಾವ ಸಂಸ್ಥೆಯವರು ತೆಗೆದುಕೊಳ್ಳುವುದಿಲ್ಲ, ಆ ಸಂಸ್ಥೆಗೆ ಆರ್ಥಿಕ ನೆರವು ನಿಲ್ಲಬೇಕು. ಅವರಿಗೆ ಕೊಡಬಾರದು. ಆ ರೀತಿ ಬಿಗಿ ಮಾಡಿದರೆ ಮಾತ್ರ ಅವರು ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆ. ಅದಕ್ಕೆ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ. ನೀರಾವರಿ ಇಲಾಖೆಯ ಬಗ್ಗೆ ಹೇಳುವುದಾದರೆ, ಕೃಷ್ಣಾ ಮೇಲ್ದಂಡೆ ಯೋಜನೆಯ ಮೂರನೇ ಹಂತದ ಕಾಮಗಾರಿ, ಇವತ್ತಿನವರೆಗೂ ಅವರು ಖರ್ಚು ಮಾಡಿದ್ದು 170 ಕೋಟಿ 679 ರೂ.ಗಳು. ನಮಗೆ 524.256

ಮೀಟರ್‌ಗೆ ನೀರು ನಿಲ್ಲಿಸುವಾಗ ನಮಗೆ ಏನು ಕೃಷ್ಣಾ ಬೇಸಿನ್‌ನಲ್ಲಿ 177 ಟಿ.ಎಂ.ಸಿ ನೀರು ಸಿಕ್ಕಿದೆ ಅದರಲ್ಲಿ 130 ಟಿ.ಎಂ.ಸಿ ನೀರನ್ನು ಅಲ್ಲಿಯೇ ಉಪಯೋಗ ಮಾಡಬೇಕಾಗುತ್ತದೆ. ಇವರು ಇವತ್ತಿನವರೆಗೂ ಯಾವುದೇ ಕಾಮಗಾರಿಯನ್ನು ಪ್ರಾರಂಭ ಮಾಡಿಲ್ಲ. ನಮ್ಮ ಸರ್ಕಾರ ಇದ್ದಂತಹ ಸಂದರ್ಭದಲ್ಲಿ ಮಾನ್ಯ ಬಸವರಾಜ್ ಬೊಮ್ಮಾಯಿಯವರು ನೀರಾವರಿ ಮಂತ್ರಿಗಳಾಗಿದ್ದಾಗ 17,207 ಕೋಟಿ ರೂ.ಗಳ ಕ್ರಿಯಾ ಯೋಜನೆಗೆ ಅನುಮೋದನೆ ಕೊಟ್ಟು ಕೆಲಸ ಪ್ರಾರಂಭ ಮಾಡಲು ಚಾಲನೆ ಕೊಟ್ಟರು. ಆದರೆ ಅದೇ ವಿಜಾಪುರ, ಬಾಗಲಕೋಟೆ ಜಿಲ್ಲೆಯಿಂದ ಬಂದಂತಹ ಮಾನ್ಯ ಎಂ.ಬಿ. ಪಾಟೀಲ್‌ರವರು ಅದರ ಬಗ್ಗೆ ಹೆಚ್ಚು ಆಸಕ್ತಿ ವಹಿಸಿ ಕೆಲಸ ಪ್ರಾರಂಭ ಮಾಡುತ್ತಿಲ್ಲ.

ಅಧ್ಯಕ್ಷರು:– ಇಲ್ಲೇ ಇದ್ದೀರಲ್ಲಾ ಮಾತನಾಡಿ.

ಶ್ರೀ ಗೋವಿಂದ ಎಂ. ಕಾರಜೋಳ:– ನಾವು ಎಲ್ಲರೂ ಇಲ್ಲೇ ಇದ್ದೇವೆ. ಎದುರು–ಬದುರು ಇದ್ದೇವೆ.

ಶ್ರೀ ಎಂ.ಬಿ. ಪಾಟೀಲ್:– ಮಾನ್ಯ ಅಧ್ಯಕ್ಷರೆ, ಉತ್ತರವನ್ನು detail ಆಗಿ ಕೊಡುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಸಚಿವರೆ ತಾವು ಆನಂತರ ಹೇಳಿ. ನಿಮ್ಮ ಉತ್ತರವನ್ನು ನಾವು 3–4 ತಾಸು ಕೇಳುವುದಕ್ಕೆ ತಯಾರಿದ್ದೇವೆ. ಏಕೆ ಕಾಳಜಿ ಮಾಡುತ್ತೀರಿ? ಮಾನ್ಯ ಅದ್ಯಕ್ಷರೆ, ಅಧಿಕಾರಕ್ಕೆ ಬರಬೇಕಾದರೆ ಮಾನ್ಯ ದೇಶಪಾಂಡೆಯವರಿಗೆ ನಡೆಯುವುದಕ್ಕೆ ಬರುತ್ತಿರಲಿಲ್ಲ. ಹಾಗೆಯೇ ಎಳೆದಾಡುತ್ತಾ ಅವರ ಬೆನ್ನು ಹತ್ತಿದರು. ಮಾನ್ಯ ಸಿದ್ದರಾಮಯ್ಯ ಸಾಹೇಬರು ಮುಂದೆ ಮುಂದೆ ಹೋಗುತ್ತಿದ್ದರು. ಕಾಂಗ್ರೆಸ್ ಅಧ್ಯಕ್ಷರಾದ ಡಾ॥ ಜಿ. ಪರಮೇಶ್ವರ್‌ರವರು ಬೇಗ ಹೋಗಿ ಅಧಿಕಾರ ಹಿಡಿಯೋಣವೆಂದು ಮುಂದೆ ಮುಂದೆ ಓಡುತ್ತಿದ್ದರು. 'ಕಾಂಗ್ರೆಸ್ ನಡಿಗೆ ಕೃಷ್ಣೆಯ ಕಡೆಗೆ' ಎಂದು ಹೇಳಿ ಹೋದರು. KBJNLನಲ್ಲಿ ಬರುವಂತಹ ಕಾಮಗಾರಿಗಳಿಗೆ 10,000 ಕೋಟಿ ರೂ.ಗಳನ್ನು ಕೊಡುತ್ತೇವೆ ಎಂದು ಕೂಡಲಸಂಗಮನಾಥನ

ಸಾಕ್ಷಿಯಾಗಿ ಹೇಳಿ ಬಂದರು. ಯಾರ ಸಾಕ್ಷಿಯಾಗಿ? ಕೂಡಲಸಂಗಮನಾಥನ ಸಾಕ್ಷಿಯಾಗಿ.

ಅಧ್ಯಕ್ಷರು:– ಕೂಡಲಸಂಗಮನಾಥರು ಇರುವುದಿಲ್ಲ ಮಾತನಾಡುವುದಿಲ್ಲ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ಅದರ ಜೊತೆಗೆ ಕೂಡಲಸಂಗಮನಾಥರು ಆಗ ನಿದ್ರಾವಸ್ಥೆಯಲ್ಲಿದ್ದರು.

ಅಧ್ಯಕ್ಷರು:– ಅವರು ಸಾಕ್ಷಿ ಹೇಳುವಂತಹ ಸ್ಥಿತಿಯಲ್ಲಿದ್ದಿದ್ದರೆ ಅವರು ಬಾಯಿಯನ್ನೇ ಬಿಡುತ್ತಿರಲಿಲ್ಲ.

ಶ್ರೀ ಸಿದ್ದರಾಮಯ್ಯ:– ಮಾನ್ಯ ಕಾರಜೋಳರವರೆ ನೀವು ಆ ಸಭೆಯಲ್ಲಿ ಇದ್ದೀರಾ?

ಶ್ರೀ ಗೋವಿಂದ ಎಂ. ಕಾರಜೋಳ:– ನಾನು ಇರಲಿಲ್ಲ. ಪೇಪರ್‌ನಲ್ಲಿ, ಟಿ.ವಿಯಲ್ಲಿ ನೋಡಿದೆ.

ಶ್ರೀ ಸಿದ್ದರಾಮಯ್ಯ:– ಕೂಡಲಸಂಗಮದಲ್ಲಿ ಸಭೆ ಸೇರಿದ್ದೆವು ಆ ಸಭೆಯಲ್ಲಿ ತಾವು ಇದ್ದೀರಾ?

ಶ್ರೀ ಗೋವಿಂದ ಎಂ. ಕಾರಜೋಳ:– ನಾನು ನಿಮ್ಮ ಸಭೆಯೊಳಗೆ ಇರುವುದಕ್ಕೆ ಹೇಗೆ ಬರುತ್ತದೆ?

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ, ಅವತ್ತು ನಾನೇ ಭಾಷಣ ಮಾಡಿರುವುದು. ಭಾಷಣದಲ್ಲಿ ನೀರಾವರಿಗೆ ಕನಿಷ್ಟ 10,000 ಕೋಟಿ ರೂ.ಗಳನ್ನು ಖರ್ಚು ಮಾಡುತ್ತೇವೆ, ಐದು ವರ್ಷದಲ್ಲಿ 50,000 ಕೋಟಿ ರೂ.ಗಳನ್ನು ಖರ್ಚು ಮಾಡುತ್ತೇವೆ ಎಂದು ಹೇಳಿದ್ದೇನೆ. ಕೇವಲ Upper Krishna Project ಗೇ 10,000 ಕೋಟಿ ರೂ.ಗಳನ್ನು ಖರ್ಚು ಮಾಡುತ್ತೇವೆ ಎಂದು ಎಲ್ಲಿ ಹೇಳಿದ್ದೇನೆ? ನೀವು ಅದನ್ನು ಏಕೆ ಊಹಿಸಿಕೊಂಡು, ಕಲ್ಪಿಸಿಕೊಂಡು ಹೇಳುವುದಕ್ಕೆ ಹೋಗುತ್ತೀರಿ?

ಶ್ರೀ ಗೋವಿಂದ ಎಂ. ಕಾರಜೋಳ:- ಸಾರ್ ಮುಂದೆ ಪೂರ್ಣವಾಗಿ ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ:- ಹಿಂದೆಯೂ ಇಲ್ಲ, ಮುಂದೆಯೂ ಇಲ್ಲ. ನನ್ನ ಇಡೀ ಜೀವನದಲ್ಲಿ ದೇವರ ಮೇಲೆ ಪ್ರಮಾಣವಚನ ಮಾಡಿಯೇ ಗೊತ್ತಿಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ:- ನೀವು ಮಾಡದಿದ್ದರೆ ಉಳಿದವರು ಇದ್ದಾರಲ್ಲಾ.

ಶ್ರೀ ಸಿದ್ದರಾಮಯ್ಯ:- ದೇವರ ಮೇಲೆ ನಾನು ಪ್ರಮಾನವಚನ ಮಾಡಿಲ್ಲ. ನಾನು ಹಾಗೂ ಅಧ್ಯಕ್ಷರಾದ ಪರಮೇಶ್ವರ್‌ರವರು ಇಬ್ಬರೇ ಭಾಷಣ ಮಾಡಿದ್ದು.

ಶ್ರೀ ಉಮೇಶ್ ವಿ. ಕತ್ತಿ:- ಮಾನ್ಯ ಮುಂಖ್ಯಮಂತ್ರಿಯವರೆ, ಮೊನ್ನೆ ತಿರುಪತಿಗೆ ಹೋಗಿ ಬಂದಿದ್ದೀರಿ ಅದನ್ನಾದರೂ ಹೇಳಿ. ಅಲ್ಲಿ ಪ್ರಮಾಣ ಮಾಡಿದಿರೋ ಇಲ್ಲವೋ?

ಶ್ರೀ ಸಿದ್ದರಾಮಯ್ಯ:- ತಿರುಪತಿಗೆ ಹೋಗುವುದಕ್ಕೂ, . ಪ್ರಮಾಣ ಮಾಡುವುದಕ್ಕೂ ವ್ಯತ್ಯಾಸ ಇಲ್ಲವೇ?

ಶ್ರೀ ಉಮೇಶ್ ವಿ. ಕತ್ತಿ:- ತಿರುಪತಿಯಲ್ಲಿಯೂ ಸಹ ಕಾಲಿಗೆ ಬಿದ್ದು ಪ್ರಮಾಣ ಮಾಡಿ ಬಂದಿದ್ದೀರಿ.

ಶ್ರೀ ಸಿದ್ದರಾಮಯ್ಯ:- ತಿರುಪತಿಗೂ ಹೋಗಿದ್ದೆ, ಮಹದೇಶ್ವರ ಬೆಟ್ಟಕ್ಕೂ ಹೋಗಿದ್ದೆ. ಚಾಮುಂಡೇಶ್ವರಿ ದೇವಸ್ಥಾನಕ್ಕೂ ಹೋಗಿದ್ದೆ. ನಾನು ಯಾವತ್ತೂ ಕೂಡ ನಾಸ್ತಿಕ ಎಂದು ಹೇಳಿಲ್ಲ. ಹಾಗೆಂದು ಪ್ರತಿ ದಿನ ಗಂಧದ ಕಡ್ಡಿ ಹಿಡಿದುಕೊಂಡು, ಕರ್ಪೂರ ಹಿಡಿದುಕೊಂಡು ಕುಳಿತಿಲ್ಲ. ದೇವರ ಪೂಜೆಯನ್ನೇ ಮಾಡುವುದಿಲ್ಲ ಎಂದಲ್ಲ. ಹಳ್ಳಿಗಳಿಗೆ ಹೋದಾಗಲೆಲ್ಲಾ ದೇವಸ್ಥಾನಗಳಿಗೆ ಹೋಗುತ್ತೇನೆ. ಆದರೆ ಪ್ರತಿ ದಿನ ಅದೇ ಕಸಬು ಮಾಡುತ್ತಿಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ:- ಅದರ ಬಗ್ಗೆ ನನಗೆ ನಂಬಿಕೆ ಇದೆ.

ಶ್ರೀ ಸಿದ್ದರಾಮಯ್ಯ:- ಕೂಡಲಸಂಗಮದಲ್ಲಿ ಯಾವ ದೇವರ ಮೇಲೂ ಕೂಡ ನಾವು ಆಣೆ ಮಾಡುವುದಾಗಲಿ, ಪ್ರಮಾಣ ಮಾಡುವುದಾಗಲಿ ಯಾವುದೂ ಇಲ್ಲ.

ಶ್ರೀ **ಗೋವಿಂದ ಎಂ. ಕಾರಜೋಳ**:- ಮಾನ್ಯ ಅಧ್ಯಕ್ಷರೆ, ಕೂಡಲಸಂಗಮದಲ್ಲಿ ದೇವರೇ ಇಲ್ಲ.

ಶ್ರೀ ಸಿದ್ದರಾಮಯ್ಯ:- ದೇವರು ಎಲ್ಲಾ ಕಡೆ ಇದ್ದಾನೆ. ಕೂಡಲಸಂಗಮದಲ್ಲಿ ದೇವರು ಏಕೆ ಇಲ್ಲ?

ಶ್ರೀ **ಗೋವಿಂದ ಎಂ. ಕಾರಜೋಳ**:- ಅಲ್ಲಿ ಬಸವಣ್ಣನವರು ಇದ್ದಾರೆ.

ಶ್ರೀ ಸಿದ್ದರಾಮಯ್ಯ:- ಬಸವಣ್ಣನವರು ಅಲ್ಲಿ ಐಕ್ಯ ಆಗಿರುವುದು.

ಶ್ರೀ **ಗೋವಿಂದ ಎಂ. ಕಾರಜೋಳ**:- ಬಸವಣ್ಣನವರು ಇದ್ದಲ್ಲಿ ದೇವರು ಇರುವುದಿಲ್ಲ.

ಶ್ರೀ **ಬಸವರಾಜ ಬೊಮ್ಮಾಯಿ**:- ಮಾನ್ಯ ಮುಖ್ಯಮಂತ್ರಿಯವರಿಗೆ ನೆನಪು ಮಾಡಿಕೊಡುತ್ತೇನೆ. ತಾವು ಕೃಷ್ಣಾ ನೀರನ್ನು ಮುಟ್ಟಿ ಕೃಷ್ಣೆ ಮೇಲೆ ಆಣೆ ಮಾಡಿದ್ದೀರಿ.

ಶ್ರೀ ಸಿದ್ದರಾಮಯ್ಯ:- ಎಲ್ಲಿ?

ಶ್ರೀ **ಬಸವರಾಜ ಬೊಮ್ಮಾಯಿ**:- ಅಲ್ಲಿ ಆವತ್ತು ನೀವು ಕೃಷ್ಣೆ ಮೇಲೆ ಆಣೆ ಮಾಡಿದ್ದೀರಿ.

ಶ್ರೀ ಸಿದ್ದರಾಮಯ್ಯ:- ನಾವು ಅಲ್ಲಿ ಕೃಷ್ಣಾ ನೀರಿಗೆ ಹೋಗಿಲ್ಲ.

ಶ್ರೀ **ಬಸವರಾಜ ಬೊಮ್ಮಾಯಿ**:- 10,000 ಕೋಟಿ ರೂ.ಗಳನ್ನು ಕೃಷ್ಣಾ ಪ್ರಾಜೆಕ್ಟ್‌ಗೆ ಕೊಡುತ್ತೇವೆ ಎಂದು ಹೇಳಿದ್ದೀರಿ.

ಶ್ರೀ ಸಿದ್ದರಾಮಯ್ಯ:- ಇಲ್ಲ ಅವೆಲ್ಲಾ ಸುಳ್ಳು.

ಶ್ರೀ ಬಸವರಾಜ ಬೊಮ್ಮಾಯಿ:- ಪತ್ರಿಕೆಗಳಲ್ಲಿ, ಟಿ.ವಿಯಲ್ಲಿ ಬಂದಿದೆ. ನಿಮಗೆ ಇನ್ನೇನು ಸಾಕ್ಷಿ ಬೇಕು?

ಶ್ರೀ ಸಿದ್ದರಾಮಯ್ಯ:- ಅವೆಲ್ಲಾ ಸುಳ್ಳು.

(ಗೊಂದಲ)

ಶ್ರೀ ಎನ್.ಹೆಚ್. ಕೋನರೆಡ್ಡಿ:- ಮಾನ್ಯ ಮುಖ್ಯಮಂತ್ರಿಯವರೆ, ತಾವು ಮಾತನಾಡಿದಂತಹ paper cuttings ಇವೆ. ಬಸವಣ್ಣನವರ ಸ್ಥಳ ಕಾಯಕವೇ ಕೈಲಾಸ ಎಂದು ಹೇಳಿರುವ paper cuttings ಇವೆ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ:- ಸಂಗಮನಾಥನು ಸಾಕ್ಷಿಯಲ್ಲವೇ ಅವನೇ ನೋಡಿಕೊಳ್ಳುತ್ತಾನೆ ಬಿಡಿ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ:- ಬಸವಣ್ಣ ದೇವರಾ?

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:- ಬಸವಣ್ಣನವರು ಇದ್ದಲ್ಲಿ ದೇವರು ಇಲ್ಲವೆಂದು ಹೇಳಿದ್ದೇನೆ. ಅದನ್ನು ತಾವು ಸರಿಯಾಗಿ ಕೇಳಿಸಿಕೊಂಡಿಲ್ಲ. ಅಲ್ಲಿ ಇರುವುದು ಆಚಾರವೇ ಸ್ವರ್ಗ ಅನಾಚಾರವೇ ನರಕ, ಕಾಯಕವೇ ಕೈಲಾಸ. ಬೇರೆ ಇಲ್ಲ. ಮಾನ್ಯ ಎಂ.ಬಿ. ಪಾಟೀಲ್‌ರವರು ಇಡೀ ಜಿಲ್ಲೆ ತುಂಬಾ. . .

(ಗೊಂದಲ)

ಶ್ರೀ ಜೆ.ಟಿ. ಪಾಟೀಲ್:- ಏಕೆ ಮಾನ್ಯ ಕಾರಜೋಳರವರೆ, ನಿಮಗೂ ಹಾಗೂ ಎಂ.ಬಿ. ಪಾಟೀಲ್‌ರವರಿಗೂ difference ಬಂದಿದೆ ಏನು? ಏಕೆ ನೀವು ಈ ರೀತಿ ಮಾತನಾಡುತ್ತಿದ್ದೀರಿ?

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:- ಸಾಯುವ ತನಕ difference ಬರುವುದಿಲ್ಲ. ಕುಳಿತುಕೊಳ್ಳಿ. ಬದುಕಿರುವ ತನಕ ಬರುವುದಿಲ್ಲ. ಅದ್ಯಾಕೆ ಕಾಳಜಿ ಮಾಡುತ್ತೀರಿ? Difference ಬರುವುದಿಲ್ಲ. ಮಾನ್ಯ ಅಧ್ಯಕ್ಷರೆ, ಆಲಮಟ್ಟಿ ಯೋಜನೆ ಅಡಿಯಲ್ಲಿ ಬಹಳ ಪ್ರಮುಖವಾದಂತಹ 9 lift irrigation schemeಗಳಿವೆ. ಅದನ್ನು ಕೊಡದ ಹೊರತು ಅಖಂಡ ವಿಜಾಪುರ ಜಿಲ್ಲೆಗೆ ನೀರಾವರಿ ಭಾಗ್ಯ ಇಲ್ಲ. ಗುಲ್ಬರ್ಗಾ part ಬರುತ್ತದೆ, ರಾಯಚೂರು part ಬರುತ್ತದೆ. ಕೊಪ್ಪಳ part ಬರುತ್ತದೆ. ಇವೆಲ್ಲಾ ನೀರಾವರಿ ಆಗಬೇಕೆಂದರೆ ಇವು ಆಗಲೇಬೇಕು. ಅವರು ಮಾಡೇ ಬಿಡುತ್ತೇನೆ ಎಂದು ಹೇಳುತ್ತಾರೆ. ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಅದನ್ನು ನೋಡಿದರೆ ತಮಗೆ ಆಶ್ಚರ್ಯವಾಗಬಹುದು. ಯಾವಾಗ complete ಮಾಡುತ್ತೀರಿ ಎಂದು ಕೇಳಿದರೆ 2018 ಕ್ಕೆ complete ಮಾಡುತ್ತೇವೆ ಎಂದು ಹೇಳುತ್ತಾರೆ. ಸಾರ್, ಆಗ ಸರ್ಕಾರದ ಅವಧಿಯೇ ಮುಗಿಯುತ್ತದೆ. ಯಾವಾಗ complete ಮಾಡುತ್ತಾರೆ? ನಾನು ಆಸೆ ಇಟ್ಟುಕೊಂಡಿದ್ದೆ. ಮಾನ್ಯ ಎಂ.ಬಿ. ಪಾಟೀಲ್‌ರವರು ಬರಗಾಲ ಜಿಲ್ಲೆಯಲ್ಲಿ ಹುಟ್ಟಿ ಬಂದಂತಹವರು. ರೈತ ಮನೆತನದಿಂದ ಬಂದಂತಹವರು, ಕೃಷಿ ಬಗ್ಗೆ ಅತ್ಯಂತ ಕಳಕಳಿ, ಕಾಳಜಿ ಇರುವವರು. ಎರಡು ವರ್ಷದಲ್ಲಿ ನನ್ನ ಕಣ್ಣ ಮುಂದೆ ನಮ್ಮ ಕಲ್ಲು ಭೂಮಿಗೆಲ್ಲಾ ನೀರು ಬರುತ್ತದೆ ಎಂದು ತಿಳಿದುಕೊಂಡಿದ್ದೆ. ಗುಳೆ ಗೋವಾಕ್ಕೆ ಹೋಗುವುದು ತಪ್ಪುತ್ತದೆ, ದಾಂಡೇಲಿಗೆ ಹೋಗುವುದು ತಪ್ಪುತ್ತದೆ, ಮಂಗಳೂರಿಗೆ ಹೋಗುವುದು ತಪ್ಪುತ್ತದೆ. ಕರಾಡಕ್ಕೆ ಹೋಗುವುದು ತಪ್ಪುತ್ತದೆ ಎಂದು ತಿಳಿದುಕೊಂಡಿದ್ದೆ. ಆದರೆ ಗುಳೆ ಹೋಗುವುದನ್ನು ಅವರು ಹಾಗೆಯೇ ಇಟ್ಟುಕೊಂಡರು. ಅದನ್ನು ಏನೂ ಮಾಡುವುದಕ್ಕೆ ಆಗಿಲ್ಲ.

ಇವು ಆಗಬೇಕಾದರೆ 50,000 ಕೋಟಿ ರೂ.ಗಳು ಬೇಕು, ಈ 9 ಸ್ಕೀಂ ಗಳು ಮತ್ತು 524.256 ಅಡಿಗೆ ನೀರು ನಿಲ್ಲಿಸಬೇಕಾದರೆ including rehabilitation, resettlement ಸೇರಿ ಇವತ್ತಿನ money value ನಲ್ಲಿ 50,000 ಕೋಟಿ ರೂ.ಗಳು ಬೇಕೆ. ಇನ್ನು ಹೆಚ್ಚು ಬೇಕಾದರೆ ಜೆ.ಟಿ. ಪಾಟೀಲರೆ, ನೀವು

ಮಾತನಾಡುವಾಗ ಹೇಳಿ. ಅದಕ್ಕಾಗಿ ನಾನೇನು ವಿನಂತಿ ಮಾಡುತ್ತೇನೆಂದರೆ, ಮುಖ್ಯಮಂತ್ರಿಗಳು ಮಧ್ಯೆದಲ್ಲಿ intervene ಆಗಿ ಬಿಟ್ಟರು. ನೀವು 10,000 ಕೋಟಿ ರೂ.ಗಳನ್ನು ಮಾತ್ರ ಕೊಟ್ಟರೆ ನಿಮ್ಮ ಮಾತಿಗೆ ಬೆಲೆ ಬರುತ್ತದೆ ಇಲ್ಲದಿದ್ದರೆ ಬರುವುದಿಲ್ಲ. 10,000 ಕೋಟಿ ರೂ.ಗಳನ್ನು ಕೊಡದೆ ಹೋದರೆ ಆ ಯೋಜನೆಗಳು ಖಂಡಿತವಾಗಿ ಆಗುವುದಿಲ್ಲ. ನಾನು ಸರ್ಕಾರಕ್ಕೆ ಏನು ವಿನಂತಿ ಮಾಡುತ್ತೇನೆಂದರೆ, . . . ಹಿಂದಿನ ನೀರಾವರಿ ಮಂತ್ರಿಗಳಾದ ಬಸವರಾಜ ಬೊಮ್ಮಾಯಿಯವರು ಇದ್ದಾರೆ ಅವರು ಹೇಳುತ್ತಾರೆ. ನಾನು ಜಾಸ್ತಿ time ತೆಗೆದುಕೊಳ್ಳುವುದಿಲ್ಲ, ಏಕೆಂದರೆ ಅವರು ಮಾತನಾಡುವವರು ಇದ್ದಾರೆ. ಅದಕ್ಕಾಗಿ ನಾನು ಮಾನ್ಯ ನೀರಾವರಿ ಸಚಿವರಿಗೆ ಏನು ವಿನಂತಿ ಮಾಡುತ್ತೇನೆಂದರೆ, ನೀವು ಇದರ ಬಗ್ಗೆ ಹೆಚ್ಚು ಗಮನವನ್ನು ಹರಿಸಬೇಕು. ಈ ವರ್ಷ ಸಾಲ ಮರುಪಾವತಿ ಬಿಟ್ಟರೆ ಅವರು ಕೃಷ್ಣ ಮೇಲ್ದಂಡೆ ಯೋಜನೆಯ ಕಾಮಗಾರಿಗಳಿಗೆ 400 ಕೋಟಿ ರೂ.ಗಳನ್ನು civil work ಗೆ ಖರ್ಚು ಮಾಡುವುದಿಲ್ಲ. ಈ ಪ್ರಮಾಣದಲ್ಲಿ ಹೋದರೆ ನೀವು ಯಾವಾಗ ಮುಗಿಸುತ್ತೀರಿ. ಹಿಂದೆ ತಂದ ಸಾಲ ಕೊಡುವುದೇ ಆಗಿದೆ. ಸಾಲದ ಮರು ಪಾವತಿ ನಡೆದಿದೆ. ಮರುಪಾವತಿಯು ಸೇರಿಸಿ ನೀವು ನಮಗೆ ಲೆಕ್ಕ ಕೊಟ್ಟರೆ ನಾವು ಏನು ಹೇಳಬೇಕು. ಅಲ್ಲಿ civil ಕಾಮಗಾರಿಗಳು ಹೇಗೆ ಆಗಬೇಕು. 22 ಹಳ್ಳಿಗಳ ಪುನರ್ವಸತಿ ಹೇಗೆ ಆಗಬೇಕು. ಒಂದು ಲಕ್ಷ ಎಕರೆ ಜಮೀನಿಗೆ ಪರಿಹಾರ ಕೊಡಬೇಕು. 72,000 ಎಕರೆ ಜಮೀನಿಗೆ rehabilitation, resettlement ಎಲ್ಲವೂ ಬೇಕಾಗುತ್ತದೆ.

ಶ್ರೀ ಎಂ.ಬಿ. ಪಾಟೀಲ್:– Head work, canal network ಎಲ್ಲವೂ ನಾವು update ಇದ್ದೇವೆ. Record ನೋಡಿ. Land acquisition ನಲ್ಲಿ ನೂತನ ಭೂಕಾಯಿದೆ ಒಂದನ್ನು ಬಿಟ್ಟರೆ .. ನೀವು ಏಕೆ ಸುಮ್ಮನೆ ಸುಳ್ಳು ಹೇಳುತ್ತೀರಿ.

ಶ್ರೀ ಗೋವಿಂದ ಎಂ. ಕಾರಜೋಳ:– ನೀವು ಮೊನ್ನೆ 6 ತಾಸು ಉತ್ತರ ಕೊಟ್ಟಿರುತ್ತೀರಿ, ನಾವು ಬಹಳ patience ದಿಂದ ಕುಳಿತಿದ್ದೇ, ನಾನು ಹೊರಗೆ ಹೋಗದೆ ಇಲ್ಲಿಯೇ ಕುಳಿತಿದ್ದೆ ನಿಮಗೆ ಗೊತ್ತಿದೆಯೋ ಇಲ್ಲವೋ? ನೀವು ಏನು ಉತ್ತರ ಕೊಡುತ್ತೀರೆಂದು ಕೇಳುವ ಸಲುವಾಗಿಯೆ ಕುಳಿತಿದ್ದೆ. ಅವರು ಈ

ಸಲ 9 ತಾಸು ಉತ್ತರ ಕೊಡುತ್ತಾರೆ. ಅದಕ್ಕಾಗಿ ಈ ಸಲ ಅವರನ್ನು ತಯಾರು ಮಾಡಿದ್ದಾರೆ. ನಾನು ಸರ್ಕಾರಕ್ಕೆ ಕಳಕಳಿಯಿಂದ ಮನವಿ ಮಾಡುತ್ತೇನೆ. ನಮ್ಮ ಜನ 350 ವರ್ಷದಿಂದ ಪದೇ ಪದೇ ಬರಗಾಲಕ್ಕೆ ತುತ್ತಾಗತಕ್ಕಂಥವರು. ಕುಡಿಯುವ ನೀರಿಗೆ ಪರದಾಡತಕ್ಕಂಥವರು, ಕೃಷಿ ಭೂಮಿ ಮೂರು-ನಾಲ್ಕು ವರ್ಷ ಭಿತ್ತನೆ ಆಗದಂಥ ಜಿಲ್ಲೆಯವರು ನಮಗೆ 5 ನದಿಗಳು ಹರಿದರೂ ನೀರಾವರಿಯಿಂದ ವಂಚಿತರಾಗಿದ್ದೇವೆ. ಮುಂಬೈ ಪ್ರಾಂತ್ಯದಲ್ಲಿದ್ದಾಗಲೇ ಬಿಜಾಪುರ ಜಿಲ್ಲೆ ನೀರಾವರಿ ಕೊಯಿನಾ ಡ್ಯಾಮಿನ ಕೆಳಗಡೆ ಆಗುತ್ತಿತ್ತು. ನಾವು ಯಾರನ್ನು blame ಮಾಡುವುದಿಲ್ಲ, ನಮ್ಮವರೆ ಮುಖ್ಯಮಂತ್ರಿಗಳು ಇದ್ದರು. ಅವತ್ತಿಗೆ ನಮ್ಮ ಪಾಲಿನ ಹಣ ಕೊಟ್ಟಿದ್ದರೆ ನೀರಾವರಿ 50 ವರ್ಷದ ಹಿಂದೆಯೇ ಆಗುತ್ತಿತ್ತು, ಆಗಲಿಲ್ಲ. ಈಗಲೂ ಕೂಡ ಅದೇ ಪರಿಸ್ಥಿತಿ ನಮಗೆ ಬರಬಾರದು ಎಂದು ಹೇಳಿ ನಾನು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ.

ಅಧ್ಯಕ್ಷರು:- ಅಲ್ಲಿ ಈಗ ಎಷ್ಟು ಜಮೀನು acquire ಮಾಡಬೇಕು.

ಶ್ರೀ ಗೋವಿಂದ ಎಂ. ಕಾರಜೋಳ:- ಒಂದು ಭಾಗ 72,000 ಎಕರೆ ಜಮೀನು acquire ಮಾಡಬೇಕು.

ಶ್ರೀ ಜೆ.ಟಿ. ಪಾಟೀಲ್:- 1.23 ಲಕ್ಷ ಎಕರೆ ಜಮೀನು acquire ಮಾಡಬೇಕು.

ಶ್ರೀ ಗೋವಿಂದ ಎಂ. ಕಾರಜೋಳ:- Rehabilitation ಸೇರಿ ಅಲ್ಲ. Rehabilitation ಬಿಟ್ಟು.

ಅಧ್ಯಕ್ಷರು:- ಒಳ್ಳೆಯದು. ಮಾನ್ಯ ಸಚಿವರೆ, ಈಗ ಕಾನೂನಿನ ಪ್ರಕಾರ ನೀವು ಅಷ್ಟು ಜಮೀನನ್ನು ಸ್ವಾಧೀನಪಡಿಸಿಕೊಳ್ಳಬೇಕಾದರೆ ಎಷ್ಟು ದಿವಸ ಹಿಡಿಯುತ್ತದೆ?

ಶ್ರೀ ಎಂ.ಬಿ. ಪಾಟೀಲ್ (ಜಲಸಂಪನ್ಮೂಲ ಸಚಿವರು):- ಮಾನ್ಯ ಅಧ್ಯಕ್ಷರೆ, head work, canal network infrastructure ಏನಿದೆ ಎಲ್ಲವನ್ನು ನಾವು 2017-18ನೇ ಸಾಲಿಗೆ ಮುಗಿಸುವುದರಲ್ಲಿದ್ದೇವೆ. ಒಂದು ಲಕ್ಷ ಎಕರೆ

ಜಮೀನು ಏನು ಮುಳುಗಡೆ ಆಗುತ್ತದೆ ಮತ್ತು 22 ಹಳ್ಳಿಗಳು ಸ್ಥಳಾಂತರವಾಗುತ್ತದೆ. ತಮಗೆ ಗೊತ್ತಿದೆ ಕಳೆದ ಒಂದು ವರ್ಷದಿಂದ ನೂತನ ಭೂಕಾಯಿದೆ ಬರುವುದರಿಂದ ದೇಶದ ಎಲ್ಲಾ ಕಡೆ land acquisition, R & R ಇವತ್ತಿನ ದಿವಸ stagnant ಆಗಿದೆ. ಒಂದು ಲಕ್ಷ ಎಕರೆ ಜಮೀನು ಈಗ ಏನು ಮುಳುಗಡೆ ಆಗುತ್ತದೆ ಸುಮಾರು 12 ಲಕ್ಷ ಎಕರೆ ಜಮೀನು ಇವತ್ತು ಅಲ್ಲಿ cost benefit ration ನೀರಾವರಿ ಆಗುತ್ತದೆ. ಈಗ rules frame ಮಾಡಿದ್ದೇವೆ. ಕೇಂದ್ರದಲ್ಲಿ ಏನು ordinance ತಂದರು ಅದನ್ನು Cabinet ನಲ್ಲಿ defer ಮಾಡುವಂಥದ್ದಾಯಿತು. ಈಗ rules frame ಆದ ಮೇಲೆ ಇವತ್ತಿನ ದಿವಸ ನಾವು land acquisition ಮತ್ತು R.& R ಆ ಕಡೆ ಹೆಚ್ಚಿನ ಒಂದು ಒತ್ತನ್ನು ಕೊಡುತ್ತೇವೆ. ಆದರೆ ಮಾನ್ಯ ಕಾರಜೋಳರವರು ಹೇಳಿದ ಹಾಗೆ ಏನು ಕೆಲಸ ಆಗುತ್ತಿಲ್ಲವೆಂದು ಹೇಳುತ್ತಿದ್ದಾರೆ, ಬಹುಶಃ ಅವರು ಅಲ್ಲಿ ಹೋಗಿ ನೋಡಿಲ್ಲ. ಅಲ್ಲಿ ಹೋಗಿ ನೋಡಿದರೆ ಗೊತ್ತಾಗುತ್ತದೆ. ಎಲ್ಲದರಲ್ಲೂ 6 ತಿಂಗಳ ಒಂದು ವರ್ಷ ನಾವು ಆ head work, canal network ಕೆಲಸಗಳಲ್ಲಿ ahead ನಲ್ಲಿದ್ದೇವೆ.

ಅಧ್ಯಕ್ಷರು:- ಈ ದೇಶದಲ್ಲಿ ಒಂದು ವಾದ ನಡೆಯುತ್ತಿದೆ. ಹೊಸ land acquisition ಸಲುವಾಗಿ ಕಾನೂನು ಪ್ರಕಾರವಾಗಿ ಜಮೀನಿನ ಮಾಲೀಕನ ಸಮ್ಮತಿ ಪಡೆಯಬೇಕು ಮತ್ತು ವಗ್ಯೆರೆ ವಗ್ಯೆರೆ ಏನೇನೋ ಇದೆ. ಅವರು ಒಂದು ordinance ತಂದಿದ್ದಾರೆ, ಎರಡು ವಾದ ನಡೆಯುತ್ತಿದೆ. ಈ ordinance ತರುವುದರಿಂದ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ತೊಂದರೆ ಆಗುತ್ತದೋ, ಸಹಾಯವಾಗುತ್ತದೋ?

ಶ್ರೀ ಎಂ.ಬಿ. ಪಾಟೀಲ್:- ಇದು ನಮ್ಮ Irrigation Department ಗೆ ಮೊದಲಿನಿಂದಲೂ Act ನಲ್ಲಿ exempted ಇದೆ. ನಮ್ಮಲ್ಲಿ ಅಲ್ಲಿ consent ಆಗಲೀ, social impact studies ಆಗಲೀ Irrigation Department ನಲ್ಲಿ ಮೊದಲು ಸಹ ಇಲ್ಲ. ಅಲ್ಲಿ ಒಂದು ಸಮಸ್ಯೆ ಬರುತ್ತಿತ್ತು. ಮೊನ್ನೆ ನಾನು ಮಾನ್ಯ ಹಿಂದಿನ ನೀರಾವರಿ ಸಚಿವರ ಜೊತೆಯಲ್ಲಿ ಚರ್ಚೆ ಮಾಡುತ್ತಿದೆ. ನೀರಾವರಿ ಭೂಮಿ ಇಂತಿಷ್ಟು ಅಷ್ಟನ್ನೆ acquire ಮಾಡಬೇಕೆಂದು percentage

ಇತ್ತು. ಆ ಒಂದು point ordinance ನಲ್ಲಿ ನಮಗೆ ಸಹಕಾರಿ ಆಗುತ್ತದೆ. ಅದನ್ನು ಹೊರತುಪಡಿಸಿದರೆ ಹಿಂದೆಯೂ ಕೂಡ ನಮಗೆ Act ನಲ್ಲಿ ಬಾಧಕ ಇರಲಿಲ್ಲ. Irrigation Department was exempted from all these processes. Consent ಆಗಲಿ ಎಲ್ಲದಕ್ಕೂ exempted ಇತ್ತು. ಒಂದು ತೊಂದರೆ ನಮಗೆ ಬರುತ್ತಿತ್ತು. ಬೀಳಗಿ ತಾಲ್ಲೂಕಿನಲ್ಲಿ ಬಹಳಷ್ಟು ನೀರಾವರಿ ಜಮೀನುಗಳು ಇರುವುದರಿಂದ ಒಂದು ತೊಂದರೆ ಆಗುತ್ತಿತ್ತು. ಆ ordinance ನಲ್ಲಿ ಅದು cover ಆಗಿದೆ. ಅದೊಂದು ನಮಗೆ ಸಹಕಾರಿಯಾಗುತ್ತದೆ.

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಅಧ್ಯಕ್ಷರೆ, Right to Fair Compensation and Transparency in Land Acquisition Rehabilitation and Resettlement Act, 2013 ಏನು ಇದೆ ಇವರಿಗೆ ಅಷ್ಟು ಸುಲಭವಾಗಿ land acquisition ಮಾಡುವುದಕ್ಕೆ ಆ Act ಬಿಡುವುದಿಲ್ಲ. ಅದನ್ನು ಇವರು ಅರ್ಥ ಮಾಡಿಕೊಂಡು ಮೊದಲೇ acquisition ಗೆ ಹೋದರೆ ನಮಗೆ in time ಮಾಡುವುದಕ್ಕೆ ಸಾಧ್ಯವಾಗುತ್ತದೆ ಇಲ್ಲವೆಂದರೆ ಆಗುವುದಿಲ್ಲ. ಇವರು ಸುಮ್ಮನೆ ನಾವು head work ಮಾಡಿದ್ದೇವೆ canal ತೋಡಿಸಿದ್ದೇವೆಂದರೆ ಆಗುವುದಿಲ್ಲ. ನಿಮ್ಮ rehabilitation, resettlement ಆಗದ ಹೊರತು ಡ್ಯಾಂ ನಲ್ಲಿ ನಿಮಗೆ ನೀರು ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ. ಈಗ 524 ಮೀಟರ್ height ಗೆ ನಾವು ಡ್ಯಾಂ ಕಟ್ಟಿದ್ದೇವೆ. ಹಿಂದೆ ನಮ್ಮ ತಪ್ಪಿಗಾಗಿ ಗೇಟ್ ಕಟ್ ಮಾಡಿದ್ದೇವೆ. ಈಗ ಗೇಟ್ ಕೂಡಿಸಿ ಅಳವಡಿಸಿ ಡ್ಯಾಂನಲ್ಲಿ ನೀರು ನಿಲ್ಲಿಸುವುದಕ್ಕೆ ಬಹಳ ಸಮಯ ಬೇಕಾಗಿಲ್ಲ. 6 ತಿಂಗಳೊಳಗೆ ನೀರು ನಿಲ್ಲಿಸಬಹುದು. ಆದರೆ rehabilitation, resettlement ಆಗಿಲ್ಲ. Land acquisition ಆಗಬೇಕು. ಈಗ ಇದ್ದ structure ನಲ್ಲಿ 23 ಹಳ್ಳಿಗಳು ಮುಳುಗಡೆ ಆಗುತ್ತವೆ. ಅವರಿಗೆ compensation ಕೊಟ್ಟು ಅವರನ್ನು ಬೇರೆ ಕಡೆಗೆ settlement ಮಾಡಿಸಬೇಕು, ಆ ಕೆಲಸ ಆಗಿಲ್ಲ. ಅದಕ್ಕಾಗಿ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಅದರ ಕಡೆಗೆ ಗಮನಹರಿಸಿ ಬೇಕಾದರೆ 5 ವರ್ಷ ಈ ಸರ್ಕಾರದ buildings ಗಳಿಗೆ maintenance holiday ಮಾಡಿಬಿಡಿ. ದುಡ್ಡು ಕೊಡಬೇಡಿ. ಸಣ್ಣ ಬಣ್ಣಗಳಿಗೆ contingence expenditure ನಲ್ಲಿ

miscellaneous ಏನು ಕೊಡುತ್ತೀರಿ, ಅದನ್ನು ಬಂದ್ ಮಾಡಿ. ಆ ಹಣವನ್ನು ಅಲ್ಲಿಯೆ ಕೊಡಿ, ನೀರಾವರಿ ಆಗುತ್ತದೆ. ಉಳಿದಿದ್ದರಲ್ಲಿ ನೀವು ಕಡಿಮೆ ಮಾಡಿ. ವಿಧಾನಸೌಧಕ್ಕೆ 5 ವರ್ಷ ಸುಣ್ಣ ಬಣ್ಣ ಹಚ್ಚದಿದ್ದರೆ ಏನು ಆಗುವುದಿಲ್ಲ. ರಾಜ್ಯದಲ್ಲಿ ಸರ್ಕಾರಿ ಕಟ್ಟಡ ಏನಿದೆ maintenance ಹಣ ತೆಗೆದು 10,000 ಕೋಟಿ ರೂ.ಗಳನ್ನು ಅದಕ್ಕೆ ಕೊಡಿ. ಪ್ರತಿ ವರ್ಷ 5 ವರ್ಷಕ್ಕೆ ಕೊಟ್ಟರೆ ನೀವು ಉದ್ಘಾಟನೆ ಮಾಡಿಯೆ ಖಂಡಿತವಾಗಿ ಹೋಗುತ್ತೀರಿ. ಆ ಕೆಲಸವನ್ನು ನೀವು ಮಾಡಬೇಕೆಂದು ಹೇಳಿ ನಾನು ವಿನಂತಿ ಮಾಡುತ್ತೇನೆ. ಮಾನ್ಯ ಲೋಕೋಪಯೋಗಿ ಸಚಿವರು ಇಲ್ಲ. Sir wonderful ಅಂದರೆ ಇವತ್ತಿನವರೆಗೂ ನಾವು ಫೆಬ್ರವರಿ ತಿಂಗಳನಲ್ಲಿದ್ದೇವೆ. 2014–15ನೇ ಸಾಲಿನ ಕ್ರಿಯಾ ಯೋಜನೆ ಇವತ್ತಿನವರೆಗೂ ಹೊರಗೆ ಬರಲಿಲ್ಲ. ನಾವು 2014–15ನೇ ಸಾಲಿನ ಬಜೆಟ್ ಅನ್ನು ಮಾರ್ಚ್–2014 ರಲ್ಲಿ ಏನು ಮಂಜೂರು ಮಾಡಿ ಕೊಟ್ಟಿದ್ದೇವೆ ಆ ಕ್ರಿಯಾ ಯೋಜನೆ ಇವತ್ತಿನವರೆಗೂ ಹೊರಗೆ ಬರಲಿಲ್ಲ. ಒಂದೇ ಒಂದು ಕೆಲಸವಾಗುತ್ತಿಲ್ಲ. ಇಲ್ಲಿ ಪೂರ್ಣ ಮಾಹಿತಿ ತೆಗೆದುಕೊಂಡು ಬಂದಿದ್ದೇನೆ. ಈ ರೀತಿ ಆದರೆ ರಾಜ್ಯದ ರೋಡ್‌ಗಳ ಪರಿಸ್ಥಿತಿ ಏನು? ರೋಡ್‌ಗಳು ಉಳಿಯಲಿಕ್ಕೆ ಸಾಧ್ಯವಿಲ್ಲ. ಎಲ್ಲಿಯೂ ಹೋಗುವುದಕ್ಕೆ ಆಗದಿರುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಇದು ಬಹಳ ದೊಡ್ಡ ಇಲಾಖೆ. ನೀವು ಬಜೆಟ್ ಅನುಮೋದನೆ ಮಾಡಿಕೊಟ್ಟ ಮೇಲೆ ಮುಂದಿನ ಒಂದು ತಿಂಗಳಲ್ಲಿ ನೀವು ಕ್ರಿಯಾ ಯೋಜನೆ ಕೊಟ್ಟರೆ ಅಡ್ಡಿ ಇಲ್ಲ. ಅವತ್ತೆ ಬಜೆಟ್ ಮುಗಿದ ಕೂಡಲೇ ಅನುಮೋದನೆ ಕೊಡುವ ಟೈಮ್‌ಗೆ ಕೊಡಬೇಕು. ನಾವು lump sum allocation ಮಾಡಿರುತ್ತೇವೆ. Next ಒಂದು ತಿಂಗಳಾದರೂ ನೀವು action plan ಕೊಟ್ಟರೆ ಏನಾದರೂ ಕೆಲಸ ಕಾರ್ಯಗಳು ಆಗುತ್ತವೆ. Action plan ಈಗ ಮಾಡಿದರೆ ಈ ವರ್ಷದ ಬಜೆಟ್ ಪರಿಸ್ಥಿತಿ ಏನು? Next year ಗೆ ಈ ವರ್ಷದ್ದು spill over ಆಗುತ್ತದೆ. Next year ಗೆ burden ಆಗಿ double ಆಗುತ್ತದೆ. ಮಾರ್ಚ್–31 ಕ್ಕೆ ನಿಮ್ಮ ಹಣ lapse ಆಗುತ್ತದೆ. ಏಕೆ ಮಾಡುತ್ತಿಲ್ಲ ಏನು ತೊಂದರೆ ಇದೆ ಎಂದು ನನಗೆ ಗೊತ್ತಿಲ್ಲ. ಇಲಾಖೆಯೊಳಗೆ ಜನ

ಇಲ್ಲವೋ? Action plan ಮಾಡುವಂಥ ಅನುಭವಸ್ಥರು ಇಲ್ಲವೋ? 15.42% expenditures.

ಅಧ್ಯಕ್ಷರು:– Current year ನಲ್ಲಿ.

ಶ್ರೀ ಗೋವಿಂದ ಎಂ. ಕಾರಜೋಳ:– Current year ನಲ್ಲಿ. ಈ ರೀತಿ ಆದರೆ ಕೆಲಸಗಳು ಹೇಗೆ ಆಗುತ್ತದೆ? ರಾಜ್ಯದ ಪರಿಸ್ಥಿತಿ ಏನಾಗುತ್ತದೆ? ಇವತ್ತು ರಸ್ತೆಗಳಿಲ್ಲ. ರಸ್ತೆಗಳ ಬಗ್ಗೆ ಹೆಚ್ಚಿನ ಗಮನ ಕೊಡಬೇಕಲ್ಲವೇ? ಗುಂಡಿ ಮುಚ್ಚುವುದಿಲ್ಲ ಅಷ್ಟೇ ಅಲ್ಲ, ಅಲ್ಲಿ ಹಾದು ಹೋಗಲಿಕ್ಕೆ ಸಾಧ್ಯವಿಲ್ಲ. ನೂರು ಕಿ.ಮೀ. ಒಂದು ದಿನಕ್ಕೆ ಹೋಗಿ ಬಂದರೆ 8 ದಿವಸಗಳು ಆಸ್ಪತ್ರೆಯಲ್ಲಿ admit ಆಗುವ ಪರಿಸ್ಥಿತಿ ಬರುತ್ತದೆ. ರಾಜ್ಯದಲ್ಲಿ ಬಹಳ ದೊಡ್ಡ infrastructure ಇದೆ. 50–60 ವರ್ಷಗಳಲ್ಲಿ ಸಾಕಷ್ಟು ರಾಜ್ಯ ಹೆದ್ದಾರಿಗಳು, ರಾಷ್ಟ್ರ ಹೆದ್ದಾರಿಗಳು, major district roads ಮಾಡಿದ್ದಾರೆ. ಅವನ್ನೆಲ್ಲಾ ಮಾಡಿಕೊಡುವುದಕ್ಕೆ ಸ್ವಲ್ಪ ಸರ್ಕಾರ ಗಮನ ಹರಿಸಬೇಕೆಂದು ಹೇಳಿ ನಾನು ಒತ್ತಾಯ ಮಾಡಲಿಕ್ಕೆ ಬಯಸುತ್ತೇನೆ. ಏಕೆ ಮಾಡಲಿಲ್ಲವೋ ಗೊತ್ತಿಲ್ಲ, ಕ್ರಿಯಾ ಯೋಜನೆ ಮಾಡಿಲ್ಲವೆಂದರೆ ಈ ಇಲಾಖೆ ಮೇಲೆ ಏನು ಮಾತನಾಡಬೇಕು ಹೇಳಿ? ಏನೂ ಮಾತನಾಡಲಿಕ್ಕೆ ನಮ್ಮ ಹತ್ತಿರ ಬಂಡವಾಳ ಇಲ್ಲ. ಅದಕ್ಕೆ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಎರಡು ವರ್ಷದ್ದೂ ಸೇರಿ ಮಾಡಿದರೆ ಅಡ್ಡಿಯಿಲ್ಲ. 5 ವರ್ಷಗಳದ್ದು ಸೇರಿಸಿ ಒಮ್ಮೆಗೆ ಬಜೆಟ್‌ಗೆ ಅನುಮೋದನೆ ಕೊಡಿ. ಈ ವರ್ಷ ಬಿಟ್ಟುಬಿಡೋಣ. ಮಾನ್ಯ ಸಭಾಧ್ಯಕ್ಷರೆ, ಹಿಂದುಳಿದ ಇಲಾಖೆಯದ್ದು ಸಾಕಷ್ಟು ಅನುದಾನ ಇದೆ. ಆದರೆ ಇಲಾಖೆಯ ಕಾರ್ಯಕ್ರಮಗಳೇನು ಇವೆ ಅವು ಸರಿಯಾಗಿ ಆಗುತ್ತಿಲ್ಲ. ಇವತ್ತು ಹಿಂದುಳಿದ ವರ್ಗದವರಿಗೂ ಕೂಡ ಗಂಗಾ ಕಲ್ಯಾಣ ವ್ಯವಸ್ಥೆ ಇದೆ, ಸಾಲದ ವ್ಯವಸ್ಥೆ ಇದೆ. ಅವರ ಮಕ್ಕಳಿಗೂ ಕೂಡ ಶಿಕ್ಷಣದ ವ್ಯವಸ್ಥೆ ಇದೆ. ಆ ನಿಟ್ಟಿನಲ್ಲಿ ಇವತ್ತು ಸರಿಯಾಗಿ ಕೆಲಸ ಕಾರ್ಯಗಳು ಆಗುತ್ತಿಲ್ಲ. ಅನೇಕ ಕಡೆ ಇವತ್ತು ಹಾಸ್ಟೆಲ್‌ಗಳಿಲ್ಲದೆ ಮಕ್ಕಳು ಬಾಡಿಗೆ ಕಟ್ಟದೆ ಬಹಳಷ್ಟು ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಅದಕ್ಕಾಗಿ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಈ

ಇಲಾಖೆಯಿಂದ ಆಗತಕ್ಕಂಥ ಕೆಲಸ ಕಾರ್ಯಗಳನ್ನು ಬೇಗನೆ ಮಾಡಬೇಕು, ಪೂರ್ಣ ಹಣ ಖರ್ಚು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು:– ಅದರಲ್ಲಿ ಈಗ ಎಷ್ಟು ಖರ್ಚಾಗಿದೆ?

ಶ್ರೀ ಗೋವಿಂದ ಎಂ. ಕಾರಜೋಳ:– ಅದರಲ್ಲಿ 42% ಆಗಿದೆ. ಏಕೆಂದರೆ Boarding charges ಎಂದು ಬರುತ್ತದೆ ಅದನ್ನು ಬಂದ್ ಮಾಡಲಿಕ್ಕೆ ಬರುವುದಿಲ್ಲ. Boarding ದ್ದು ದೊಡ್ಡ ಕಥೆಯಿದೆ. ಈಗ Boarding ವ್ಯವಸ್ಥೆ ಏನಾಗಿದೆ, ಆಹಾರ supply ಭಯಂಕರ ಮಂದಿ ಕಂಟ್ರಾಕ್ಟರು ಹುಟ್ಟಿಕೊಂಡುಬಿಟ್ಟಿದ್ದಾರೆ. PWD ಯಲ್ಲಿ ಹುಟ್ಟಿದಂತೆ ಅಲ್ಲಿಯೂ ಹುಟ್ಟಿಕೊಂಡು ಬಿಟ್ಟಿದ್ದಾರೆ. ಅದ್ಯಾಕೋ ಅಲ್ಲಿಯೂ ವ್ಯವಸ್ಥೆ ಸರಿಯಾಗಿಲ್ಲ. ಅದಕ್ಕೆ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಈ middlemen ಗಳನ್ನು ಬಿಡಿಸಿ ನೇರವಾಗಿ APMC ಮೂಲಕ ನಿಮ್ಮ ಸರ್ಕಾರದ warehousing ಮೂಲಕ purchase ಮಾಡಿ ಈ ಆಹಾರ ಕೊಡುವಂಥ ವ್ಯವಸ್ಥೆ ಆಗಬೇಕು. ಇಲ್ಲದಿದ್ದರೆ ಬಡವರ ಮಕ್ಕಳಿಗೆ ಅನ್ಯಾಯವಾಗುತ್ತದೆ. ನೂರಕ್ಕೆ ನೂರರಷ್ಟು ಅಲ್ಪಸಂಖ್ಯಾತರ ಓಟು ಪಡೆದು ಅಧಿಕಾರಕ್ಕೆ ಬಂದಿರುವಂಥ ಸರ್ಕಾರ ಅವರಿಗೆ ಬಜೆಟ್‌ನಲ್ಲಿ 134 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಅವರಿಗಾಗಿ ಸರ್ಕಾರ ಘೋಷಣೆ ಮಾಡಿರುವಂಥದ್ದು 20 ಕಾರ್ಯಕ್ರಮಗಳು ಇವೆ. ಆ 20 ಕಾರ್ಯಕ್ರಮಗಳ ಪ್ರಗತಿ ನೀವು ನೋಡಬೇಕು. 25–30% ಕೂಡ ಇವತ್ತು achievement ಆಗಿಲ್ಲ. ನಾವು ಫೆಬ್ರವರಿ ತಿಂಗಳಿನಲ್ಲಿದ್ದೇವೆ. ಅಲ್ಪಸಂಖ್ಯಾತರ ಮೂಗಿಗೆ ತುಪ್ಪ ಹಚ್ಚಿ ಕೂರಿಸಿರುವಂಥ ಸರ್ಕಾರ ಅವರ ಕಲ್ಯಾಣಕ್ಕಾಗಿ ಕಾರ್ಯಕ್ರಮಗಳನ್ನು ಮಾಡಬೇಕಲ್ಲವೇ? ಉದಾಹರಣೆ ಇದೆ. ಈ 20 ಕಾರ್ಯಕ್ರಮಗಳ ಪಟ್ಟಿಯನ್ನು ಓದಿ ಎಂದರೆ ಓದಿ ಬಿಡುತ್ತೇನೆ. ಅಲ್ಪ ಸಂಖ್ಯಾತರ ಬಗ್ಗೆ ಸರ್ಕಾರ ಘೋಷಣೆ ಮಾಡಿರುವ 20 ಕಾರ್ಯಕ್ರಮಗಳಿವೆ. ಅದಕ್ಕೋಸ್ಕರ ನಾನೇನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆಂದರೆ ಈ ಅಲ್ಪಸಂಖ್ಯಾತರಲ್ಲಿಯೂ ಕೂಡ ಬಹಳಷ್ಟು ಜನ ಬಡವರಿದ್ದಾರೆ. ಅವರಿಗೆ ಶಿಕ್ಷಣಕ್ಕೆ ಹೆಚ್ಚಿನ ವ್ಯವಸ್ಥೆ ಮಾಡಬೇಕು. ಅಲ್ಪಸಂಖ್ಯಾತರು ಕೇವಲ ಮದರಸಗಳಿಗೆ ಹೋಗಿ ಶಿಕ್ಷಣ ಆಗುವುದಿಲ್ಲ. ಶಿಕ್ಷಣ ಇಂಗ್ಲಿಷ್, ಹಿಂದಿ, ಕನ್ನಡದಲ್ಲಿ ..

ಅಧ್ಯಕ್ಷರು:- ಮುಖ್ಯಮಂತ್ರಿಗಳ ಭಾಷಣದಲ್ಲಿ ಅದೆಲ್ಲಾ ಇದೆ. ವಿದ್ಯಾರ್ಥಿ ನಿಲಯಗಳನ್ನು ತೆಗೆಯಲಿಕ್ಕೆ, ವಿದ್ಯಾರ್ಥಿಗಳಿಗೆ ಸಹಾಯ ಮಾಡಲಿಕ್ಕೆ ಎಲ್ಲಾ ಇದೆ.

ಶ್ರೀ ಗೋವಿಂದ ಎಂ. ಕಾರಜೋಳ:- ಅವರಿಗೆ ವಿದ್ಯಾರ್ಥಿ ನಿಲಯಗಳನ್ನು ಮಾಡಲಿ, ಅವರಿಗೂ ವಸತಿ ಶಾಲೆಗಳನ್ನು ಮಾಡಲಿ. ಅವರ ಮಕ್ಕಳೂ ವಿದ್ಯಾವಂತರಾಗಲಿ, ಮೂಢನಂಬಿಕೆಯಿಂದ ಹೊರಗೆ ಬರುವಂಥದ್ದಾಗಲಿ, ಆ ಕೆಲಸ ಆಗಬೇಕೆಂದು ನಾನು ಹೇಳುತ್ತೇನೆ. ಅವರಲ್ಲಿ ಬಹಳಷ್ಟು ಜನ ಶರಣರು, ಸಂತರು ಆಗಿಹೋಗಿದ್ದಾರೆ. 300 ವರ್ಷಗಳಿಂದೀಚೆಗೆ ಶಿಶುನಾಳ ಷರೀಫರು, ರಾಯಚೂರು ಜಿಲ್ಲೆಯ ಗಂಗಾವತಿಯವರು ಬಸವಪ್ರಿಯ ಗುರು ಖಾದರಿಫೀರಾ, ಜೇವರ್ಗಿಯ ಜಲಾಲ್ ಸಾಹೇಬರು, ಬಹಳಷ್ಟು ಜನ ಸೂಫಿಗಳಾಗಿ ಹೋಗಿದ್ದಾರೆ. ಅವರ ವಿಚಾರ ಏನಿತ್ತೆಂದರೆ ಈ ಮೂಢನಂಬಿಕೆಗಳನ್ನು ಬಿಟ್ಟು ಇವರು ವಿದ್ಯಾವಂತರಾಗಿ ಬಸವ ತತ್ವದೊಳಗೆ ಬದುಕುವ ಹಾಗೆ ಆಗಲಿ ಎಂಬ ಹಾರೈಕೆ ಅವರಿಗಿತ್ತು. ಅದನ್ನು ಈ ಸರ್ಕಾರ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದಿಂದ ಈ RDPR ನಲ್ಲಿ ಸಾಕಷ್ಟು ಹಣ ಕುಡಿಯುವ ನೀರಿಗಾಗಿ ಇದೆ. ಆ ಹಣವೇಕೋ ಖರ್ಚಾಗಿಲ್ಲ. ಅನುದಾನ ಲಭ್ಯತೆ ಇರತಕ್ಕಂಥದ್ದು ಗ್ರಾಮೀಣ ನೀರು ಸರಬರಾಜು ಯೋಜನೆಗೆ 1475.00 ಕೋಟಿ ರೂಪಾಯಿಗಳು. ಅದರಲ್ಲಿ ಇದುವರೆಗೆ ಆಗಿರುವಂಥದ್ದು ಕೇವಲ 848 ಕೋಟಿ ರೂಪಾಯಿಗಳು ಖರ್ಚಾಗಿದೆ. ಅದಕ್ಕೆ ಮಾನ್ಯ RDPR ಸಚಿವರಲ್ಲಿ ನಾನು ವಿನಂತಿಸುತ್ತೇನೆ. ಕುಡಿಯುವ ನೀರಿನಲ್ಲಿ ಏಕೋ ಬಹಳ ಹಣ ಉಳಿಸಿದ್ದಾರೆ. ಅದಕ್ಕೆ ಅಧಿಕಾರಿಗಳಿಗೆ ಸ್ವಲ್ಪ ಚಾಟಿ ಏಟು ಹಾಕಬೇಕು. ಏಕೆಂದರೆ 1475 ಕೋಟಿ ರೂಪಾಯಿಗಳಲ್ಲಿ 848 ಕೋಟಿ ರೂಪಾಯಿಗಳು ಮಾತ್ರ up-to-date ಖರ್ಚಾಗಿದೆ. ಅದಕ್ಕೆ ನಾನು ಸರ್ಕಾರಕ್ಕೆ ಬಹಳಷ್ಟು ಒತ್ತಾಯ ಮಾಡುತ್ತೇನೆ. ಕುಡಿಯುವ ನೀರಿನ ಸಮಸ್ಯೆ ಬಹಳ ಇದೆ. ನಿಮ್ಮಲ್ಲಿ ಸಮಸ್ಯೆ ಇರಲಿಲ್ಲವೆಂದರೆ, ನಮ್ಮ ಉತ್ತರ ಕರ್ನಾಕಟದ ಗದಗ್‌ನಲ್ಲಿ

fluoride ನ ಸಮಸ್ಯೆಯಿಂದ ಭಯಂಕರವಾಗಿ ಬಳಲುತ್ತಿದ್ದಾರೆ. ಅಲ್ಲಿಗೆ ಕೊಡಿ. ಬಿಜಾಪುರದಲ್ಲಿ ನೀರಿಲ್ಲದೆ ನೀರಿಲ್ಲದೆ ಒದ್ದಾಡುತ್ತಿದ್ದಾರೆ. ಟ್ಯಾಂಕರ್ ಮೂಲಕ ನೀರು ಹಾಕುತ್ತೇವೆ. ಅಲ್ಲಿಗೆ ಹೆಚ್ಚು ಹಣ ಕೊಟ್ಟರೆ ಅವು ಅಭಿವೃದ್ಧಿಯಾಗಿ ಕುಡಿಯಲಿಕ್ಕೆ ನೀರು ಹೆಚ್ಚಿಗೆ ಸಿಗುತ್ತವೆ ಎಂದು ಹೇಳಿ ತಮ್ಮಲ್ಲಿ ವಿನಂತಿ ಮಾಡುತ್ತೇನೆ. ತಾವು ಬಹಳ ಒಳ್ಳೆಯ ಕೆಲಸ ಮಾಡಿದ್ದೀರಿ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಈ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಮಾಡಿದ್ದೀರಿ, ಅದನ್ನು ಇನ್ನಷ್ಟು ಹೆಚ್ಚಿಗೆ ಮಾಡಿ. ಈ ವರ್ಷ ಬಜೆಟ್‌ನಲ್ಲಿ ಸಾವಿರಾರು ಕೋಟಿ ರೂಪಾಯಿಗಳನ್ನು ಒಂದೆ ಸಾರಿಗೆ ಕೊಟ್ಟುಬಿಡಿ ಏನೂ ಆಗುವುದಿಲ್ಲ. 29,000 ಹಳ್ಳಿಗಳಿಗೂ, 55ಸಾವಿರ ಜನ ವಸತಿಗೂ ಎಲ್ಲೆಲ್ಲಿ ಸಮಸ್ಯೆ ಇದೆ ಅಲ್ಲೆಲ್ಲಾ ಕಡೆಗೂ ಶುದ್ಧ ನೀರಿನ ಘಟಕ ಕೊಡಬೇಕೆಂದು ಹೇಳಿ ಒತ್ತಾಯ ಮಾಡುತ್ತೇನೆ. ಸುವರ್ಣಗ್ರಾಮದ್ದು ಹೊಸ ಯೋಜನೆ ಮಾಡಿದ್ದಾರೆ ಗ್ರಾಮ ವಿಕಾಸ ಎನ್ನುವುದನ್ನು ಮಾಡಿ 5 ಹಳ್ಳಿಗಳನ್ನು ಆರಿಸಿಬೇಕು ಎಂದು ಹೇಳಿದಿರಿ. 5,000 ಜನಸಂಖ್ಯೆಯನ್ನು limit ಮಾಡಿದಿರಿ. 1000 ಜನಸಂಖ್ಯೆ ಇರುವುದನ್ನು ಹುಡುಕುವುದೆ ಕಷ್ಟವಾಗಿದೆ. ನಮ್ಮಲ್ಲಿ ಎಲ್ಲಾ ಬಹಳ ದೊಡ್ಡ ಹಳ್ಳಿಗಳು. ಅದಕ್ಕೆ ಸ್ವಲ್ಪ ಅದರಲ್ಲೇನಾದರೂ relaxation ಮಾಡಿ ಕೊಟ್ಟರೆ ಅನುಕೂಲವಾಗುತ್ತದೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಅಥಣಿ):- ಮಾನ್ಯ ಅಧ್ಯಕ್ಷರೆ, ಈಗ ಗ್ರಾಮೀಣಾಭಿವೃದ್ಧಿ ಸಚಿವರು ಒಂದು guidelines ಕಳುಹಿಸಿದ್ದಾರೆ. ಒಂದು ಕ್ಷೇತ್ರಕ್ಕೆ ಐದು ಹಳ್ಳಿಗಳನ್ನು ಆಯ್ಕೆ ಮಾಡಬೇಕು ಎಂದು. Guidelines ನಲ್ಲಿ ಎರಡೆರಡು ರೀತಿ ಅಪಾರ್ಥಗಳಾಗಿವೆ. ನಮ್ಮ ಕಡೆಗೆ CEO ಗಳು ಕಳುಹಿಸಿರುವ guidelines ನಲ್ಲಿ ಒಂದು ಹಳ್ಳಿಯಲ್ಲಿ ಐದು ಸಾವಿರ ಜನಸಂಖ್ಯೆ ಮೀರಬಾರದು ಇಂಥ ಐದು ಹಳ್ಳಿಗಳನ್ನು ಆಯ್ಕೆ ಮಾಡಬೇಕೆಂದು ಒಂದು guidelines ಬಂದಿದೆ. ನನ್ನ ಕಡೆ ಆ guidelines ಇದೆ. ಇನ್ನೊಂದು ಕಡೆ ಚಿಕ್ಕಮಗಳೂರು, ಬೇರೆ ಬೇರೆ ಕಡೆಗೆ ಅಲ್ಲಿನ CEO ಗಳು ಏನು guidelines ಕಳುಹಿಸಿದ್ದಾರೆಂದರೆ, ಒಂದು ಸಾವಿರ ಜನಸಂಖ್ಯೆ ಇರುವಂಥ ಐದು ಹಳ್ಳಿಗಳನ್ನು ಆಯ್ಕೆ ಮಾಡಬೇಕು. ಐದು ಸಾವಿರ ಜನಸಂಖ್ಯೆ ಮೀರಬಾರದು

ಎಂದು ಒಂದು ಕಡೆ ಬಂದಿದೆ. ಹೀಗೆ ಎರಡೂ ರೀತಿಯಲ್ಲಿ ಬಂದಿರುವುದರಿಂದ ನಮಗೆ ಬಂದಿರುವ guidelines ಸರಿಯೋ ಅಥವಾ ಆ ಕಡೆ ಹೋಗಿರುವುದು ಸರಿಯೋ? CEO ಗಳಿಗೆ ಅಪಾರ್ಥವಾಗಿದೆಯೋ ಅಥವಾ ಅವರಿಗೆ ಇನ್ನು clarity ಆಗಿಲ್ಲವೋ ಎನ್ನುವುದನ್ನು ಸ್ವಲ್ಪ ಸ್ಪಷ್ಟಪಡಿಸಿದರೆ ಇಡೀ ಎಲ್ಲಾ ಶಾಸಕರಿಗೂ ಅದರ ಬಗ್ಗೆ ತಿಳುವಳಿಕೆ ಬರುತ್ತದೆ ಅಂದರೆ ಐದು ಸಾವಿರ ಜನಸಂಖ್ಯೆ ಇರುವಂಥ ಐದು ಹಳ್ಳಿಗಳನ್ನು ಆಯ್ಕೆ ಮಾಡಬೇಕೋ ಅಥವಾ 1000 ಜನಸಂಖ್ಯೆ ಇರುವಂಥ ಐದು ಹಳ್ಳಿಗಳನ್ನು ಆಯ್ಕೆ ಮಾಡಬೇಕೋ ಎಂಬ ಬಗ್ಗೆ ಸ್ವಲ್ಪ clarity ಮಾಡಿ ಎಂದು ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಬಿ. ನಿಂಗಯ್ಯ (ಮೂಡಿಗೆರೆ):– ಸನ್ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿದೆ, ತಾವು ನಾವೆಲ್ಲಾ ಮಲೆನಾಡಿನಿಂದ ಬಂದಿದ್ದೇವೆ. ನಮ್ಮಲ್ಲಿ ಅಷ್ಟು ಜನಸಂಖ್ಯೆ ಇರುವಂಥ ಗ್ರಾಮಗಳು ಇರುವುದಿಲ್ಲ. ಆ ದೃಷ್ಟಿಯಿಂದ ಅದನ್ನು ಸ್ವಲ್ಪ ಸಡಿಲಗೊಳಿಸಿ. ಮಲೆನಾಡು, ಬಯಲು ಸೀಮೆ ಬೇರೆ ಬೇರೆ ರೀತಿ ವ್ಯತ್ಯಾಸ ಇರುತ್ತದೆ. ಕನಿಷ್ಠ 500 ಜನಸಂಖ್ಯೆ ಇರುವಂಥ ಹಳ್ಳಿಗಳಿಗೂ ಕೂಡ ಅನುಕೂಲವಾಗುವ ರೀತಿಯಲ್ಲಿ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿಸುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ:– ಸರ್, ಸಚಿವರಿಂದ ಉತ್ತರ ಬಯಸುತ್ತಾರೆ.

ಶ್ರೀ ಹೆಚ್. ಕೆ. ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):– ಸನ್ಮಾನ್ಯ ಅಧ್ಯಕ್ಷರೆ, ಈ ಬಯಲು ಸೀಮೆ ಪ್ರದೇಶ, ಮಲೆನಾಡು ಪ್ರದೇಶದಲ್ಲಿರುವಂಥ ಗ್ರಾಮಗಳ ಗಾತ್ರ, ಜನಸಂಖ್ಯೆ ಆ ಎಲ್ಲಾ ದೃಷ್ಟಿಯಿಂದ ಸ್ವಲ್ಪ confusion create ಆಗಿದ್ದು ಸತ್ಯ. ಆದರೆ ಈಗ ನಾನು ಮಾತನಾಡುವಾಗ ಮಾನ್ಯ ಸದಸ್ಯರಾದ ರವಿಯವರು ಸಹ ಏನು confusion ಆಗಿದೆ ಅದರ ಬಗ್ಗೆ ನನ್ನ ಕೈಯಲ್ಲಿ ತಂದುಕೊಟ್ಟರು. ಒಟ್ಟಾರೆ ನಾವು ಯಾವುದೇ ಹಳ್ಳಿಯನ್ನು select ಮಾಡಿದರೂ ಐದು ಸಾವಿರ

ಜನಸಂಖ್ಯೆಗಿಂತ ಹೆಚ್ಚಾಗಿ ತಲಾನುದಾನವನ್ನು ಕೊಡುವುದಿಲ್ಲ. ಒಂದು ಕ್ಷೇತ್ರಕ್ಕೆ 3 ಕೋಟಿ 75 ಲಕ್ಷ ರೂಪಾಯಿಗಳಿಗೆ ನಿಗದಿಪಡಿಸಿದ್ದೇವೆ. ಆ ಹಿನ್ನೆಲೆಯೊಳಗೆ ನೀವು 500, 1000 ಜನ ಇರಲಿ, 10000 ಜನರಿರುವ ಹಳ್ಳಿಗಳಿರಲಿ ಏಕೆ ಅದರ ಬಗ್ಗೆ restrict ಮಾಡುತ್ತೀರಿ ಎಂಬ ಸಲಹೆಗಳು ನಮ್ಮ ಶಾಸಕರಿಂದ ಬರುತ್ತಿವೆ. ಇವನ್ನೆಲ್ಲಾ ನಾವು ಸಮಗ್ರವಾಗಿ ಗಮನಿಸಿ ಗ್ರಾಮ ವಿಕಾಸಕ್ಕೆ ಒಟ್ಟು ಗೈಡ್‌ಲೈನ್ಸ್‌ಗಳನ್ನು, ನಿಯಮಾವಳಿಗಳನ್ನು ಮಾಡಿ ಇನ್ನು 7–8 ದಿವಸಗಳೊಳಗಾಗಿ ನಿಮ್ಮ ಕೈಗೆ ತಲುಪಿಸುತ್ತೇವೆ. ಬಹುತೇಕ ಅದರಲ್ಲಿ ಇವುಗಳನ್ನು ಏನು ಸರಳೀಕರಣ ಮಾಡಬೇಕಾಗಿದೆ, ಆ ಸರಳೀಕರಣವನ್ನು ಮಾಡಿ ಕಳುಹಿಸುತ್ತೇವೆ.

ಶ್ರೀ ಭರಮಗೌಡ ಆಲಗೌಡ ಕಾಗೆ:– ಸರ್, ಒಂದು ಹಳ್ಳಿ ಸೇರಿ ತೆಗೆದುಕೊಳ್ಳಬಹುದಲ್ಲಾ, ದೊಡ್ಡದು ತೆಗೆದುಕೊಳ್ಳಬಹುದಲ್ಲಾ, 10 ಸಾವಿರ ಇದ್ದುದ್ದನ್ನು ಒಂದೇ ತೆಗೆದುಕೊಂಡು ಅಷ್ಟಕ್ಕೇ restriction ಮಾಡಿ. ನಾವು ಖರ್ಚು ಮಾಡುತ್ತೇವೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ಅವರು ಏನು ಹೇಳುತ್ತಿದ್ದಾರೆ ಎಂದರೆ, ನೀವು ಒಂದು ಕ್ಷೇತ್ರಕ್ಕೆ amount fix ಮಾಡಿ. ಆ ಶಾಸಕರ ಹಳ್ಳಿ ದೊಡ್ಡ ಹಳ್ಳಿಯಾದರೂ ಇರಲಿ, ಸಣ್ಣ ಹಳ್ಳಿಯಾದರೂ ಇರಲಿ. ತಮಗೆ ಯಾವ್ಯಾವ ಹಳ್ಳಿಗಳು ಬೇಕು ಎನ್ನುವುದನ್ನು ಆರಿಸಿಕೊಳ್ಳಬೇಕಾದ್ದನ್ನು ಅವರು ನಿರ್ಣಯ ಮಾಡಲಿ ಎನ್ನುವುದಷ್ಟೇ ಅವರ ಅಭಿಪ್ರಾಯವಾಗಿದೆ. ಆದರೆ, ಈ ಗೈಡ್‌ಲೈನ್ಸ್‌ಅನ್ನು ಸ್ವಲ್ಪ change ಮಾಡಿ. ಏಕೆಂದರೆ, ನನಗೆ ಬಂದಿರುವಂತಹ ಗೈಡ್‌ಲೈನ್ಸ್ ಪ್ರಕಾರ 18 ಕೋಟಿ 7 ಸಾವಿರದ 500 ರೂಪಾಯಿಗಳು ಬರುತ್ತದೆ. ನಿಮ್ಮ ಈ ಗೈಡ್‌ಲೈನ್ಸ್ ಪ್ರಕಾರ ಬರುತ್ತದೆ. ಅದಕ್ಕೆ ಇಡೀ ರಾಜ್ಯಕ್ಕೆ ಒಂದೇ ಗೈಡ್‌ಲೈನ್ಸ್ ಕಳುಹಿಸುವಂತಹದ್ದು ಆಗಬೇಕು.

ಶ್ರೀ ಎನ್.ಹೆಚ್. ಕೋನರೆಡ್ಡಿ:– ಒಂದು ವರ್ಷಕ್ಕೆ 5 ಗ್ರಾಮ ಎಂದು ಮಾಡಿ ಸಾರ್.

(ಗೊಂದಲ)

ಅಧ್ಯಕ್ಷರು:– ಮಾನ್ಯ ಕಾರಜೋಳರವರೆ, ಬೇಗ ಹೇಳಿ.

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಅಧ್ಯಕ್ಷರೆ, ಭಾರತ ಸರ್ಕಾರದವರು ಮೊದಲು . .

ಶ್ರೀ ಬಸವರಾಜ್ ಬೊಮ್ಮಾಯಿ:– ಮಾನ್ಯ ಸಭಾಧ್ಯಕ್ಷರೆ, ನಮ್ಮ ಗ್ರಾಮೀಣಾಭಿವೃದ್ಧಿ ಸಚಿವರು ಬಹಳ ಬುದ್ಧಿವಂತಿಕೆಯ ಉತ್ತರ ಕೊಟ್ಟಿದ್ದಾರೆ. ಆ ಗೈಡ್‌ಲೈನ್ಸ್ ಪ್ರಕಾರ 18 ಕೋಟಿ ರೂಪಾಯಿಗಳಾಗಿದೆ, ಇನ್ನು 18 ಕೋಟಿ ರೂಪಾಯಿಗಳ ಹೊರೆ ಎಲ್ಲಿ ಬರುತ್ತದೋ ಎನ್ನುವಂತಹ ದೃಷ್ಟಿಯಿಂದ ಇದನ್ನೆಲ್ಲಾ ಸರಳೀಕರಣ ಮಾಡಿಕೊಡುತ್ತೇವೆ ಎಂದು ಯಾವುದನ್ನೂ ಅವರು ಸ್ಪಷ್ಟವಾಗಿ ಹೇಳುವುದೇ ಇಲ್ಲ.

ಅಧ್ಯಕ್ಷರು:– ಆಯಿತು ಹೇಳುತ್ತಾರೆ ಬಿಡಿ.

ಶ್ರೀ ಬಸವರಾಜ್ ಬೊಮ್ಮಾಯಿ:– ಮಾನ್ಯ ಅಧ್ಯಕ್ಷರೆ, ಫೆಬ್ರವರಿಯವರೆಗೆ ತಳ್ಳಿದ್ದಾರೆ. ಇನ್ನು ಗೈಡ್‌ಲೈನ್ಸ್ ಮುಗಿಸಿ ಮಾರ್ಚ್‌ವರೆಗೆ ತಳ್ಳಿದರೆ ಮತ್ತೆ ಮುಂದಿನ ವರ್ಷದಿಂದ ಗ್ರಾಮ ವಿಕಾಸದ್ದು ಪ್ರಾರಂಭವಾಗುತ್ತದೆ.

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಅಧ್ಯಕ್ಷರೆ, ಮೊದಲು ಭಾರತ ಸರ್ಕಾರದವರು AIBP ಯಲ್ಲಿ minor irrigationಗೆ ದುಡ್ಡು ಕೊಡುತ್ತಿರಲಿಲ್ಲ. ಇತ್ತೀಚಿನ 2–3 ವರ್ಷಗಳಲ್ಲಿ ಕೊಡುತ್ತಿದ್ದಾರೆ. ಆದರೆ, minor irrigation ನಲ್ಲಿ ಬಹಳಷ್ಟು ಕೆಲಸಕಾರ್ಯಗಳನ್ನು ಮಾಡುವುದಕ್ಕೆ ಅವಕಾಶವಿದೆ. ಉತ್ತರ ಕರ್ನಾಟಕದಲ್ಲಿ ಒಂದು comprehensive master plan ಅನ್ನು ನಾವು ರೆಡಿ ಮಾಡಿಸಿದ್ದೇವೆ. 2,600 ಬಾಂದಾರ, ಬ್ಯಾರೇಜ್, new percolation tank ಗಳನ್ನು ಮಾಡುವುದಕ್ಕೆ ಅವಕಾಶವಿತ್ತು. ಅವನ್ನೆಲ್ಲವನ್ನೂ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟರೆ ಖಂಡಿತವಾಗಿಯೂ ಹಣ ಕೊಡುತ್ತಾರೆ. ಆದರೆ, ಆ ಕೆಲಸವಾಗಿಲ್ಲ. ಇವತ್ತು central sponsored scheme ನಲ್ಲಿ ಇವರ progress ಇವತ್ತಿನವರೆಗೂ 11% ಇದೆ. ಮತ್ತೆ ನಬಾರ್ಡ್‌ದ್ದು ನಾವು ಸಾಲ ತೆಗೆದುಕೊಂಡು ಮಾಡುವಂಥಹದ್ದು. ನಬಾರ್ಡ್‌ನಲ್ಲಿ new tanks ದ್ದು 24% ಇದೆ. ಆಮೇಲೆ modernizatiuon of

tanks 40% ಇದೆ. Lift irrigation scheme ಗೆ ಕೇವಲ 34% ಇದೆ. ಮಾನ್ಯ ಅಧ್ಯಕ್ಷರೆ, totally ನಬಾರ್ಡ್ ಸ್ಕೀಂನಲ್ಲಿ ಈ ವರ್ಷದಲ್ಲಿ 46% ದಾಟುವುದಕ್ಕೆ ಆಗಿಲ್ಲ. ಇವತ್ತು ನಾವು ಫೆಬ್ರವರಿ ತಿಂಗಳಿಗೆ ಬಂದಿದ್ದೇವೆ. ಅದಕ್ಕೆ ನಾನು ಸರ್ಕಾರಕ್ಕೆ ಏನು ಸಲಹೆ ಮಾಡುತ್ತೇನೆ ಎಂದರೆ, ರಾಜ್ಯ ಸರ್ಕಾರದಲ್ಲಿ ಹಣಕಾಸಿನ ತೊಂದರೆಯಿದ್ದರೆ, ಕೇಂದ್ರ ಸರ್ಕಾರ AIBP ಯಲ್ಲಿ ಏನು ಕೊಡುತ್ತಾರೆ, ಅದಕ್ಕೆ ಒಂದು ಒಂದೇ ಸಲ ಇಡೀ ರಾಜ್ಯದ್ದು ನಮ್ಮ ಪಾಲಿನ ಹಣ ಏನು ಕೊಡಬೇಕಾಗಿದೆ ಅಷ್ಟನ್ನು ನಾವು ಕೊಡುತ್ತೇವೆ, approve ಮಾಡಿಕೊಡಿ ಎಂದರೆ, ಕೇಂದ್ರ ಸರ್ಕಾರದವರು at a time ಕೊಡುತ್ತಾರೆ. ಅದನ್ನು . . .

ಅಧ್ಯಕ್ಷರು:- ಅದು ಯಾವ ಸ್ಕೀಂ?

ಶ್ರೀ ಗೋವಿಂದ ಎಂ. ಕಾರಜೋಳ:- ಅದು AIBP scheme. AIBP ಯಲ್ಲಿ ಕೊಡುತ್ತಿದ್ದಾರೆ. ಮೊದಲು minor irrigation ಗೆ ಕೊಡುತ್ತಿರಲಿಲ್ಲ. ಈಗ ಕೊಡುತ್ತಿದ್ದಾರೆ. ಮಾನ್ಯ ಅಧ್ಯಕ್ಷರೆ, ನಮ್ಮ share ನಾವು ಕೊಡಬೇಕು. Central ನವರ share ಅನ್ನು central ನವರು ಕೊಡುತ್ತಾರೆ. ಅದಕ್ಕೆ ನಾವು ಕೊಡಿಸಿದರೆ approve ಮಾಡಿ ಕೊಟ್ಟುಬಿಡುತ್ತಾರೆ. ಅದಕ್ಕೆ ಅದು ಆಗುತ್ತಿಲ್ಲ.

ಅಧ್ಯಕ್ಷರು:- ಮತ್ತೆ ಆ ಸ್ಕೀಂಗಳ ಬಗ್ಗೆ ನಮಗೆ ಯಾರಿಗೂ ಪರಿಚಯವೇ ಇಲ್ಲ.

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು):- ಬಹಳ ವರ್ಷಗಳಿಂದ ಇದೆ.

ಶ್ರೀ ಪಿ. ರಾಜೀವ್:- ಅದು accelerated Irrigation Benefit Programme.

ಅಧ್ಯಕ್ಷರು:- ಆಯಿತು ಹೇಳಿ.

ಶ್ರೀ ಗೋವಿಂದ ಎಂ. ಕಾರಜೋಳ:- Minor irrigation ನಲ್ಲಿ ನಮ್ಮ major works ಏನೆಂದರೆ, new tanks, pick ups, ಅಣೆಕಟ್ಟು, ಬಾಂದಾರಗಳು,

bridge cum barrage ಗಳು, lift irrigation schemeಗಳು ಇವು ಏನೂ ಕೆಲಸವಾಗುತ್ತಿಲ್ಲ. ಅದಕ್ಕೆ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಈ ನಿಟ್ಟಿನಲ್ಲಿ ಹೆಚ್ಚು ಗಮನವಹಿಸಿ ಕೊಡತಕ್ಕಂತಹ ಕೆಲಸವಾಗಬೇಕು. ಆಮೇಲೆ NABARD scheme ನಲ್ಲಿ flood protection ದ್ದು 24% ಆಗಿದೆ. ಅದಕ್ಕೆ ಈ ರೀತಿ slow ಆದರೆ ಆಗುವುದಿಲ್ಲ. ಅದಕ್ಕೆ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇವೆ. ನೀವು action plan ಅನ್ನು timely ಮಾಡಿಕೊಟ್ಟು progress ಮಾಡಬೇಕು ಮತ್ತು ಉತ್ತರ ಕರ್ನಾಟಕದಲ್ಲಿ ಏನು ನೀರಿನ ಸಮಸ್ಯೆಯಿದೆ ಆ ಕಡೆ ಹೆಚ್ಚು minor irrigation projectಗಳನ್ನು ತೆಗೆದುಕೊಳ್ಳಬೇಕು ಎಂದು ಒತ್ತಾಯ ಮಾಡುತ್ತೇನೆ. ಇನ್ನು information ತಂದಿದ್ದೇನೆ ಸರ್, ಮುಗಿದಿಲ್ಲ.

ಅಧ್ಯಕ್ಷರು:– ಒಂದೂವರೆ ಗಂಟೆಯಾಯಿತು ಬೇರೆಯವರು ಮಾತನಾಡಬೇಕಲ್ಲವೇ? ನೀವು ಒಬ್ಬೊಬ್ಬರೇ 2–3 ಗಂಟೆ ಸಮಯಾವಕಾಶ ತೆಗೆದುಕೊಂಡರೆ ಹೇಗೆ?

ಶ್ರೀ ಗೋವಿಂದ ಎಂ. ಕಾರಜೋಳ:– ಇನ್ನೊಂದು ಸಲ ನಾನು major irrigation minister ಗೆ ಒತ್ತಾಯ ಮಾಡುತ್ತೇನೆ. ಈ ವರ್ಷ 10 ಸಾವಿರ ಕೋಟಿ ರೂಪಾಯಿಗಳ ಬಜೆಟ್‌ಅನ್ನು ತೆಗೆದುಕೊಂಡು ಬಿಜಾಪುರಕ್ಕೆ ಬರಬೇಕು ಎಂದು ಅವರಿಗೆ ಒತ್ತಾಯ ಮಾಡುತ್ತೇನೆ. ಒಂಭತ್ತು lift irrigation scheme ಗಳು ಏನಿವೆ, . ..

ಶ್ರೀ ಉಮೇಶ್ ವಿ. ಕತ್ತಿ:– ಕೃಷ್ಣೆಗೆ.

ಶ್ರೀ ಗೋವಿಂದ ಎಂ. ಕಾರಜೋಳ:– ಕೃಷ್ಣೆಗೆ ಅಲ್ಲರೀ. ಆಲಮಟ್ಟಿ ಬಗ್ಗೆ ಹೇಳುತ್ತಿದ್ದೇನೆ. ಕೃಷ್ಣಾ ಬೇಸಿನ್ ಎಂದರೆ ತುಮಕೂರಿನವರೆಗೆ ಬರುತ್ತದೆ. ಆಲಮಟ್ಟಿಯ ವಿಷಯ ಹೇಳುತ್ತಿದ್ದೇನೆ. ಬಜೆಟ್ ತೆಗೆದುಕೊಂಡು ಬಂದರೆ ಅವರಿಗೆ ನಾವು ನಮ್ಮ ಸಿದ್ಧೇಶ್ವರ ಗುಡಿಯಿಂದ ಅಂಬೇಡ್ಕರ್ ಚೌಕದವರೆಗೆ ಬಂಗಾರದ ಖಡ ಹಾಕಿ ಮೆರವಣಿಗೆ ಮಾಡುತ್ತೇವೆ.

ಅಧ್ಯಕ್ಷರು:– Good.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:- ಮಾನ್ಯ ಎಂ.ಬಿ. ಪಾಟೀಲ್‌ರವರನ್ನೇ ಮಾಡುವುದು. ಮತ್ತೆ ಇನ್ನು ಯಾರನ್ನು ಮಾಡುವುದು? ಉತ್ತರ ಕರ್ನಾಟಕದ 4 ಜಿಲ್ಲೆಗಳು ಏನು ಬರಕ್ಕೆ ತುತ್ತಾಗುತ್ತಿವೆ ಅವುಗಳಿಗೆ ನೀರಾವರಿ ಸಚಿವರು ಪರಿಹಾರ ಕಂಡುಹಿಡಿಯಬೇಕು. ನಮ್ಮ ಕಡೆ ಪದ್ಧತಿಯಿದೆ. ಯಾರಾದರೂ ಒಳ್ಳೆಯ ಕೆಲಸ ಮಾಡಿದರೆ ರೇಷ್ಮೆ ರುಮಾಲು ಸುತ್ತುತ್ತೇವೆ, ಬಂಗಾರದ ಖಡಗ ಹಾಕುತ್ತೇವೆ.

(ಗೊಂದಲ)

ಶ್ರೀ ಡಿ.ಜಿ. ಶಾಂತನಗೌಡ:- ಕಾರಜೋಳರವರೆ, ಖಡ ಬಾಡಿಗೆಯದ್ದೋ ಇಲ್ಲವೇ . . .

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:- ಜೂಲ ಹಾಕಿದ ಎತ್ತಿನ ಗಾಡಿಯೊಳಗೆ ಕುಳ್ಳಿರಿಸಿ ಮೆರವಣಿಗೆ ಮಾಡುತ್ತೇವೆ.

(ಗೊಂದಲ)

ಅಧ್ಯಕ್ಷರು:- ಬಂಗಾರದ ಖಡ್ಗ ಅವನ್ನೆಲ್ಲಾ ರೆಡಿ ಮಾಡಿ ಇಟ್ಟುಕೊಳ್ಳಿ.

(ಗೊಂದಲ)

ಶ್ರೀ ಡಿ.ಜಿ. ಶಾಂತನಗೌಡ:- ಆದರೆ, ಬಾಡಿಗೆಗೆ ತರಬೇಡಿ.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:- ರೆಡಿನೇ ಇಟ್ಟಿದ್ದೇವೆ. ಅದಕ್ಕೆ ನಾನು ಅವರಿಗೆ ಒತ್ತಾಯ ಮಾಡುತ್ತೇನೆ. ಮಾನ್ಯ ಸಭಾಧ್ಯಕ್ಷರೆ, ರಾಜ್ಯ ಸರ್ಕಾರ . . .

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ಇಂತಿಷ್ಟು ಕೆ.ಜಿ. ಎಂದು announce ಮಾಡ್ರಿ.

ಶ್ರೀ ಗೋವಿಂದ ಎಂ. ಕಾರಜೋಳ:– ರಾಜ್ಯ ಸರ್ಕಾರ ಇವತ್ತು ಜಂಟಿ ಅಧಿವೇಶನದಲ್ಲಿ ಗವರ್ನರ್‌ರವರನ್ನು ಕರೆಸಿ ಏನು ಸುಳ್ಳು ಲೆಕ್ಕಪತ್ರಗಳನ್ನು ಕೊಟ್ಟು ಭಾಷಣ ಮಾಡುವುದಕ್ಕೆ ಹೊರಟಿದ್ದಾರೆ ಅದಕ್ಕೆ ವಿರೋಧ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು:– ಶ್ರೀ ಶಿವಮೂರ್ತಿರವರೆ ನೀವು ಮಾತನಾಡಿ. ಅರ್ಧ ಗಂಟೆ ಕಾಲಾವಕಾಶ ಕೊಟ್ಟಿದ್ದೇನೆ.

ಶ್ರೀ ಕೆ. ಶಿವಮೂರ್ತಿ:– ಮಾನ್ಯ ಅಧ್ಯಕ್ಷರೆ, ತಾವು ಈ ಜಂಟಿ ರಾಜ್ಯಪಾಲರ ಭಾಷಣಕ್ಕೆ ನನ್ನ ಸಹಮತವನ್ನು ವ್ಯಕ್ತಪಡಿಸಿ, ನಮ್ಮ ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರ ಸಾಮಾಜಿಕ ನ್ಯಾಯಕ್ಕೆ ಸಮಪಾಲು ಮತ್ತು ಸಮಬಾಳು, ಶೋಷಿತರ, ಗ್ರಾಮೀಣ ಪ್ರದೇಶದ ರೈತರ ಹಾಗೂ ನೀರಾವರಿಗೆ ಹೆಚ್ಚು ಒತ್ತನ್ನು ಕೊಟ್ಟು ಹೊಸ ಹೊಸ ಕಾರ್ಯಕ್ರಮವನ್ನು ತಂದಿರುವುದು ಸ್ವಾಗತಾರ್ಹ. ಸಮಾಜ ನಿಂತ ನೀರಾಗಬಾರದು ಹಾಗೂ ಕರ್ನಾಟಕ ರಾಜ್ಯ ಮೂಢನಂಬಿಕೆಯಿಂದ ಮತ್ತೆ ಕೇವಲ ಹಿತಾಸಕ್ತಿಗಳಿಂದ ದೂರಾಗಬೇಕು ಎಂಬ ವಿಮೋಚನೆ ಮಾಡುವಂತಹ ರೀತಿಯಲ್ಲಿ ಒಂದು ಸಮಪಾಲು ಮತ್ತು ಸಮತಕ್ಕಡಿಯನ್ನು ಹಿಡಿದು ಕಾರ್ಯಕ್ರಮಗಳನ್ನು ನಿಡುವುದರ ಜೊತೆಗೆ ಹಣವನ್ನು ತೊಡಗಿಸಿ ಅದನ್ನು ಜಾರಿಗೊಳಿಸುವಂತಹ ಛಾತಿಯ ಕೆಲಸವನ್ನು ಮಾಡಿದ್ದಾರೆ. ಅದಕ್ಕೆ ನಾನು ಈ ಸದನದ ಮೂಲಕ ಸರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ.

ಮೊದಲನೆಯದಾಗಿ ಅನ್ನ ಭಾಗ್ಯ ಯೋಜನೆ. ಹಸಿದಿರುವಂತಹ ಹೊಟ್ಟೆಗೆ ಹಸಿವನ್ನು ನೀಗಿಸುವಂತ ಕಾರ್ಯಕ್ರಮ, ಈ ಕಾರ್ಯಕ್ರಮದ ಹಿನ್ನೆಲೆ ಏನೆಂದರೆ, ಇದು ಒಂದು ಕ್ರಾಂತಿಕಾರಿ ಹೆಜ್ಜೆ. ಅದಕ್ಕೆ ಎಷ್ಟು ಹಣವನ್ನು ತೊಡಗಿಸಿದ್ದಾರೆ, ದುಡ್ಡನ್ನು ಯಾವ ರೀತಿ ರೂಢಿಸಿದ್ದಾರೆ, ಅದು ಇವತ್ತು ಗ್ರಾಮೀಣ ಮಟ್ಟದಿಂದ ಒಬ್ಬ ವ್ಯಕ್ತಿಯಿಂದ ಕಟ್ಟಕಡೆಯ ವ್ಯಕ್ತಿ APL ಹಾಗೂ

BPL ನವರಿಗೂ ಸಹಿತ ಈ ಒಂದು ಸೌಲಭ್ಯ ಸಿಗುವಂತಹ ಒಂದು ಸಾಮಾಜಿಕ ಬದ್ಧತೆ ಮತ್ತು ಕ್ರಾಂತಿಕಾರಿ ಹೆಜ್ಜೆ. ಅದಕ್ಕೋಸ್ಕರ ಈಗ ನಮ್ಮ ಮುಖ್ಯಮಂತ್ರಿಗಳು ಮತ್ತು ಕಾಂಗ್ರೆಸ್ ಪಕ್ಷದ ಇತಿಹಾಸದಲ್ಲಿ ಹಿಂದೆಯೂ ಸಹ ಮಾಡಿದ್ದೇವೆ. ಆದರೆ, ಶ್ರೀಮಾನ್ ಸಿದ್ದರಾಮಯ್ಯನವರು ತಮ್ಮ ಅಂತರಾಳದಲ್ಲಿ ಹೇಳಬೇಕಾದರೆ ಈ ಯೋಜನೆ ಮತ್ತು ಯೋಚನೆ ಬರಬೇಕಾದರೆ ಕಾರಣವೇನು, ನಾನು ಹುಟ್ಟಿದ ವಾತಾವರಣವೇನು, ಪರಿಸರವೇನು, ನೋವೇನು, ಒಬ್ಬ ತಾಯಿ ತಮ್ಮ ಮಗುವಿಗೆ ಹಸಿವನ್ನು ನೀಗಿಸುವುದಕ್ಕೋಸ್ಕರ ಬೇರೆಯವರ ಮನೆಗೆ ಹೋಗಿ ಅನ್ನವನ್ನು ಭಿಕ್ಷೆ ಬೇಡುವಂತಹ ಪರಿಸ್ಥಿತಿ ಇತ್ತು. ಅನ್ನದ ದಾಹವನ್ನು ನೀಗಿಸುವಂತಹ ಪರಿಸ್ಥಿತಿ ಬಂದಾಗ ಅದನ್ನು ಮನನ ಮಾಡಿ ಇವತ್ತು ಅವರ ಪುಣ್ಯಕ್ಕೆ ಅವರ ನೇತೃತ್ವದಲ್ಲಿ ಸ್ಪಷ್ಟವಾದ ಬಹುಮತ ಕಾಂಗ್ರೆಸ್ ಪಕ್ಷದಲ್ಲಿ ಸಿಕ್ಕಿ ಅನ್ನಭಾಗ್ಯ ಎನ್ನುವಂತಹ ಕಾರ್ಯಕ್ರಮವನ್ನು ತಂದಿದ್ದಾರೆ. ಆದರೆ, ಈ ಕಾರ್ಯಕ್ರಮ ಜಾರಿಯಾಗಬೇಕು ಎಂದರೆ, ಮನಃಪೂರ್ವಕವಾಗಿ ಎಲ್ಲರೂ ಸಹ ಅಂತಃಕರಣದಿಂದ, ಮನಃ ಶುದ್ಧಿಯಿಂದ ಪ್ರಚಾರ ಸಿಗಬೇಕು ಎಂದು ಹೇಳುತ್ತಿದ್ದೇನೆ. ಈ ಕಾರ್ಯಕ್ರಮದ ವಿರುದ್ಧವಾಗಿ ವ್ಯವಸ್ಥಿತವಾಗಿ ಅಪಪ್ರಚಾರ ಸಹಿತ ನಡೆಯುತ್ತಿದೆ. ಎಷ್ಟರಮಟ್ಟಿಗೆ ಈ ಕಾರ್ಯಕ್ರಮ ಬಡವರ ಹತ್ತಿರ ಅಂದರೆ ಗ್ರಾಮೀಣ ಪ್ರದೇಶದ ಜನರಿಗೆ ಹತ್ತಿರವಾಗಿದೆಯೋ ಅಷ್ಟೇ ಪ್ರಮಾಣದಲ್ಲಿ ಕೆಲವರು ವ್ಯವಸ್ಥಿತವಾಗಿ ಅಪಪ್ರಚಾರ ಮಾಡುತ್ತಿದ್ದಾರೆ. ನೀವು ಒಂದು ರೂಪಾಯಿಗೆ ಅಕ್ಕಿಯನ್ನು ಕೊಟ್ಟು ಜನರನ್ನು ಸೋಮಾರಿಗಳಾಗಿ ಮಾಡಿದ್ದೀರಿ, ದುಡಿಯುವಂತಹ ಜನರನ್ನು ಮನೆಗಳಲ್ಲಿ ಕುಳ್ಳಿರಿಸಿಬಿಟ್ಟಿರಿ ಎನ್ನುವಂತಹ ಅಪಪ್ರಚಾರ ಮಾಡುತ್ತಿದ್ದಾರೆ. ಆದ್ದರಿಂದ, ಇಂತಹ ಅಪಪ್ರಚಾರಕ್ಕೆ ಜಗ್ಗದೇ ಕಿವಿ ಕೊಡದೇ.

ಅಧ್ಯಕ್ಷರು:– ನಮ್ಮ ಕಡೆಗಳಲ್ಲಿ ಇದನ್ನು ಕೊಟ್ಟು ಆದಮೇಲೆ ಜನರಿಗೆ ಶಕ್ತಿ ಬಂದಿದೆ. ದುಡಿಯುವುದಕ್ಕೆ ನಾನು ಮುಂದು ತಾನು ಮುಂದು ಎಂದು ಹೊರಡುತ್ತಿದ್ದಾರೆ.

ಶ್ರೀ ಕೆ. ಶಿವಮೂರ್ತಿ:– ದುಡಿಮೆಯಲ್ಲಿ ಮೊದಲು ಶಕ್ತಿ ಬರಬೇಕು. ಕೆಲಸ ಮಾಡಬೇಕಾದರೆ ಶಕ್ತಿ ಇರಬೇಕು. ದುಡಿಯುವ ಕೈಗಳಿಗೆ ಶಕ್ತಿ ತುಂಬಬೇಕು ಎನ್ನುವುದು ಇದರ ಉದ್ದೇಶ. ಆದ್ದರಿಂದ, ಇಂತಹ ಕಾರ್ಯಕ್ರಮಕ್ಕೆ ಅಪಪ್ರಚಾರ ಮಾಡಲಿಕ್ಕೆ ಕೆಲವರು ಹೊರಟಿದ್ದಾರೆ. ಅದಕ್ಕೋಸ್ಕರ ಅವರ ಅಪಪ್ರಚಾರಕ್ಕೆ ಮಣಿಯದೇ ನಾವು ಮುನ್ನುಗ್ಗಬೇಕು ಎನ್ನುವಂತಹ ಕ್ರಾಂತಿಕಾರಿ ಕ್ರಮವನ್ನು ನಾನು ಸ್ವಾಗತ ಮಾಡುತ್ತೇನೆ. ಎರಡನೆಯದಾಗಿ ಹಾಲಿನ ಸಬ್ಸಿಡಿ ಕೊಡುವಂತಹ ಕ್ಷೀರಭಾಗ್ಯ ಕಾರ್ಯಕ್ರಮದಲ್ಲಿ ಇವತ್ತು ಎಷ್ಟೋ ಜನ ಬಡವರು ಹಾಲು ಕುಡಿಯುತ್ತಾರೆ, ಕೆಲವು ಜನ ಆಲ್ಕೋಹಾಲ್ ಕುಡಿಯುತ್ತಾರೆ, ಕೆಲವು ಜನ ಬಿಯರ್ ಕೂಡ ಕುಡಿಯುತ್ತಾರೆ ಇದು ಕುಡಿಯುವ ವ್ಯವಸ್ಥೆಯಾಗಿದೆ.

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಕೆ. ಶಿವಮೂರ್ತಿ:– ಆಹಾರದ ಜೊತೆಗೆ ಹಾಲನ್ನು ಕುಡಿಯಬೇಕು ಇದರಿಂದ ಪೌಷ್ಟಿಕಾಂಶ ವೃದ್ಧಿಯಾಗಬೇಕು. ಆಹಾರದ ಜೊತೆಗೆ ನೀರನ್ನು ಕೂಡ ಕುಡಿಯಬೇಕು. ಹಾಲು ಮತ್ತು ಆಲ್ಕೋಹಾಲ್ ಎರಡು ಒಟ್ಟಿಗೆ ಸೇರುವುದಕ್ಕೆ ಸಾಧ್ಯವೇ ಇಲ್ಲ. ಹಾಲನ್ನು ಗ್ರಾಮೀಣ ಮಟ್ಟದಲ್ಲಿ ಉತ್ಪಾದನೆ ಮಾಡಬೇಕು. ಕೃಷಿ ಆಧಾರಿತವಾದ ಸಮಾಜದ ವ್ಯವಸ್ಥೆಯಲ್ಲಿ ಕುಶಲ ಕರ್ಮಿಗಳು, ಕುರಿ ಸಾಕಾಣಿಕೆ, ಮೇಕೆ ಸಾಕಾಣಿಕೆ, ಎಮ್ಮೆ ಸಾಕಾಣಿಕೆ, ಹಸು ಸಾಕಾಣಿಕೆ ಮಾಡುವವರಿಂದ ಹಾಲು ಉತ್ಪಾದನೆಯಾಗಬೇಕು. ಇವರಿಗೆ ಪ್ರೋತ್ಸಾಹ ಧನ ಇರಲಿಲ್ಲವಾದ ಕಾರಣ ಪ್ರೋತ್ಸಾಹ ಧನ ಕೊಡುವ ಉದ್ದೇಶದಿಂದ ಕ್ಷೀರಭಾಗ್ಯ ಯೋಜನೆಯಡಿಯಲ್ಲಿ ಸಬ್ಸಿಡಿ ಕೊಟ್ಟಿರುವುದು ಸ್ವಾಗತಾರ್ಹದ ವಿಷಯವಾಗಿದೆ. ಇದು ಕ್ರಾಂತಿಕಾರಕವಾದ ಒಂದು ಯೋಜನೆಯಾಗಿದೆ. ಗ್ರಾಮೀಣ ಮಟ್ಟದಲ್ಲಿ ಕೃಷಿ ಆಧಾರಿತವಾದ ಸುಮಾರು 90 ವರ್ಗದ ಜನ ಎಲ್ಲಾ ಜಾತಿಯಲ್ಲಿರುವಂತಹವರು ಈ ಯೋಜನೆಯನ್ನು ನಂಬಿದ್ದು ಅವರೆಲ್ಲರಿಗೂ ಈ ಪ್ರೋತ್ಸಾಹ ಧನ ಸಿಕ್ಕಿದೆ. ವಿಶೇಷವಾಗಿ ಯುವಕರು ಮತ್ತು ಹೆಣ್ಣುಮಕ್ಕಳು ಹಾಲು ಒಕ್ಕೂಟವನ್ನು ಸ್ಥಾಪನೆ ಮಾಡುತ್ತೇವೆಂಬ ಮಾತನ್ನು ಹೇಳಿದ್ದಾರೆ. Co-operative sector ನಲ್ಲಿ ಹಾಲು

ಒಕ್ಕೂಟ ಕೆಲವರ ಸ್ವತ್ತಾಗಿತ್ತು. ಅದನ್ನು ಬಿಡಿಸಿರುವ ಕಾರಣದಿಂದ ಇವತ್ತು ಎಲ್ಲರಿಗೂ ಸಿಗುವ ವ್ಯವಸ್ಥೆಯಾಗಿದೆ. ಸಹಕಾರಿ ಕ್ಷೇತ್ರದಲ್ಲಿ ಹಾಲು ಒಕ್ಕೂಟದ ವ್ಯವಸ್ಥೆಯಿತ್ತು, ಸಹಕಾರಿ ಕ್ಷೇತ್ರದಲ್ಲಿ ಹಾಲು ಒಕ್ಕೂಟ ವ್ಯವಸ್ಥೆಯಲ್ಲಿ ಹೆಣ್ಣು ಮಕ್ಕಳು ಸಕ್ರೀಯವಾಗಿ ತೊಡಗಿಸಿಕೊಳ್ಳಬೇಕು ಅದರಲ್ಲಿಯೂ ದುರ್ಬಲವಾಗಿರುವ ಹೆಣ್ಣುಮಕ್ಕಳು ಇದರಲ್ಲಿ ತೊಡಗಿಸಿಕೊಳ್ಳಬೇಕು, ಉತ್ಪಾದನೆಯಲ್ಲಿ ಅವರು ಸಕ್ರಿಯರಾಗಬೇಕು. ಅದರಲ್ಲಿ ಸಮಪಾಲು ಸಿಗಬೇಕೆಂದರೆ ಮೀಸಲಾತಿಯನ್ನು ಇಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ವಿಶೇಷವಾಗಿ ಒತ್ತಾಯ ಮಾಡುತ್ತೇನೆ. ಸಹಕಾರಿ ಕ್ಷೇತ್ರ ಹಾಗೂ ಕೃಷಿ ಕ್ಷೇತ್ರದಲ್ಲಿ ಅವರು ಮುಂದೆ ಬರಬೇಕೆಂದರೆ ಅವರಿಗೆ ಪ್ರೋತ್ಸಾಹದ ಜೊತೆಗೆ ಪಾಲಗಾರಿಕೆ ಕೊಡಬೇಕು. ಅದಕ್ಕೋಸ್ಕರ ಸಹಕಾರಿ ಕ್ಷೇತ್ರದಲ್ಲಿ ಮೀಸಲಾತಿಯನ್ನು ತರಬೇಕು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಮೇಲುಕೋಟೆ):- ಮಾನ್ಯ ಉಪಾಧ್ಯಕ್ಷರೆ, ಶಿವಮೂರ್ತಿರವರು ಬಹಳ ಚೆನ್ನಾಗಿ ಮಾತನಾಡಿದರು. ಧನವನ್ನು ಯಾರು ಸಾಕುತ್ತಿದ್ದಾರೆ, ಯಾವ ರೀತಿಯಾದ ಸಾಲದ ನೀತಿಯಿದೆ ಎಂಬ ಬಗ್ಗೆ ತಾವು ಮಾತನಾಡುವಾಗ ಆಲೋಚನೆ ಮಾಡಬೇಕು. ಧನ ಸಾಕುವವನ, ಹಾಲು ಉತ್ಪಾದನೆ ಮಾಡುವವನ ಜೀವನ ಚೆನ್ನಾಗಿರಬೇಕೆಂದರೆ ಎಲ್ಲರೂ ಹಾಲು ಕುಡಿಯಬೇಕೇ ಹೊರತು, ಹಾಲನ್ನು ಉತ್ಪಾದನೆ ಮಾಡಿ ನಮಗೆ ಕೊಡಲಿ ಎಂಬ ಉದ್ದೇಶದಿಂದ ಗುಲಾಮರನ್ನು ಸೃಷ್ಟಿ ಮಾಡುವಂತಹ ಪದ್ಧತಿ ಹೋಗಬೇಕು. ಒಂದು ಹಸುವಿಗೆ ಸಾಲವನ್ನು ಕೊಟ್ಟು ಒಂಭತ್ತು ತಿಂಗಳು ಅವನು ಆ ಹಸುವನ್ನು ಸಾಕಿ ಹಾಲು ಬಿಟ್ಟ ನಂತರ ಎರಡನೇ ಹಸುವಿನ ಸಾಲವೆಂದು ಹೇಳುತ್ತೀರಲ್ಲ ಇದು ಯಾವ ನೀತಿ? MLA ಹೆಂಡತಿ ಅಥವಾ Deputy Commissioner ಹೆಂಡತಿಯೇನಾದರೂ ಎಮ್ಮೆಯನ್ನು ಸಾಕುತ್ತಿದ್ದಾರಾ? ಎಮ್ಮೆಯನ್ನು ಸಾಕುತ್ತಿರುವವರು ಯಾರು? ಇನ್ನು ಮುಂದೆ ಹೊಸ ಪದ್ಧತಿ ಆಗಬೇಕು. ಎಮ್ಮೆ ಸಾಲವನ್ನು ಯಾರಿಗೆ ಕೊಡುತ್ತೀರಿ ಅದನ್ನು ಅವರಿಗೆ ಪುಕ್ಸಟ್ಟೆ ಕೊಟ್ಟು ಅದರ ಮೇಲೆ ಸಾಕುವುದಕ್ಕೆ 25,000 ರೂ.ಗಳನ್ನು ಕೊಡಬೇಕು, ಆ ರೀತಿಯಾದ ನೀತಿ ಬಗ್ಗೆ ಮಾತನಾಡಿ.

ಶ್ರೀ ಕೆ. ಶಿವಮೂರ್ತಿ:- ಮಾನ್ಯ ಉಪಾಧ್ಯಕ್ಷರೆ, ಸದನದಲ್ಲಿ ಪುಟ್ಟಣ್ಣಯ್ಯನವರು ನೀಡುವ ಸಲಹೆ ಮತ್ತು ಅವರು ಮಾಡುವಂತಹ ಭಾಷಣ ನಮಗೆಲ್ಲಾ ದಾರಿದೀವಿಗೆಯಾಗಿದೆ. ಅನುಭವದ ಅಂತರಾಳ, ಮಣ್ಣಿನ ವಾಸನೆ, ಮಣ್ಣಿನ ಮಗನಾಗಿ ಕೃಷಿ ಕ್ಷೇತ್ರದ ಬಗ್ಗೆ ಮಾತನಾಡುವುದೆಂದರೆ that is value based. ರೈತರಾಗಿರುವುದಿಲ್ಲ, ರೈತರ ಬಗ್ಗೆ ಗೊತ್ತಿರುವುದಿಲ್ಲ ಕಬ್ಬಿಣದ ನೇಗಿಲನ್ನು ಹೊಡೆದಿರುವುದಿಲ್ಲ, ಹಸುವನ್ನು ಸಾಕಿರುವುದಿಲ್ಲ, ಎಮ್ಮೆ ಬಗ್ಗೆ ಗೊತ್ತಿರುವುದಿಲ್ಲ, ಸಾವಯವ ಗೊಬ್ಬರದ ಬಗ್ಗೆ ಗೊತ್ತಿರುವುದಿಲ್ಲ, ಹಳ್ಳಿಯನ್ನು ನೋಡಿರುವುದಿಲ್ಲ, ಆ ಸೊಗಡಿನಲ್ಲಿ ಬೆರೆತಿಲ್ಲ, ಅಲ್ಲಿ ಹುಟ್ಟಿಲ್ಲ, ಗ್ರಾಮೀಣ ಪ್ರದೇಶದಲ್ಲಿ ಬರಿಗಾಲಿನಲ್ಲಿ ನಡೆದಿರುವುದಿಲ್ಲ. ಮಣ್ಣು, ನೀರಿನ ಬಗ್ಗೆ ತಿಳಿಯುವ ಜನರು ಇವತ್ತು ರೈತರ ಬಗ್ಗೆ ಪಾಂಡಿತ್ಯ ರೂಪದಲ್ಲಿ ಮಾತನಾಡುವವರು ಮತ್ತು ಸಲಹೆ ಮಾಡುವವರು ಹುಟ್ಟಿಕೊಂಡಿದ್ದಾರೆ. ಅದಕ್ಕೋಸ್ಕರ ನಾನು ಪುಟ್ಟಣ್ಣಯ್ಯನವರನ್ನು ಅಭಿನಂದಿಸುತ್ತೇನೆ. ಅವರ ಭಾಷಣವನ್ನು ಕೇಳುತ್ತಿದ್ದರೆ ಒಂದು ರೀತಿ ಸಿನಿಮ ನೋಡಿದ ಹಾಗೆ ಆಗುತ್ತದೆ. ಸಿನಿಮ ಎಂದರೆ ಬಹಳ ಮೌಲ್ಯವಾಗಿರುವಂತಹದ್ದು, ಬಹಳ value based ಆಗಿರುವಂತಹದ್ದು. ರಮೇಶ್ ಕುಮಾರ್‌ರವರು ಕೂಡ ಇಲ್ಲಿ ಕುಳಿತಿದ್ದಾರೆ ಅವರ ಅನುಭವ ಕೂಡ ಬಹಳಷ್ಟಿದೆ. ಅಂತಹವರು ಮಾತನಾಡಿದರೆ the whole house will be pin drop silence. ಆ ಕಡೆ ಕೂಡ ಕೆಲವರು ಮಾತನಾಡುವವರು ಇದ್ದಾರೆ ನೀರಾವರಿ ಬಗ್ಗೆ ಮಾತನಾಡುವಂತಹ ಬಸವರಾಜ ಬೊಮ್ಮಾಯಿ ರವರು ಅವರ ಅನುಭವವನ್ನು ಬಹಳ ಚನ್ನಾಗಿ ಹಂಚಿಕೊಳ್ಳುತ್ತಾರೆ. ಇವತ್ತಿನ ಜನ ಪಾಂಡಿತ್ಯವನ್ನು, ಪ್ರೌಡಿಮೆಯನ್ನು, ಮೆರಿಟ್‌ನ್ನು ಬಯಸುತ್ತಾರೆ. ಜ್ಞಾನಕ್ಕೆ ಬೆಲೆ ಕೊಡುತ್ತಾರೆ. ಎಷ್ಟೇ ತಾರತಮ್ಯವಿದ್ದರು ಕೂಡ ಅಂತಹವರು ಯಾರ್ಯಾರಿದ್ದಾರೆ ಅವರಿಗೆ ನಾನು ಶರಣಾಗುತ್ತೇನೆ. ಸದನಕ್ಕೆ ಗೈಡ್ ಮಾಡಿ ಈ ವ್ಯವಸ್ಥೆಗೆ ತಂದಿರುವವರಿಗೆ, ಈಗಿನ ಪೀಳಿಗೆಯವರು ಮಾಡುವ ಚಿಂತನೆ ಚಿಲುಮೆ ಸಂಘರ್ಷವಾಗಿ ವಿಚಾರವಂತನಾಗಿ, ಹೊಸ ಹೊಸ ರೂಪವನ್ನು ತರಬೇಕು. ಇವತ್ತಿನ ಯುವ ಪೀಳಿಗೆ ಹೊಸದನ್ನೇ ಬೇಡುತ್ತಿದೆ. ಹೊಸ ನೀತಿ, ಹೊಸ ರೂಪ, ಹೊಸ ಯೋಜನೆ, ಹೊಸ ಚಿಂತನೆ ಈ ಜಗತ್ತು ಮತ್ತು ಈ ಸಮಾಜ

ನಿಂತ ನೀರಲ್ಲ ಹರಿಯುವ ನೀರಿನ ರೀತಿಯಿದೆ. ಆ ನಿಟ್ಟಿನಲ್ಲಿ ಸಿದ್ದರಾಮಯ್ಯನವರ ಮತ್ತು ಕಾಂಗ್ರೆಸ್ ಸರ್ಕಾರ ಇವತ್ತು ಮುಂದುವರೆಯುತ್ತಿದೆ. ಗ್ರಾಮೀಣ ಪ್ರದೇಶದಲ್ಲಿ ಜಾತಿವಾರು ಗಣತಿಯಾಗಬೇಕೆಂದು ಕಾಂಗ್ರೆಸ್ ಸರ್ಕಾರ ಹೇಳಿದೆ. ಇದರ ಬಗ್ಗೆ ಸಾಕಷ್ಟು ಟೀಕೆ-ಟಿಪ್ಪಣಿ ಬರುತ್ತಿದೆ ಆದರೂ ಕೂಡ ಜಗ್ಗುತ್ತಿಲ್ಲ. ನನ್ನ ಸರ್ಕಾರ ಕೊಳಚೆ ಪ್ರದೇಶಗಳಲ್ಲಿರುವ ಜನರಿಗೆ, ನನ್ನ ಸರ್ಕಾರ ಹಿಂದುಳಿದ ಪ್ರದೇಶದಲ್ಲಿರುವ ಹಿಂದುಳಿದ ವರ್ಗದವರಿಗೆ, ನನ್ನ ಸರ್ಕಾರ ಗುಡ್ಡಗಾಡಿನಲ್ಲಿರುವ ಪರಿಶಿಷ್ಟ ಪಂಗಡದವರಿಗೆ, ಪರಿಶಿಷ್ಟ ಜಾತಿಯವರಿಗೆ, ಹೆಣ್ಣುಮಕ್ಕಳಿಗೆ ರಿಯಾಯಿತಿಯನ್ನು ಕೊಡುವುದಕ್ಕೆ, ಅವರಿಗೆ ಕೊಟ್ಟಿರುವಂತಹ ಸೌಲಭ್ಯಗಳಿಗೆ ಸಾಲದ ಹೊರೆಯಾಗಬಾರದು ಬಡ್ಡಿ ಕಟ್ಟುವ ರೀತಿ ಆಗಬಾರದು ಅವರು ದಾಸ್ಯದಿಂದ ಪಾರಾಗಬೇಕೆಂಬ ದೃಷ್ಟಿಯಿಂದ ಅವರಿಗಿರುವಂತಹ ಹೊರೆಯನ್ನು ಇಳಿಸುವ ಸಲುವಾಗಿ ಸಾಲ ಮನ್ನಾ ಮಾಡುವಂತಹ ಕಾರ್ಯಕ್ರಮವನ್ನು ತಂದಿದೆ. ರೈತರು ಸಾಲಕ್ಕೋಸ್ಕರ ಪ್ರಾಣವನ್ನು ಕಳೆದುಕೊಳ್ಳುತ್ತಿದ್ದರು ಅದಕ್ಕೋಸ್ಕರ ಹಂತಹಂತವಾಗಿ ಸಾಲ ಮನ್ನಾ ಮಾಡುವ ಕಾರ್ಯಕ್ರಮವನ್ನು ಹಿಂದೆ ಕಾಂಗ್ರೆಸ್ ಸರ್ಕಾರ ಮಾಡಿತ್ತು. SC/ST, Backward class, Minorities ಮತ್ತು ಕೊಳಚೆ ಪ್ರದೇಶಗಳಲ್ಲಿರುವ ಜನರ ಆರ್ಥಿಕ ಪರಿಸ್ಥಿತಿ ಉತ್ತಮವಾಗಿರಬೇಕು, ಅವರು ಮೇಲ್ಪಂಕ್ತಿಗೆ ಬರಬೇಕು ಮತ್ತು ಅವರು ಸಮಾಜದ ಮುಖ್ಯವಾಹಿನಿಗೆ ಬರಬೇಕೆಂಬ ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಸಾವಿರಾರು ರೂಪಾಯಿಗಳ ಸಾಲವನ್ನು ಮನ್ನಾ ಮಾಡಿದ್ದಾರೆ. ಇದು ಕೂಡ ಒಂದು ಕ್ರಾಂತಿಕಾರಿ ಹೆಜ್ಜೆಯೆಂಬ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಇದರ ಜೊತೆಗೆ ಕೆಲವು ಪಾಲಿಸಿಗಳನ್ನು ಕೂಡ ತಂದಿದ್ದಾರೆ. Industrial policy, ಜವಳಿ ಪಾಲಿಸಿ ಬಗ್ಗೆ ಯೋಜನೆ ಮಾಡುತ್ತಿದ್ದಾರೆ. ಕೈಗಾರಿಕಾ ಪಾಲಿಸಿ ಮತ್ತು ಪ್ರವಾಸೋದ್ಯಮ ನೀತಿ ಬಗ್ಗೆ ಮಾತನಾಡುತ್ತಿದ್ದಾರೆ. ಹೊಸ ಹೊಸ ಯೋಜನೆಯನ್ನು ಮಾಡಿ ಹೊಸ ನೀತಿಯನ್ನು ತರುತ್ತೇವೆಂಬ ಮಾತನ್ನು ಹೇಳುತ್ತಿದ್ದಾರೆ. ಹೊಸ ನೀತಿಯಲ್ಲಿ ಹೊಸ ಚಿಂತನೆಗಳ ಅಳವಡಿಕೆಯಾಗಬೇಕು ಹಾಗೂ ಇದರ ಫಲ ನಮ್ಮ ಜನರಿಗೆ ಸಿಗಬೇಕೆಂದು ಈ ಸಂದರ್ಭದಲ್ಲಿ

ಹೇಳುತ್ತೇನೆ. ಆಡಳಿತದ ಬಗ್ಗೆ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ನಮ್ಮಲ್ಲಿ ಆಡಳಿತ ಸುಧಾರಣೆ ಮಾಡುವುದು ಅಷ್ಟು ಸುಲಭವಲ್ಲ. ಸಿಂಹದ ಮೇಲೆ ಸವಾರಿ ಮಾಡಿದಷ್ಟು ಕಷ್ಟವಿದೆ. ಆಡಳಿತದಲ್ಲಿ ಅಷ್ಟು ಜಡತ್ವವಿದೆ. ಇದಕ್ಕೆ ಸ್ವಲ್ಪ ಚುರುಕು ಮುಟ್ಟಿಸಬೇಕು. ಅವರು ಸ್ವಲ್ಪ ಚುರುಕುಗೊಂಡರೆ ನಮ್ಮ ಕಾರ್ಯಕ್ರಮಗಳು ಜಾರಿಯಾಗುತ್ತವೆ. ಒಂದು ಕಛೇರಿಗೆ ಫೋನ್ ಮಾಡಿದರೆ ಅಲ್ಲಿರುವಂತಹ peon, ಅಲ್ಲಿರುವಂತಹ clerk, ನಮಗೆ respond ಮಾಡುವುದು, ಅಲ್ಲಿರುವ ಅಧಿಕಾರಿ ಕಛೇರಿಯಲ್ಲಿ ಹಾಜರಿರುವುದು. ಅದರ ಬದಲಿಗೆ ಜನಪ್ರತಿನಿಧಿಗಳ ಜೊತೆ ಅವರು ಬಂದು ಗ್ರಾಮೀಣ ಮಟ್ಟದಲ್ಲಿ ಪ್ರವಾಸ ಮಾಡಿದರೆ ಸರ್ಕಾರದ ಕಾರ್ಯಕ್ರಮಗಳು ಹೇಗೆ ಜಾರಿಯಾಗುತ್ತವೆ ಎಂಬುದನ್ನು ಹೇಳಬಹುದು. ವಿಧಾನಸೌಧದಿಂದ, Secretariat ನಿಂದ, ಪಂಚಾಯಿತಿ ಮಟ್ಟದಿಂದ ಹಿಡಿದು ಗ್ರಾಮ ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಗ್ರಾಮೀಣ ಮಟ್ಟದವರೆಗೆ, ಕಟ್ಟಕಡೆಯದಾಗಿ ಗ್ರಾಮೀಣ ಮಟ್ಟದಲ್ಲಿರುವಂತಹ ಪಿ.ಡಿ.ಓ.ಗಳು, Village Accountant, Secretary ಗಳ್ಯಾರು ನಮಗೆ ಸಿಗುತ್ತಿಲ್ಲ. ಅವರನ್ನೇನಾದರೂ ಕೇಳಿದರೆ ನಮಗೆ ವಾಸದ ಮನೆಯೇ ಇಲ್ಲವೆಂದು ಹೇಳುತ್ತಾರೆ. ನಾವು ಜನರ ಡಿಮ್ಯಾಂಡ್‌ಗಳನ್ನು ಹೇಳುವ ಹಾಗಿಲ್ಲ. ಇಲ್ಲಿ ಗ್ರಾಮ ಸೇವಕರು, ಕಾರ್ಯದರ್ಶಿಗಳು ಇರುವುದಕ್ಕೆ quarters ಕಟ್ಟಿಕೊಡಿ, ಪಿ.ಡಿ.ಓ.ಗಳಿಗೆ ಮನೆ ಕಟ್ಟಿಸಿಕೊಡಿ ಯೆಂದು ಅವರ ಡಿಮ್ಯಾಂಡ್ ಅನ್ನು ಮೊದಲೇ ನಮಗೆ ಹೇಳುತ್ತಾರೆ. ವೈದ್ಯರಿಲ್ಲವೆಂದರೆ ವೈದ್ಯರಿಗೆ ಇರುವುದಕ್ಕೆ ಜಾಗವಿಲ್ಲವೆಂದು ಹೇಳುತ್ತಾರೆ, ನರ್ಸ್ ಬಗ್ಗೆ ಕೇಳಿದರೆ ನರ್ಸ್‌ಗಳಿರುವುದಕ್ಕೆ ಮನೆಯೇ ಇಲ್ಲವೆಂದು ಹೇಳುತ್ತಾರೆ. ಜನರ ಸಮಸ್ಯೆಗಳನ್ನು ನಾವು ಹೇಳುವುದಕ್ಕೆ ಹೋದರೆ ನಮಗಿಂತ ಮೊದಲೇ ಅವರ ಸಮಸ್ಯೆಗಳನ್ನು ಹೇಳುತ್ತಾರೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ಈ ದೇಶದಲ್ಲಿರುವಂತಹ ವಿದ್ಯಾವಂತ ಸರ್ಕಾರಿ ನೌಕರರ್ಯಾರು ಗ್ರಾಮೀಣ ಪ್ರದೇಶದಲ್ಲಿ ಇರುವುದಕ್ಕೆ ಇಷ್ಟಪಡುವುದಿಲ್ಲ. ಯಾರು ಹಳ್ಳಿಯಲ್ಲಿರುತ್ತಾರೆಂದು ನನಗೆ ಗೊತ್ತಿಲ್ಲ. Quarters ಕಟ್ಟಿದರೂ ಕೂಡ ಹಳ್ಳಿಯಲ್ಲಿರುವುದಿಲ್ಲ. ಕಾರಣವೇನೆಂದು ನನಗೆ ಅರ್ಥವಾಗುತ್ತಿಲ್ಲ. ಹಳ್ಳಿಯಿಂದ

ಬರುವ ಊಟ, ತಿಂಡಿ, ಹಾಲು, ಮೊಸರು, ಬೆಣ್ಣೆ, ತುಪ್ಪ ಎಲ್ಲಾ ಬೇಕು ಆದರೆ ಹಳ್ಳಿ ಮಾತ್ರ ಯಾರಿಗೂ ಬೇಡ. Village Accountant ಅಲ್ಲ ಒಬ್ಬ ಅಂಗನವಾಡಿ ಮೇಡಂಗೆ ಕೂಡ ಹಳ್ಳಿಯಲ್ಲಿರುವುದಕ್ಕೆ ಇಷ್ಟವಿಲ್ಲ. ಒಬ್ಬ ವೈದ್ಯನಿಗೂ ಕೂಡ ಹಳ್ಳಿಯಲ್ಲಿರುವುದಕ್ಕೆ ಇಷ್ಟವಿಲ್ಲ ಇವತ್ತು ಆ ಸ್ಥಿತಿ ಇದೆ. Quarters ಕಟ್ಟಿರುವ ಉದಾಹರಣೆಗಳು ಬೇಕಾದಷ್ಟಿವೆ ಆದರೆ ಹಳ್ಳಿ ಮಾತ್ರ ಯಾರಿಗೂ ಇಷ್ಟವಿಲ್ಲ. ಅದಕ್ಕೆ ಯಾವ ವಿಶೇಷವಾದ ಕಾನೂನನ್ನು ಮಾಡಬೇಕೆಂದು ನನಗೆ ಗೊತ್ತಿಲ್ಲ.

ಶ್ರೀ ಕೆ. ಶಿವಮೂರ್ತಿ:- ಮಾನ್ಯ ಅಧ್ಯಕ್ಷರೆ, ಇವತ್ತು ಒಳ್ಳೆಯ ಟೀಚರ್ ಹಳ್ಳಿಯಲ್ಲಿ ಪಾಠ ಮಾಡುವುದಕ್ಕೆ ತಯಾರಿಲ್ಲ. Quality teacher he doesn't want stay in the village, he want to come to the city and start his own tutorial. ಏಕೆಂದರೆ ಕೋಚಿಂಗ್ ಸೆಂಟರ್ ಮಾಡಿ ದುಡ್ಡನ್ನು ದುಡಿಯಬೇಕಾದ ಕಾರಣದಿಂದ ಹಳ್ಳಿಯಲ್ಲಿರುವುದಿಲ್ಲ. ಒಂದು ಕಾಲದಲ್ಲಿ ನಾವು bare foot doctors ಎನ್ನುವ concept ಇತ್ತು. ನಾವೂ ಸಹ ಅದನ್ನು ಹೇಳಿದ್ದೇವೆ. ಈಗಿನ ಡಾಕ್ಟರ್‌ಗಳು ಓಹೋ . . . . . ಆಹಾ . . . . ಎಂದು ಹೇಳುತ್ತಾರೆ. ಯಾರಿಂದ ಡಾಕ್ಟರ್ ಆಗಿದ್ದೇವೆ, ಯಾರ ಖರ್ಚಿನಲ್ಲಿ ಡಾಕ್ಟರ್ ಆಗಿದ್ದೇವೆನ್ನುವ ಸಾಮಾಜಿಕ ಜವಾಬ್ದಾರಿಯನ್ನು ಮರೆತಿರುತ್ತಾರೆ. ನಾವು ಹಳ್ಳಿಗೆ ಹೋಗುವುದಿಲ್ಲವೆನ್ನುತ್ತಾರೆ. ಒಂದು ವೇಳೆ ಸಂಬಳ ಹೆಚ್ಚಿಗೆ ಮಾಡಿದರೂ ಸಹ ಹಳ್ಳಿಗೆ ಹೋಗುವುದಿಲ್ಲವೆನ್ನುತ್ತಾರೆ. ಏಕೆಂದರೆ they want to earn money. He wants facilities in the cities. Again engineers, no engineers want to stay, no officers want to stay, ಅದಕ್ಕಾಗಿಯೇ ಇವರೆಲ್ಲರೂ ಹಳ್ಳಿಯಲ್ಲಿ ಇರುವುದಿಲ್ಲವೆಂದರೆ administration ಯಾವ ರೀತಿ ಹೋಗುತ್ತದೆ? ಯಾವ ರೀತಿ ಮನೆ ಬಾಗಿಲಿಗೆ ಆಡಳಿತ ಹೋಗುತ್ತದೆನ್ನುವ ಬಗ್ಗೆ ಸಮಗ್ರ ಚಿಂತನೆಯಾಗಬೇಕು. ಆಡಳಿತದ ಚಿಂತನೆಯಾಗಿ ಸುಧಾರಣೆಯಾಗಿ ಬದಲಾವಣೆಯಾಗಬೇಕು. ಅದನ್ನು ಕಾರ್ಯರೂಪಕ್ಕೆ ತರಬೇಕಾದರೆ time bound ಕಾರ್ಯಕ್ರಮವನ್ನು ಹಾಕಬೇಕು. ನಾನು ಮುಖ್ಯಮಂತ್ರಿಗಳ ಹತ್ತಿರ ಹೋದಾಗ, super scaled IAS officers ಮಾನ್ಯ ಮುಖ್ಯಮಂತ್ರಿಗಳಾದ

ಶ್ರೀ ಸಿದ್ಧರಾಮಯ್ಯನವರ ಹತ್ತಿರ ಹೆದರಿಕೊಂಡೇ ಬರುತ್ತಾರೆ. ಆದರೆ ಕೆಲವು ಮಂತ್ರಿಗಳ ಹತ್ತಿರ ಹೋದಾಗ ಯಾರೂ ಬರುವುದೇ ಇಲ್ಲ. ನಮ್ಮಂತಹ MLA ಬಂದರೆ ಸಾರ್, ಇವತ್ತು ರಜೆ ಹಾಕಿಕೊಂಡಿದ್ದೇನೆ, ಇವತ್ತು tour ಇದೆ, ಇವತ್ತು inspection ಇದೆ, ಇವತ್ತು Court duty ಇದೆ ಎಂದು ಹೇಳುವ avoidness ತೋರಿಸುತ್ತದೆ. ಕಛೇರಿಯಲ್ಲಿ 24 ಗಂಟೆಗಳಲ್ಲಿ ಎಷ್ಟು ದಿವಸ ಎಲ್ಲಿ ಹೋಗುತ್ತಾರೆನ್ನುವ movement register ನೋಡಿದರೆ, ಅಲ್ಲಿಯೂ ಸಹ ಬರೆದಿರುವುದಿಲ್ಲ. ರಜದ ಬಗ್ಗೆಯೂ ನಮಗೆ ತಿಳಿದಿರುತ್ತದೆ. ಹಾಗಾಗಿ ಕೆಲಸ ಯಾವ ರೀತಿ ತೆಗೆದುಕೊಳ್ಳಬೇಕು, ಕಾರ್ಯಕ್ರಮಕ್ಕೆ ಯಾವ ರೀತಿ ಚಾಲನೆ ಕೊಡಬೇಕೆಂಬ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಈ ವಿಚಾರದಲ್ಲಿ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಬಹಳ ಗಡುಸಾಗಿದ್ದಾರೆ. ಆಡಳತದ ವಿಚಾರದಲ್ಲಿ ಬಹಳ ಗಡುಸಾಗಿದ್ದಾರೆ. ಆದರೆ ಅವರ ಹಿಂದೆ lobbyಯೂ ಇದೆ. ಇವತ್ತು Judiciary and Legislature ಮಧ್ಯೆ ಕೊಂಡಿ ಇರುವಂತಹದು Executive. Executives ಮನಸ್ಸು ಮಾಡಿದರೆ they can do wonders, but they can destroy us also. ಆದ್ದರಿಂದ ಅವರ ಮನೋಭೂಮಿಕೆಯನ್ನು ತಿಳಿದುಕೊಂಡು ಅದರ ಪ್ರಕಾರ ಬದಲಾವಣೆಯನ್ನು ತರಬೇಕಾಗಿದೆ. The administrative reforms is a very essential to inspire, to inculcate, to discipline administration of the country or the State. ಆದ್ದರಿಂದ ಇದು ಪಂಚಾಯಿತಿ ಮಟ್ಟದಲ್ಲಿ ಮತ್ತು ತಾಲ್ಲೂಕು, ಜಿಲ್ಲಾ ಪಂಚಾಯಿತಿ ಮಟ್ಟದಲ್ಲಿ, ರಾಜ್ಯ ಮಟ್ಟದಲ್ಲಿ ಇರುವಂತಹ ಆಡಳಿತ ವ್ಯವಸ್ಥೆ. ಇಂದು ಕೇಂದ್ರ ಸರ್ಕಾರದ ಯೋಜನೆಗಳು ಸಾಕಷ್ಟಿವೆ ಮತ್ತು ರಾಜ್ಯ ಸರ್ಕಾರದ ಕಾರ್ಯಕ್ರಮಗಳು ಬಹಳಷ್ಟಿವೆ. ಒಬ್ಬ ಅಧಿಕಾರಿಗೆ ನಿಮ್ಮ ಇಲಾಖೆಯಲ್ಲಿ ಯಾವ ಕಾರ್ಯಕ್ರಮವಿದೆ ಎಂದು ಹೇಳಿ ತಾಲ್ಲೂಕು ಪಂಚಾಯಿತಿ ಮೀಟಿಂಗ್‌ನಲ್ಲಿ ಕೇಳಿದಾಗ, ಅವರ ಇಲಾಖಾ ಕಾರ್ಯಕ್ರಮ ಅವರಿಗೆ ಗೊತ್ತಿರುವುದಿಲ್ಲ. ಈ ರೀತಿಯ un-preparedness ಕಾಣುತ್ತದೆ. ಇಲಾಖಾ ಕಾರ್ಯಕ್ರಮಗಳ ಮಾಹಿತಿಯನ್ನು ಓದಿರುವುದೇ ಇಲ್ಲ. They are supposed to enlighten the public representatives. ನಾವು ಕೇಳಿದರೆ, ಬಂದಿದೆ, ಇನ್ನೂ ಆದೇಶ

ಬಂದಿರುವುದಿಲ್ಲ, ಸರ್ಕಾರದಿಂದ ಸುತ್ತೋಲೆ ಬಂದಿರುವುದಿಲ್ಲ ನೋಡಬೇಕು ಸಾರ್, ಮೇಲಿನ ಅಧಿಕಾರಿಗಳು ಹೇಳಿಲ್ಲವೆಂದು ನಮಗೆ ಸಬೂಬು ಹೇಳುತ್ತಾರೆ. As elected representatives ಹೀಗಾದರೆ ಆಡಳಿತವನ್ನು ಯಾವ ರೀತಿ ಕಾರ್ಯರೂಪಕ್ಕೆ ತರಬೇಕು? Constituency ಯನ್ನು ಯಾವ ರೀತಿ ಅಭಿವೃದ್ಧಿ ಪಡಿಸಬೇಕು? ಜನಗಳಿಗೆ ಯಾವ ರೀತಿ ಕಾರ್ಯಕ್ರಮಗಳನ್ನು ಮುಟ್ಟಿಸಬೇಕು? ಆದ್ದರಿಂದ ನಾನು ಸದನದ ಮೂಲಕ ಒತ್ತಾಯ ಮಾಡುವುದೇನೆಂದರೆ, ಆಡಳಿತದಲ್ಲಿ ಬದಲಾವಣೆಯಾಗಬೇಕು, ಸುಧಾರಣೆಯಾಗಬೇಕು, administrative reforms ತರಬೇಕೆನ್ನುವ ಮಾತನ್ನು ಹೇಳುತ್ತೇನೆ. ಐ.ಎ.ಎಸ್. ಆಫೀಸರ್‌ನಿಂದ ಹಿಡಿದು ಒಬ್ಬ petty clerk ವರೆಗೂ ಆಗಬೇಕೆನ್ನುವ ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ.

Article 371(J) it is a contribution of the congress Government. UPA Government ನಲ್ಲಿ ಮಾಡಿರತಕ್ಕಂತಹ ಒಂದು ಕ್ರಾಂತಿಕಾರಿ ತೀರ್ಮಾನ. ಯಾವ ಪ್ರದೇಶಗಳು ಹಿಂದುಳಿದಿವೆಯೋ ಆ ಪ್ರದೇಶಗಳು ಮುಂದಕ್ಕೆ ಬರಬೇಕೆನ್ನುವ ದೃಷ್ಟಿಯಿಂದ, ಅದರಲ್ಲಿ ಶಿಕ್ಷಣ ಇರಬಹುದು, job ಕೊಡುವಂತಹ ವ್ಯವಸ್ಥೆ ಇರಬಹುದು, ಇನ್ನೂ ಹಲವಾರು ರೀತಿಯಿರಬಹುದು. ಸದನದಲ್ಲಿ valuable time ಏನಿದೆ ಅದು ಕೆಲವು irrelevant ವಿಚಾರಗಳಿಗೆ ಚರ್ಚೆಯಾದವು. ಯಾವ ವಿಷಯಗಳಿಗೆ ವಿಚಾರ ಮಾಡಬೇಕೋ ಮಾಡದೇ, ಚಿಂತನೆಯಿಟ್ಟು ಜನ ನಮ್ಮನ್ನು ಇಲ್ಲಿಗೆ ಕಳುಹಿಸಿರುತ್ತಾರೋ ಆ ಚಿಂತನೆಗಳ ಚರ್ಚೆ ಆಗಿಲ್ಲದಿರುವುದೇ ವಿಪರ್ಯಾಸ. ಅದಕ್ಕಾಗಿಯೇ ಜನರು ಹೇಳುವುದೇನೆಂದರೆ 4–5 ದಿವಸಗಳ ಕಾಲ ಧರಣಿ ಮಾಡುತ್ತೀರಿ. ಕೃಷ್ಣಾ ನದಿ ನೀರಿನ ಬಗ್ಗೆ 8 ದಿವಸ ಮತ್ತು 4 ದಿವಸಗಳ ಕಾಲ ಆ ಕಡೆಯಾಯಿತು. ಕಾವೇರಿ ನದಿ ಬಗ್ಗೆ ಈ ಕಡೆ ಆಯಿತು. ಆದರೆ ಮಧ್ಯದಲ್ಲಿರುವ ತುಂಗಭದ್ರಾ ನದಿ ಬಗ್ಗೆ ನಮಗೆ ಚರ್ಚೆಯೇ ಆಗಲಿಲ್ಲ. ಸಣ್ಣ ನೀರಾವರಿ, sprinkler, drip irrigation, ಸಣ್ಣ ಕೆರೆಗಳ ಬಗ್ಗೆ ಚರ್ಚೆಯಾದವು. ಆದರೆ ಕುಡಿಯುವ ನೀರಿನ ಬಗ್ಗೆ ಚರ್ಚೆಯಾಗಲೇ ಇಲ್ಲ. ವಿಪರ್ಯಾಸ ಏನೆಂದರೆ, ಯಾವುದೋ ಒಂದು ಸಣ್ಣ ವಿಚಾರಕ್ಕೆ, ರೈತರ ವಿಚಾರಕ್ಕೆ ಚರ್ಚೆ ಮಾಡಲಿ. ಆದರೆ ಐದೈದು ದಿವಸ

ಧರಣಿ ಮಾಡಿದರೆ ಹೇಗೆ? ರೈತರಲ್ಲಿ ಬಹಳ ನಮೂನೆಯ ರೈತರಿದ್ದಾರೆ. ಹಾಗೇಯೇ ಪ್ರದೇಶಗಳಲ್ಲಿ ಬೇರೆ ಬೇರೆ ರೀತಿಯ ಪ್ರದೇಶಗಳಿವೆ. ನಮ್ಮ ಮಲೆನಾಡು ಪ್ರದೇಶದಲ್ಲಿ ಸಾಕಷ್ಟು ಸಮಸ್ಯೆಗಳಿವೆ. ಕುಡಿಯುವ ನೀರಿಗೂ ಹೆಚ್ಚಿನ ಸಮಸ್ಯೆ ಇದೆ. ಕುಡಿಯುವ ನೀರು ಮತ್ತು ಶಿಕ್ಷಣದ ಬಗ್ಗೆ ನಮ್ಮ ಕಡೆಯಲ್ಲಿ ನಾವು ಜಾತ್ರೆ, ಸಂತೆಗೆ ಹೋದರೆ, ದಿನಸಿಗಳನ್ನು ತೆಗೆದುಕೊಂಡು ಬರುತ್ತಿದ್ದೆವು. ಆದರೆ ಇಂದು ನೀರನ್ನು ಕೊಂಡುಕೊಳ್ಳುವುದಕ್ಕೆ ಜಾತ್ರೆ, ಸಂತೆಗಳಿಗೆ ಹೋಗುತ್ತಿದ್ದೇವೆ. ನೀರಿಗಾಗಿ ಯುದ್ಧ, ಹೊಡೆದಾಟಗಳಾಗುತ್ತವೆಂದು ಹಿಂದೆ ಕೇಳಿದ್ದೆವು. ಬಿ.ಪಿ.ಎಲ್. ವರ್ಗದ ವ್ಯಕ್ತಿ ಸಂತೆಗೆ ಏಕೆ ಬಂದೆ ಎಂದು ಕೇಳಿದರೆ, ದಿನಸಿಗೆ ಅಲ್ಲ, ನೀರು ಕೊಂಡುಕೊಳ್ಳುವುದಕ್ಕೆ ಬಂದಿದ್ದೇನೆಂದು ಹೇಳುತ್ತಾರೆ. He want protected water, he want a healthy water, ಅದಕ್ಕಾಗಿ ಒಂದು water policyಯನ್ನು ಕುಡಿಯುವ ನೀರಿನ ಬಗ್ಗೆ ಒಂದು ವಾಟರ್ ಪಾಲಿಸಿಯನ್ನು ಮಾಡಬೇಕೆಂದು ಒತ್ತಾಯಮಾಡುತ್ತೇನೆ. ವಾಟರ್ ಪಾಲಿಸಿ ಬಗ್ಗೆ ಹಲವಾರು ಇಲಾಖೆಗಳಿದ್ದು, ಪಂಚಾಯತ್ ರಾಜ್ ಇಲಾಖೆಯವರು, Minor and Major Irrigation Department ನವರು ಮಾಡುತ್ತಿದ್ದಾರೆ. ಇದರ ಜೊತೆಗೆ ಸಣ್ಣ ಸಣ್ಣ ಕೆರೆಗಳು ಮತ್ತು ನದಿಗಳ ಬಗ್ಗೆ ಮಾಡುತ್ತಿದ್ದಾರೆ. ಆದ್ದರಿಂದ ಇವೆಲ್ಲವನ್ನೂ ಸೇರಿಸಿ the duplicacy of work and expenditure ಬಗ್ಗೆ ಯೋಚನೆ ಮಾಡಬೇಕು. ಆದ್ದರಿಂದ ಕುಡಿಯುವ ನೀರಿನ ಬಗ್ಗೆ ಮತ್ತು ನೀರನ್ನು ಹಾಯಿಸುವುದರ ಬಗ್ಗೆ, ನೀರಾವರಿ ಬಗ್ಗೆ one policy is required. Expenditure ನಲ್ಲಿ ಎಷ್ಟೋ avoid ಮಾಡಬಹುದು. Un-necessary projects ಆಗುತ್ತಿದೆ. ಅದಕ್ಕಾಗಿಯೇ there should be application of mind for a master plan for a water policy. ಆದ್ದರಿಂದ ನಮ್ಮ ಸರ್ಕಾರ ದಯಮಾಡಿ ಆ ದಿಸೆಯಲ್ಲಿ ಮುನ್ನುಗ್ಗಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಆದರೆ ಕೂಡಲ ಸಂಗಮದಲ್ಲಿ ನೀರಾವರಿಗಾಗಿ 10,000 ಕೋಟಿ ರೂ.ಗಳನ್ನು ಕೊಡುತ್ತೇನೆಂದು ಹೇಳಿರುವುದಕ್ಕೆ ನಾನು ನಮ್ಮ ಸರ್ಕಾರವನ್ನು ಅಭಿನಂದಿಸುತ್ತಿದ್ದೇನೆ. ಇದನ್ನು ಚಾಚೂ ತಪ್ಪದೇ ಶ್ರೀಮಾನ್ ಸಿದ್ಧರಾಮಯ್ಯನವರು ಮಾಡುತ್ತಿದ್ದಾರೆ.

ಈಗಾಗಲೇ ಎರಡು ಬಿಲ್ಲುಗಳನ್ನು ಪಾಸ್ ಮಾಡಿರುತ್ತೇವೆ. ಕೆರೆಗಳನ್ನು ರಕ್ಷಣೆ ಮಾಡುವ ವಿಚಾರದಲ್ಲಿ bill ಪಾಸ್ ಆಗಿರುತ್ತದೆ. This is a progressive step. It is avoiding further damage. ಅದಕ್ಕಾಗಿಯೇ ನಿನ್ನೆಯಷ್ಟೇ ಸಣ್ಣ ಮತ್ತು ದೊಡ್ಡ ಕೆರೆಗಳಿಗೆ ಸಂಬಂಧಿಸಿದಂತೆ ಬಿಲ್ಲನ್ನು ಪಾಸ್ ಮಾಡಿದ್ದೇವೆ. ಕೆರೆಗಳ ರಕ್ಷಣೆ ಮತ್ತು ಸಂರಕ್ಷಣೆಯಾಗಬೇಕು, ಕೆರೆಗಳ ನಿರ್ವಹಣೆಯಾಗಬೇಕು, ಕೆರೆಯ ನೀರು ಮತ್ತು ನದಿ ನೀರು ಸಮಾನವಾಗಿ ವಿತರಣೆಯಾಗಬೇಕು. ಊರಿನಲ್ಲಿ ನೀರಿನ ಸಮಸ್ಯೆ ಯಾವ ರೀತಿಯಿದೆ ಎಂದರೆ ಕೆಲವು ಕಾಲೋನಿಗಳಿಗೆ ನೀರೇ ಹೋಗುವುದಿಲ್ಲ. Suppose ಕಟ್ಟ ಕಡೆಯಿರುವ ಜನತಾ ಕಾಲೋನಿಯೇನಿದೆ, hamlet ಇದೆ ಅಂತಹ ಕಡೆಗಳಿಗೆ ನೀರೇ ಹೋಗುವುದಿಲ್ಲ. ಅವರೆಲ್ಲಾ ಅಮಾಯಕರು. ಈ ಸಂಬಂಧವಾಗಿ ಮಂಡಲ ಪಂಚಾಯಿತಿಯಲ್ಲಿ ತಿಕ್ಕಾಟ ಉಂಟಾಗುತ್ತದೆ. ಈ ರೀತಿಯಾಗಿ ಕುಡಿಯುವ ನೀರಿನಲ್ಲಿ ತಾರತಮ್ಯ ಆಗಬಾರದೆನ್ನುವ ಉದ್ದೇಶದಿಂದ ವಾಟರ್ ಪಾಲಿಸಿಯಾಗಬೇಕು. ಅದಕ್ಕಾಗಿಯೇ ಕುಡಿಯುವ ನೀರಿನ ಬಗ್ಗೆ ಇರುವ 3–4 ಇಲಾಖೆಗಳೆಲ್ಲರೂ ಒಟ್ಟಾಗಿ ಸೇರಿ ಕುಳಿತು ಚರ್ಚೆ ಮಾಡಿ ಡೂಪ್ಲಿಕೆಸಿ ಆಗತಕ್ಕಂತಹ ಕೆಲಸವನ್ನು, expenditure ಅನ್ನು ತಡೆಗಟ್ಟಿ, ಕುಡಿಯುವ ನೀರಿನ ಮತ್ತು ನೀರಾವರಿ ಬಗ್ಗೆ ಏಕ ನೀತಿಯ ಪಾಲಿಸಿಯನ್ನು ಮಾಡಬೇಕೆಂದು ಸದನದ ಮುಖಾಂತರ ಒತ್ತಾಯ ಮಾಡುತ್ತಿದ್ದೇನೆ.

371(J) ಆರ್ಟಿಕಲ್‌ನಲ್ಲಿ ಯಾವ ರೀತಿ ತಾರತಮ್ಯವಿದೆಯೇ, ಮೈಸೂರು, ಹೈದ್ರಾಬಾದ್, ಬಾಂಬೆ ಭಾಗಗಳಲ್ಲಿ ಎಷ್ಟು ಹಿಂದುಳಿದಿದ್ದಾರೋ ಹಾಗೆಯೇ ಚಿಕ್ಕಬಳ್ಳಾಪುರ, ಕೋಲಾರ, ನಮ್ಮ ಭಾಗದ ಬಯಲು ಸೀಮೆಗಳಲ್ಲಿ ಅದಕ್ಕಿಂತಲೂ ಹೆಚ್ಚಾಗಿ ಹೀನಾಯವಾಗಿ ಹಿಂದುಳಿದಿದ್ದೇವೆ. ನಮಗೆ ಕುಡಿಯುವುದಕ್ಕೆ ನೀರಿಲ್ಲ. ಹಾಗಾಗಿ ನಾನು ವಿಶೇಷವಾಗಿ ಪದೇ ಪದೇ ಹೇಳುವುದೇನೆಂದರೆ, 371(J) ಕೆಳಗಡೆ ಇರತಕ್ಕಂತಹ ಸಣ್ಣ ಊರುಗಳಿಗೆ ನಾವು visit ಮಾಡಬೇಕು. ಮಾನ್ಯ ಸದಸ್ಯರಾದ ಶ್ರೀ ಚಿಕ್ಕಮಾಧು ಅವರು ಸದನದಲ್ಲಿಲ್ಲ. ಆಡಿಗಳು ಹೋಗುತ್ತಾರೆ. ಅವರು ಮನುಷ್ಯರೋ ಅಥವಾ ಮೃಗಗಳೋ ಎನ್ನುವುದನ್ನು ನೋಡಿ ಹೇಳಬೇಕು. ಸ್ವಾತಂತ್ರ್ಯ ಬಂದ ನಂತರ

ನಮ್ಮನ್ನು ಕಾನೂನು ವ್ಯಾಪ್ತಿಯಿಂದ ದೂರವಿಟ್ಟಿರುತ್ತಾರೆ. There are so many microscopic communities which are cut off, which are segregated, which are isolated, which are lift off. They are treated as second rate citizens of the country, because our involvement, identity is not there in the Act. ರೆವಿನ್ಯೂ ಆಕ್ಟ್ ಕೆಳಗಡೆ ನಮ್ಮ ಆಸ್ತಿಯ ಲೆಕ್ಕವಿಲ್ಲ, ಜಮೀನಿನ ಲೆಕ್ಕವಿಲ್ಲ, ಸತ್ತರೆ ಸ್ಮಶಾನದ ಲೆಕ್ಕವಿಲ್ಲ, ನಮ್ಮ ಊರಿನ ಲೆಕ್ಕವಿಲ್ಲವೆಂದು ಸಂವಿಧಾನದಲ್ಲಿ ಹೇಳುತ್ತಾರೆ. ಆದರೆ ನಮ್ಮ vote ಮಾತ್ರ ಬೇಕು. ಆದರೆ ಸೌಲಭ್ಯ ಮಾತ್ರ ಬೇಡ. ನಮಗೆ ಮೂಲಭೂತ ಸೌಲಭ್ಯ ಸಿಗಲಿಲ್ಲ, ರೆವಿನ್ಯೂ ಗ್ರಾಮವೆಂದು consider ಮಾಡಿರುವುದಿಲ್ಲ, ನಮಗೆ ಪ್ರತ್ಯೇಕವಾದಂತಹ ಅಲೋಕೇಷನ್ ಮಾಡಿಲ್ಲ, ನಾವೆಲ್ಲಾ dependants ಜನಗಳು. ಆಹಾರ ಧಾನ್ಯಗಳಿಗಾಗಿ ದೊಡ್ಡ ಊರುಗಳಲ್ಲಿರುವ ನ್ಯಾಯಬೆಲೆ ಅಂಗಡಿಗಳಿಗೆ ಹೋಗಬೇಕು. ನಾವು ಕೂಲಿ ಮಾಡುವಂತಹ ಜನ, ಕೂಲಿಯನ್ನು ಬಿಟ್ಟು ಅಲ್ಲಿ ಹೋಗಿ ಭಿಕ್ಷುಕರ ರೀತಿಯಲ್ಲಿರಬೇಕು. ಒಂದು ದಿವಸ ರೇಷನ್‌ಗೆ ಹೋದರೆ ರೇಷನ್ ಇದ್ದರೂ ಸಹ ಇಲ್ಲವೆಂದು ಕೂರಿಸುತ್ತಾರೆ. ನಮ್ಮ ಹೆಣ್ಣು ಮಕ್ಕಳು ಅಲ್ಲಿಗೆ ಹೋಗುತ್ತಾರೆ, ಆಗ ಅವರನ್ನು exploit ಮಾಡುತ್ತಾರೆ. ನಮ್ಮ ಮಕ್ಕಳು ಅಲ್ಲಿಗೆ ಹೋಗುತ್ತಾರೆ. ಅಂತಹ ಸಂದರ್ಭದಲ್ಲಿ ಕೂಲಿ ಸಿಗುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ Food Security Act ಅವಶ್ಯಕ. ಕೇಂದ್ರ ಸರ್ಕಾರವು Food Security Act ಅನ್ನು ಮಾಡಿದೆ. The spirit of the Food Security Act is door delivery, ಮೊಬೈಲ್ ವ್ಯಾನ್ ಮೂಲಕ ಮಾಡಬೇಕು. Itt is right. It is an Act. ಆದರೂ ಸಹ ಅದನ್ನು ಚಾಲನೆ ಕೊಡಲಿಕ್ಕೆ ಎಲ್ಲಾ ಪ್ರದೇಶದಲ್ಲಿರುವ ಸಣ್ಣ ಸಣ್ಣ ಗ್ರಾಮಗಳಿಗೆ, ಬಡತನದಿಂದ ನರಳುತ್ತಿರುವ ಕೂಲಿ ಕಾರ್ಮಿಕರಿಗೆ, ಗುಳೆ ಹೋಗುವಂತಹವರಿಗೆ Food Security Act ಪ್ರಕಾರ ಅವರಿಗೆ ಆಹಾರ ದಿನಸಿಯನ್ನು ಪೂರೈಸುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತಿದ್ದೇನೆ. ತಮ್ಮಲ್ಲಿರುವಂತಹ Act ಅನ್ನು ಇಂಪ್ಲಿಮೆಂಟ್ ಮಾಡದೇ ಹೋದರೆ, you are violating the Act. ಅದಕ್ಕಾಗಿಯೇ you should understand and read in between the line, you interpret in the manner

of Social justice ಎಂದು ಹೇಳಿ, ಆ food securityಯನ್ನು ಅಲ್ಲಿಗೆ ತಲುಪಿಸುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

ಹಾಗೆ, 371(J)ಅಡಿಯಲ್ಲಿ ಸಾಕಷ್ಟು ಹಣವನ್ನು ಕೊಟ್ಟಿದ್ದಾರೆ. ಆ ಭಾಗದಲ್ಲಿ ಎಷ್ಟು ಹಿಂದುಳಿದಿದ್ದಾರೆಯೋ ಅದೇ ರೀತಿಯಲ್ಲಿ ಬೇರೆ ಭಾಗದಲ್ಲಿಯೂ ಹಿಂದುಳಿದಿದ್ದಾರೆ. ಇದು ಸ್ವಲ್ಪ ದಿನ ನಡೆಯಬಹುದು. ಆದರೆ, ಮುಂದಿನ ದಿನಗಳಲ್ಲಿ 371(J) ನಾವೂ ಸಹ ಇದ್ದೇವೆ ಎನ್ನುವಂಥ claim ನಿಂದ ನಮ್ಮ ಜನ ಹೊರಡುತ್ತಾರೆ. ಅದಕ್ಕೋಸ್ಕರ ಅಲ್ಲಿ ಹಣ ಏನು ಕೊಡುತ್ತೀರೋ ಆ ಹಣವನ್ನು ಖರ್ಚು ಮಾಡಿ. ನೀವು ಮುಂದಕ್ಕೆ ಬನ್ನಿ. ನಮ್ಮ ಪ್ರೋತ್ಸಾಹ ಇದೆ. ಆದರೆ, ಇಲ್ಲಿಯೂ ಸಹ ಹಿಂದುಳಿದಿರತಕ್ಕಂಥ ಜನ, ಹಿಂದುಳಿದಿರತಕ್ಕಂಥ ಪ್ರದೇಶಗಳು ಇವೆ. ಕರ್ನಾಟಕ ಒಂದು ಎನ್ನುವಂಥ ಮಾತನ್ನು ಹೇಳಬೇಕಾಗಿದೆ. ಏಕೆಂದರೆ, ಬೆಳಗಾಂ ಅಧಿವೇಶನದಲ್ಲಿ ಹೇಳಿದಾಗ, ಕರ್ನಾಟಕ ಪ್ರತ್ಯೇಕವಾಗಿರತಕ್ಕಂಥ ಕೂಗನ್ನು ಕೂಗಿದರು. ಈ ಸದನದಲ್ಲೇ ಕೂಗಿದರು. ಪ್ರತ್ಯೇಕವಾಗಿರುವಂಥ ರಾಜ್ಯ ಬೇಕು ಎನ್ನುವ ಮಾತು, ಇದು ಎಂಥ ಒಂದು ಅಪಹಾಸ್ಯ? ಎಂಥ ಕೂಗು? ಇದಕ್ಕೋಸ್ಕರ ಎಷ್ಟು ತ್ಯಾಗ ನಡೆದಿದೆ, ಎಷ್ಟು ಹೋರಾಟ ನಡೆದಿದೆ. ಈ ಭಾಷೆ ಮೇಲೆ, ನೆಲದ ಮೇಲೆ, ಜಲದ ಮೇಲೆ ಎಷ್ಟು ಜನ ಪುಣ್ಯವಂತರು ತ್ಯಾಗ ಮಾಡಿ, ಹೋರಾಟ ಮಾಡಿ ತಮ್ಮ ಬಲಿದಾನ ಕೊಟ್ಟಿದ್ದಾರೆ. ಆದರೂ ಸಹ ಅಪಸ್ವರ ಎದ್ದೇಳುತ್ತಿದೆ. ದಯವಿಟ್ಟು, ಅದನ್ನು ತಡೆಗಟ್ಟಬೇಕು. ಯಾವ ಪಾರ್ಟಿಯವರೆ ಆಗಲಿ ಈ ಅಪಸ್ವರವನ್ನು ಎತ್ತಿದರೆ we should cut off. We should stop it. We should block it. ಅದಕ್ಕೋಸ್ಕರ, ಇಡೀ ರಾಜ್ಯ, ಇಡೀ ಸದನ ಅದರ ಬಗ್ಗೆ ಚಿಂತನೆ ಮಾಡಬೇಕು. India is one, Karnataka is one. ಕನ್ನಡ ನಮ್ಮ ಮಾತೃ ಭಾಷೆ. ಆ ತಾಯಿಯ ಎದೆಯ ಹಾಲನ್ನು ಕುಡಿದು ನಾವು ಬೆಳೆದಿದ್ದೇವೆ. ಅದಕ್ಕೋಸ್ಕರ, ಆ ತಾಯಿಗೆ ಯಾವ ರೀತಿಯಲ್ಲಿಯೂ ಚ್ಯುತಿ ಬರದ ರೀತಿಯಲ್ಲಿ ನಾವು ಮಾತನಾಡಬಾರದು ಹಾಗೂ ಅದು ದಾಖಲೆಯಲ್ಲಿ ಹೋಗಬಾರದು. ಅಂಥ ವಿಚಾರಗಳೆಲ್ಲಾ ದಾಖಲು ಆಗುತ್ತವೆ. These are all evidences for tomorrow to take, to provoke, to divide. ಇವತ್ತು

ಆಂಧ್ರದಲ್ಲಿ we have paid a heavy price. Brothers are fighting with each other. Similar situation should not come to Karnataka. Therefore, we should be united on issues and on development. We are one in language. ಅದಕ್ಕೋಸ್ಕರ ನಮ್ಮ ನಾಡು, ನಮ್ಮ ಗಡಿ, ನಮ್ಮ ಭಾಷೆ, ನಮ್ಮ ಸಂಪತ್ತಿಗೋಸ್ಕರ ನಾವೆಲ್ಲರೂ ಒಂದಾಗಬೇಕೆಂದು ಒತ್ತಾಯ ಮಾಡುತ್ತೇನೆ. ಸಮಾಜ ಕಲ್ಯಾಣ ಇಲಾಖೆಯಲ್ಲಿ ಹದಿನೈದು ಸಾವಿರ ಕೋಟಿ ಹಣ ಇದೆ ಎನ್ನುವಂಥ ಮಾತನ್ನು ಇಲ್ಲಿ ಹೇಳುತ್ತಿದ್ದಾರೆ. ಈ ಹಣವನ್ನು ರಸ್ತೆ ಮಾಡುವುದಕ್ಕೋ, ಬಿಲ್ ಮಾಡಿಕೊಳ್ಳುವುದಕ್ಕೋ ಅಥವಾ ಮಣ್ಣು ಹಾಕುವುದಕ್ಕೋ ಉಪಯೋಗಿಸಲಾಗುತ್ತಿದೆಯೇ? I agree, ನಾವು ಕಾಯಿದೆ ತಂದಿದ್ದೇವೆ ಇಲ್ಲವೆಂದಲ್ಲ. ಈ ಹಣವನ್ನು ನಾವು ಯಾವ scientific groundನಲ್ಲಿ, progressive wayನಲ್ಲಿ, technical wayನಲ್ಲಿ ಖರ್ಚು ಮಾಡಬೇಕು. ಈ ಜನರ ಆಸೆ ಏನು, ಬೇಡಿಕೆ ಏನು, ಅಂತರಾಳ ಏನು, ಈ ಜನ ಏನನ್ನು ಬಯಸುತ್ತಿದ್ದಾರೆ? ನಮ್ಮ ಕೇರಿಗಳಲ್ಲಿ ರಸ್ತೆ ಮಾಡಿ ನಡೆದುಕೊಳ್ಳಬೇಕೆಂದು ಅಲ್ಲ. ನಮ್ಮ ಹಸಿದ ಹೊಟ್ಟೆಗೆ ಅನ್ನ ಕೊಡಿ, ನಮಗೆ ಉದ್ಯೋಗ ಕೊಡಿ, ನಮಗೆ ಮನೆ ಕಟ್ಟಿಕೊಡಿ, ನಮಗೆ ಸೂರು ಕೊಡಿ, ಮುಖ್ಯವಾಗಿ, ವಿದ್ಯಾಭ್ಯಾಸ ಕೊಡಿ ಎಂದು ಕೇಳುತ್ತಿದ್ದಾರೆ. ವಿದ್ಯಾಭ್ಯಾಸ ಎಂದರೆ ಯಾವುದು? 1 ರಿಂದ 10 ತರಗತಿಯವರೆಗೆ ಕ್ಲಾಸ್ ಕೊಟ್ಟು, ವಿದ್ಯಾಭ್ಯಾಸ ಮಾಡಿದ್ದೇವೆ ಎಂದು Primary School ಮಾಡಿದರೆ ಅಲ್ಲ. ವಿದ್ಯಾಭ್ಯಾಸದ ಪೈಪೋಟಿಯಲ್ಲಿ ಜಗತ್ತು ಹೇಗೆ ಓಡುತ್ತಿದೆ? Technical education, training education, ನಮಗೆ ದೊಡ್ಡ ದೊಡ್ಡದ್ದನ್ನು ಕೊಡಬೇಕೆಂದು ಅಲ್ಲ. ಈ ವರ್ಗದಲ್ಲಿ ಬರುವಂಥ ಹೆಣ್ಣುಮಕ್ಕಳಿಗೆ 9–10ನೇ ತರಗತಿ ಆದ ನಂತರ they are all dropouts. ಆ ಹೆಣ್ಣು ಮಕ್ಕಳು ಸಂಸಾರವನ್ನು ಸಾಕುವುದಕ್ಕೆ ಆಗುವುದಿಲ್ಲ. They will commit suicide. ಸಾಲ ಮಾಡಿ, ಇವತ್ತು ನೋಡಿ ಯಾವ ಪ್ರಮಾಣದಲ್ಲಿ ಯಾವ ಭಾಗದ ಜನ ಯಾವ ಹೆಣ್ಣುಮಕ್ಕಳು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ? ಇದನ್ನು ತಡೆಗಟ್ಟಬೇಕು. ಭ್ರೂಣ ಹತ್ಯೆ ಆಗುತ್ತಿದೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ (ಮಡಿಕೇರಿ):- ಮಾನ್ಯ ಉಪಾಧ್ಯಕ್ಷರೆ, ಒಂದು ನಿಮಿಷ. ಮಾನ್ಯ ಶಿವಮೂರ್ತಿಯವರೆ, ಸಮಾಜ ಕಲ್ಯಾಣ ಇಲಾಖೆಯಲ್ಲಿ ತಾವು 15 ಸಾವಿರ ಕೋಟಿ ರೂ.ಗಳು ಬಾಕಿ ಇದೆ ಎಂದು ಹೇಳುತ್ತೀರಿ. ನಮ್ಮ ಕೊಡಗು ಜಿಲ್ಲೆಯಲ್ಲಿ ಹಲವಾರು ವರ್ಷಗಳಿಂದ ಮನೆಗಳನ್ನು ಕಟ್ಟುವುದಕ್ಕೆ ಆಗಲಿಲ್ಲ. ಕೊಡುವಂಥ ಹಣ ಎಷ್ಟು? ಎಂದರೆ, ಕೇವಲ, 1,70,000. ಅದನ್ನು atleast 3 ಲಕ್ಷ ರೂ.ಗಳು ಎಂದು ಮಾಡಿದರೆ ದಲಿತರಿಗೆ, ಬಡವರಿಗೆ ಮನೆ ಆಗುತ್ತದೆ. ಅದನ್ನು changes ಮಾಡುವಂಥ ವ್ಯವಸ್ಥೆ ಮಾಡಿಸಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಮೇಲುಕೋಟೆ):- ಮಾನ್ಯ ಉಪಾಧ್ಯಕ್ಷರೆ, 15,000 ಕೋಟಿ ಹಣ ಸಂಗ್ರಹಣೆ ಮಾಡಿದ್ದೀರಿ. ಅಸ್ಪೃಶ್ಯತೆ, ಆರ್ಥಿಕ ಅಸಮಾನತೆಯನ್ನು ಸರಿ ಮಾಡುವುದಕ್ಕೆ ಬಹಳ ದೊಡ್ಡ ಕೊಡುಗೆ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಇದು ಬಹಳ ಸಂತೋಷ. ಆದರೆ, ಜಾತಿಯ ಕ್ರೌರ್ಯದ ಸಮಾಜ ನಾಶವಾಗಬೇಕಾದರೆ ಕನಿಷ್ಟ ಆರ್ಥಿಕ ಸಮಾನತೆ ಸೃಷ್ಟಿ ಆದರೆ ಮಾತ್ರ ಜಾತಿ ಸಮಸ್ಯೆ ಕಡಿಮೆ ಆಗುವುದಕ್ಕೆ ಸಾಧ್ಯ. ಅದಕ್ಕೆ ಬೇಕಾಗಿರತಕ್ಕಂಥದ್ದು ಉದ್ಯೋಗ ಮತ್ತು ಸಾಲದ ನೀತಿ. ಒಂದು ಕುಟುಂಬ ಸಂಪೂರ್ಣವಾಗಿ ಆರ್ಥಿಕವಾಗಿ ಮೇಲಕ್ಕೆ ಬರಬೇಕಾದರೆ ಒಂದು ಪ್ಯಾಕೇಜ್ ಲೋನ್ declare ಆಗಬೇಕು. ಸುಮ್ಮನೆ ತಾತ್ಕಾಲಿಕವಾಗಿ ಮನೆ ಕೊಟ್ಟು, ರಸ್ತೆ ಮಾಡಿದರೂ, ಒಂದು ಕುಟುಂಬ ಆರ್ಥಿಕವಾಗಿ ಮೇಲಕ್ಕೆ ಬಂದರೆ ಅಸ್ಪೃಶ್ಯತೆಯು ಕಡಿಮೆ ಆಗುತ್ತದೆ. ಆ ದಿಕ್ಕಿನಲ್ಲಿ ಆರ್ಥಿಕ ನೀತಿ ಆದರೆ ಮಾತ್ರ 15,000 ಕೋಟಿ ಹಣ ಆರೋಗ್ಯಕರವಾಗಿ ಬೆಳೆಯುವುದಕ್ಕೆ ಸಾಧ್ಯ.

ಶ್ರೀ ಕೆ. ಶಿವಮೂರ್ತಿ:- ಮಾನ್ಯ ಪುಟ್ಟಣ್ಣಯ್ಯನವರು ಪ್ರಾಯೋಗಿಕವಾಗಿರತಕ್ಕಂಥ ಸಾಕಷ್ಟು ಸಲಹೆಗಳನ್ನು ಕೊಡುತ್ತಿದ್ದಾರೆ. ಹೆಣ್ಣು ಜನ್ಮದಾತೆ. ಹೆಣ್ಣು ಸೃಷ್ಟಿಕರ್ತೆ. ಹೆಣ್ಣನ್ನು ನಾವು ಯಾವ ರೀತಿ ನಡೆಸಿಕೊಳ್ಳುತ್ತಿದ್ದೇವೆ? ಯಾವ ರೀತಿ ಸೃಷ್ಟಿ ಆಗುತ್ತಿದೆ? ಹೆಣ್ಣಿನ ಮೇಲೆ ದೌರ್ಜನ್ಯ ಆಗುತ್ತಿದೆ, ಅತ್ಯಾಚಾರ ಆಗುತ್ತಿದೆ, ಹೆಣ್ಣು ಶೋಷಣೆಗೆ ಒಳಗಾಗುತ್ತಿದ್ದಾರೆ. ಇವತ್ತಿನ ದಿವಸ ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸ ಸೌಲಭ್ಯ

ಸಿಗುತ್ತಿಲ್ಲ. ಶೇಕಡ 50 ಭಾಗದಷ್ಟು ಹೆಣ್ಣು ಮತ್ತು ಗಂಡು ಇದ್ದರೂ ಸಹ this is a balanced society. Otherwise it is an imbalanced society. ಆಗ ಕ್ರೌರ್ಯ, ಅತ್ಯಾಚಾರ, ಅನಾಚಾರ, ದೌರ್ಜನ್ಯ ಪ್ರಾರಂಭ ಆಗುತ್ತದೆ. The gender justice ಆಗಬೇಕು ಎಂದರೆ, ಭ್ರೂಣಹತ್ಯೆಯನ್ನು ತಡೆಗಟ್ಟಬೇಕು. ಭ್ರೂಣಹತ್ಯೆಯನ್ನು ತಡೆಗಟ್ಟಬೇಕಾದರೆ ಗಂಡು ಮಕ್ಕಳ ಜವಾಬ್ದಾರಿ ಜಾಸ್ತಿಯಾಗುತ್ತದೆ. ಇವತ್ತಿನ ದಿವಸ ಯಾವ ಹೆಣ್ಣು ಮಗುವನ್ನು ನಾವು ಸಾಕುವುದಕ್ಕೆ ಆಗುವುದಿಲ್ಲ, ಅವರು ನಮ್ಮ ಜೊತೆ ಇದ್ದರೆ ನಮಗೆ ಹೊರೆ ಎನ್ನತಕ್ಕಂಥ ಭಾವನೆ ಇದೆಯಲ್ಲಾ ಅದನ್ನು ತಡೆಗಟ್ಟಬೇಕಾದರೆ ಗಂಡು ಅದನ್ನು ಸವಾಲ್ ಆಗಿ ಸ್ವೀಕರಿಸಬೇಕು. ಗಂಡು ನನಗೆ ಹೆಣ್ಣು ಬೇಕು ಎನ್ನತಕ್ಕಂಥ ಮನೋಭೂಮಿಕೆಯನ್ನು ನೀಡಬೇಕು. ಇವತ್ತು ಭ್ರೂಣಹತ್ಯೆ ಏಕೆ ಆಗುತ್ತಿದೆ? This is a challenge to our society. ಆದ್ದರಿಂದ, ಸೆನ್ಸ್‌ಸ್ ಪ್ರಕಾರ, 96% ಹೆಣ್ಣು ಮಕ್ಕಳಿದ್ದಾರೆ. 100% ಗಂಡು ಮಕ್ಕಳಿದ್ದಾರೆ. ಕೇವಲ 4% ವ್ಯತ್ಯಾಸ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- . . . ₹ 50,000 ಬೋನಸ್ ಕೊಡುತ್ತೇವೆಂದು declare ಮಾಡಿ ಸಿಕ್ಕಾಪಟ್ಟೆ ಹೆಣ್ಣುಮಕ್ಕಳು ಹುಟ್ಟುವುದಕ್ಕೆ ಪ್ರಾರಂಭ ಆಗುತ್ತದೆ.

ಶ್ರೀ ಕೆ. ಶಿವಮೂರ್ತಿ:- ಮಾನ್ಯ ಉಪಾಧ್ಯಕ್ಷರೆ, This is a balanced society now. Imbalance ಆದರೆ ಅದರ ಅನಾಹುತ ಏನಾಗಬಹುದೆಂಬುದನ್ನು ನಾವು ಅನುಭವಿಸುತ್ತಿದ್ದೇವೆ. ಹೆಣ್ಣುಮಕ್ಕಳು ಪರಿವರ್ತನೆಯ ಪ್ರತೀಕ. ಹೆಣ್ಣು household management head. ಗಂಡು ಮಕ್ಕಳು ಏನೇ ಮಾಡಿದರೂ ಆಗುತ್ತದೆ. ಸಂಸಾರ ನಡೆಸತಕ್ಕಂಥವಳೇ ಹೆಣ್ಣು. ಜವಾಬ್ದಾರಿಯನ್ನು ಹೊರತಕ್ಕಂಥವಳೇ ಹೆಣ್ಣು. ಸಂಸಾರವನ್ನು ದೂಗಿಸುವುದು ಹೆಣ್ಣು. ಮಾನ-ಮರ್ಯಾದೆ ಉಳಿಸತಕ್ಕಂಥವಳು ಹೆಣ್ಣು. ಸಮಗ್ರ ಸಂಸಾರದಲ್ಲಿ ಮಕ್ಕಳ ಪೋಷಣೆ ಆಗಬೇಕು, ಮಕ್ಕಳು ಓದಬೇಕು, ಆರೋಗ್ಯಕರವಾಗಿರುವಂಥ ಸಂಸಾರ ಆಗಬೇಕು, ಆರೋಗ್ಯಕರವಾದಂಥ ಸಮಾಜ ಇರಬೇಕೆಂದರೆ ಹೆಣ್ಣು ಮುಖ್ಯ. ಅದಕ್ಕೋಸ್ಕರ ಹೆಣ್ಣಿನ ನಾಯಕತ್ವಕ್ಕೆ

ಈ ರಾಷ್ಟ್ರ, ಈ ಧರ್ಮ, ಈ ದೇಶ ಬಹಳ ಮರ್ಯಾದೆಯನ್ನು ನೀಡುತ್ತಾ ಬಂದಿದೆ. ಮೇಲಗಡೆ ಏನೇ ಮಾತನಾಡಿದ್ದರೂ ಸಹ ಹೆಣ್ಣಿನ ಬಗ್ಗೆ ನಮಗೆ ಪವಿತ್ರ ಭಾವನೆ ಇದೆ. ಆದರೆ, practicality ಭ್ರೂಣಹತ್ಯೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ (ಶ್ರೀನಿವಾಸಪುರ):- ಮಾನ್ಯ ಉಪಾಧ್ಯಕ್ಷರೆ, ಇದಕ್ಕೆ ಬಹಳ ದೊಡ್ಡ ಇತಿಹಾಸ ಇದೆ. Evolution process ನಲ್ಲಿ ಮನುಷ್ಯ ಗುಹೆಗಳಲ್ಲಿ ವಾಸ ಮಾಡುತ್ತಿದ್ದ ಸನ್ನಿವೇಶದಲ್ಲಿ ಅಲ್ಲಿಂದ ಪ್ರಾರಂಭ ಮಾಡಿಕೊಂಡು Rahul Sankrityayan ಎಂದು ಆತ ಬಹಳ ದೊಡ್ಡ ಸಂಶೋಧಕ. ಆತನಿಗೆ 'ಆಡು ಮುಟ್ಟದ ಸೊಪ್ಪಿಲ್ಲ, Rahul Sankrityayan ನಿಗೆ ತಿಳಿಯದ ವಿಷಯವಿಲ್ಲ' ಎಂದು title ಇತ್ತು. ಆತ 'Volga to Ganga' ಎನ್ನುವ ಒಂದು ಪುಸ್ತಕವನ್ನು ಬರೆದಿದ್ದಾನೆ. He describes ಹೇಗೆ women was the most prime character in running the life ಎಂದು. ಅದು ಆದ ಮೇಲೆ 'Lokayata' ಎನ್ನುವಂಥ ಒಂದು document ದೇವಿ ಪ್ರಸಾದ್ ಚಟ್ಟೋಪಾಧ್ಯಯ, he is the unquestioned authentic authority on Indian philosophy. ತುಳಸಿ ಪೂಜೆ ಪ್ರಾರಂಭ ಹೇಗೆ ಆಯಿತು? ನಾವು ತುಳಸಿಯನ್ನೇ ಏಕೆ ಪೂಜೆ ಮಾಡುತ್ತೇವೆ? ಎನ್ನುವುದನ್ನು ಹೇಳುತ್ತಾ, ಕೃಷಿ ಎನ್ನುವುದು ಹೆಣ್ಣು ಮಗಳಿಂದ ಹೇಗೆ ಪ್ರಾರಂಭ ಆಯಿತು? ಈ ಸಮಾಜದ ನಾಗರೀಕತೆ ಅವಳಲ್ಲಿ ಹೇಗೆ ಪ್ರಾರಂಭ ಆಯಿತು? ಎಂದು, matriarchal system ಏನಿತ್ತು ಅದನ್ನು gradual ಆಗಿ ಹೋಗುತ್ತಾ, ಈಗ ಬಂದಿರುವ ಸಮಸ್ಯೆ it is man made. ನಾವು thirsty ಆಗಿಬಿಟ್ಟು un-imaginative ಆಗಿ ಇವೆಲ್ಲಾ ಮಾಡುತ್ತಿದ್ದೇವೆ. Matriarchal system ನಿಂದ gradually ನಾವು we have taken over. ಇದು ಪುರುಷ ಪ್ರಧಾನ ಸಮಾಜ ಆಗಿದೆ. ನಾವು ಲಿಂಗ ಬೇದವನ್ನು ಮರೆತು ವೈಜ್ಞಾನಿಕವಾಗಿ ಇದನ್ನು ಆಲೋಚನೆ ಮಾಡಬೇಕಾಗುತ್ತದೆ. ಆದ್ದರಿಂದ, ಆ context ನಿಂದ ಮಾತನಾಡಬೇಕಾಯಿತು. I think Sri,Puttanaiah will agree with me. ನಮ್ಮಲ್ಲಿ ಮೊದಲಿಗೆ ಈ ವರದಕ್ಷಿಣೆ ಇರಲಿಲ್ಲ. ನಮ್ಮಲ್ಲಿ ಪದ್ಧತಿ ಇದ್ದದ್ದು ಕನ್ಯಾ ಶುಲ್ಕ. ಅದಕ್ಕೆ ಕನ್ಯಾದಾನ ಎಂದು ಕರೆಯುವುದು. ಕನ್ಯಾದಾನ ಎಂದರೆ, ನಾವು ಹೊತ್ತು,

ಹೆತ್ತು ಬೆಳಸಿದಂಥ ಹೆಣ್ಣು ಮಗುವನ್ನು ನಿನ್ನ ವಂಶ ಉದ್ಧಾರ ಆಗುವುದಕ್ಕೆ ಕೊಡುತ್ತಿದ್ದೇವೆಂದು ಹೇಳಿದಾಗ, ಅವನು ಧನ್ಯತಾ ಭಾವನೆಯಿಂದ ಸ್ವೀಕರಿಸಬೇಕು. ಈಗ cash settle ಮಾಡುತ್ತಾರೆ. ಎಷ್ಟು ಎಂದು ಕೇಳುತ್ತಾರೆ?

ಗೂಳಿ, ಎತ್ತಿನ ವ್ಯಾಪಾರ ಮಾಡುತ್ತೇವೆಯಲ್ಲ ಆ ರೀತಿಯಾಗಿದೆ. ಮನುಷ್ಯನ ನಾಗರೀಕತೆ 1 ಕೋಟಿ, 2 ಕೋಟಿ ರೂಪಾಯಿಗಳ donation ಕೊಟ್ಟು MBBS, MD ಮಾಡಿ, 10 ಕೋಟಿ ರೂಪಾಯಿಗಳಷ್ಟು ವರದಕ್ಷಿಣೆ ತೆಗೆದುಕೊಂಡರೆ ನಾವು ಒಳ್ಳೆಯ ನಾಗರೀಕರಾಗಿದ್ದೇವೆ ಎಂದು ನಾವು ತಿಳಿದುಕೊಂಡಿದ್ದೇವೆ. ಅವರು ಆ ಕಾಲದಲ್ಲಿ ಕನ್ಯಾದಾನ ಮಾಡಿದರೆ ಅವರು ಬುದ್ಧವಂತರು ಅಲ್ಲ ಎಂದು ನಾವು ಹೇಳಿದ್ದು. See, there is a ನಾವು ಯಾವಾಗ ಹಣಕ್ಕೆ ಪ್ರಾಧಾನ್ಯತೆಯನ್ನು ಕೊಡುತ್ತೇವೆಯೋ ಆಗ ಅದು ನಮ್ಮ ಸಂಸ್ಕೃತಿಯನ್ನು ಕೊಲ್ಲುತ್ತದೆ. ಕೆಲವರು ಹೇಳುತ್ತಾರೆ, ಸಂಸ್ಕೃತಿ ಎಂದರೆ ಜುಟ್ಟು ಬಿಟ್ಟುಕೊಂಡು ನಾಮ ಇಟ್ಟುಕೊಂಡು ಕೇಸರಿ ಬಾವುಟವನ್ನು ಹಿಡಿದುಕೊಂಡು ಕೂಗುವುದಲ್ಲ. ಸಂಸ್ಕೃತಿ ಎಂದರೆ ಈ ಭೂಮಿ ನಡೆದು ಬಂದದ್ದು ಹೇಗೆ, ಬದುಕು ಎಲ್ಲಿಂದ ಪ್ರಾರಂಭವಾಯಿತು, ಹೇಗೆ ಮೆಟ್ಟಿಲಿನಿಂದ ಮೆಟ್ಟಿಲಿಗೆ ಬದುಕು ಸಾಗಿದೆ that is important. ನಮ್ಮಲ್ಲಿ gradual ಆಗಿ, systematic ಆಗಿ we have made conscious efforts to kill our culture. ಹೆಣ್ಣನ್ನು ಸಮುದ್ರಕ್ಕೆ ಹೋಲಿಸುತ್ತೇವೆ, ಭೂಮಿಯನ್ನು ಹೆಣ್ಣಿಗೆ ಹೋಲಿಸುತ್ತೇವೆ. ಭೂತಾಯಿ ಎಂದು ಹೇಳುತ್ತೇವೆ. ಭೂ-ತಂದೆ ಎಂದು ಹೇಳುತ್ತೇವೆಯೇ, ಇಲ್ಲ. ಹೆಣ್ಣಿಗೆ ಭೂ ತಾಯಿ ಎನ್ನುವ ಹೆಸರು ಏಕೆ ಬಂದಿತು, ಹೆಣ್ಣು ಎಂದರೆ ಸಮುದ್ರ, ಭೂಮಿಗೆ ಸಮಾನವಾದವಳು. ಅವಳಿಗೆ ಅಷ್ಟೊಂದು ಸಹನೆ, ಕೃಪೆ, ದಯೆ, ಕರುಣೆ ಇರುತ್ತದೆ. ತಾಯ್ತನ ಎನ್ನುವುದು ಇದನ್ನೆಲ್ಲಾ ಉಡುಗೊರೆಯಾಗಿ ನೀಡುತ್ತದೆ. ನಾವು by force ಮಾಡಿ, ಈಗ ಅತ್ತೆಯರು ಸಹ ಸೊಸೆಯಂದಿರನ್ನು ಸುಡುವ ಕಾಲಕ್ಕೆ ನಾವು ಬಂದಿದ್ದೇವೆ. You should dwell upon that when you speak about women.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ದೃಶ್ಯ ಮಾಧ್ಯಮಗಳಲ್ಲಿ, ಟಿ.ವಿ.ಯಲ್ಲಿ ಹೆಣ್ಣುಮಕ್ಕಳನ್ನು ಎಷ್ಟು ಅಗೌರವಯುತವಾಗಿ ತೋರಿಸುತ್ತಾರೆಂದರೆ ಅತ್ತೆ-

ಸೊಸೆ ಯಾವತ್ತಿಗೂ ಒಂದಾಗುವುದಿಲ್ಲವೇನೋ, ವಾರೋರುಗಿತ್ತಿಯರಲ್ಲಿ ಕಚ್ಚಾಟ ಇದ್ದೇ ಇರಲೇಬೇಕೇನೋ, ಹೆಣ್ಣನ್ನು ಯಾವ ಮಟ್ಟಿಗೆ ದೃಶ್ಯ ಮಾಧ್ಯಮಗಳಲ್ಲಿ, ಟಿ.ವಿ. ಸೀರಿಯಲ್‌ಗಳಲ್ಲಿ ತೋರಿಸುತ್ತಾರೆಂದರೆ ಅದನ್ನು ಹೇಳುವುದಕ್ಕೆ ಹಾಸ್ಯಾಸ್ಪದವಾಗುತ್ತದೆ. ಅವರ ಮೇಲೆ ಯಾವ ನಿಯಂತ್ರಣವೂ ಇಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್:- Lady villains ಗಳನ್ನು ತೋರಿಸುವುದಕ್ಕೆ ಪ್ರಾರಂಭ ಮಾಡಿದ್ದಾರೆ. Marketing has come to that level, ಆ producersಗೆ directorsಗೆ, ಅದನ್ನು exhibit ಮಾಡಿದಂಥವರಿಗೆಲ್ಲಾ compliment ಮಾಡಬೇಕು. ನಮ್ಮ ಸಂಸ್ಕೃತಿಯನ್ನು ಕಾಪಾಡಿದ್ದಕ್ಕೆ ಈ ಸದನವೆಲ್ಲಾ ಎರಡೂ ಕೈ ಎತ್ತಿ ನಮಸ್ಕಾರ ಮಾಡಬೇಕು. ಬಹಳ ಕಷ್ಟಪಡುತ್ತಿದ್ದೀರಪ್ಪಾ, ನಿಮ್ಮ tribe ಇನ್ನೂ ಮುಂದುವರೆಯಲಿ ಎಂದು ಹೇಳಬೇಕು.

ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್:- ಮಾನ್ಯ ಉಪಾಧ್ಯಕ್ಷರೆ, ಬದಲಾಗುತ್ತಾ ಬದಲಾಗುತ್ತಾ ಯಾವ ಕಾಲಕ್ಕೆ ನಾವು ಬಂದು ಮುಟ್ಟಿದ್ದೇವೆಂದರೆ ಒಂದು ಕಾಲಕ್ಕೆ ಹೆಣ್ಣೆತ್ತವರು ಬಹಳ ಕಷ್ಟದಲ್ಲಿದ್ದರು ಎಂದು ಹೇಳುತ್ತಿದ್ದೆವು. ಇವತ್ತು ನಮ್ಮ ಸಮುದಾಯಗಳಲ್ಲೆಲ್ಲಾ 4 ಹೆಣ್ಣು ಮಕ್ಕಳಿದ್ದಾರೆ ಕಾದುಕೊಳ್ಳುವುದಕ್ಕೆ ಆ ತಂದೆ ತಾಯಿಗೆ ಇವತ್ತು protection ಕೊಡಬೇಕು. ಒಂದು ಹೆಣ್ಣನ್ನು ಮದುವೆ ಮಾಡಿಕೊಂಡು ಹೋಗಬೇಕಾದರೆ ಗಂಡು 5 ಲಕ್ಷ ರೂಪಾಯಿಗಳನ್ನು ಕೊಡಬೇಕು. ಆ ಕಾಲಕ್ಕೆ ಇವತ್ತು ನಾವು ಬಂದು ತಲುಪಿದ್ದೇವೆ. ಹಾಗಾಗಿ ಹೆಣ್ಣಿಗೆ ಹೆಚ್ಚು ಮಹತ್ವ ಬಂದಿದೆ.

ಉಪಾಧ್ಯಕ್ಷರು:- ಶಿವಮೂರ್ತಿಯವರೆ ನೀವು conclude ಮಾಡಿ.

ಶ್ರೀ ಬಿ.ಬಿ. ನಿಂಗಯ್ಯ:- ಮಾನ್ಯ ಉಪಾಧ್ಯಕ್ಷರೆ, ಬಹಳ ಪ್ರಮುಖವಾದ ವಿಚಾರ ಪ್ರಸ್ತಾಪವಾಗಿದೆ. ಹಿರಿಯರು ಮಾತನಾಡಿದ್ದಾರೆ. ಇದಕ್ಕೆ ನನಗನ್ನಿಸುವಂಥದ್ದು ಹಿರಿಯರ ಮುಂದೆ ಹೆಚ್ಚು ಹೇಳುವಂಥದ್ದು ಸರಿಯಲ್ಲ. ಆದರೆ, ಪುರುಷ ಪ್ರಧಾನವಾದ ನಮ್ಮ ಸಮಾಜದೊಳಗೆ ಎಲ್ಲೋ ಒಂದು

ಕಡೆಗೆ ಇದು ಮೊದಲಿನಿಂದಲೂ ಹೇರಿಕೆಯಾಗುತ್ತಿದೆ, ದೌರ್ಜನ್ಯ ಎಂದು ನನಗನಿಸುತ್ತದೆ. ಆ ದೃಷ್ಟಿಯಿಂದ ನಮ್ಮ ಪುರುಷ ಪ್ರಧಾನವಾದ ಮನಸ್ಸು ಕೂಡಾ ಬದಲಾಗಬೇಕಾಗುತ್ತದೆ. ಹೆಣ್ಣುಮಕ್ಕಳು ಇವತ್ತು ಯಾರೇ ಆಗಲಿ ಗಂಡ ಹೇಳುವುದನ್ನು ಕೇಳುವಂಥ ಪರಿಸ್ಥಿತಿಯಾಗಿದೆಯೇ ಹೊರತು ಅಥವಾ ನೀವು ಹೇಳಿದಂತೆ ಅತ್ತೆ ಮಾವ, ಕುಟುಂಬದ ವ್ಯವಸ್ಥೆಯೊಳಗೆ ಮೊದಲು ಅವಿಭಕ್ತ ಕುಟುಂಬವಿತ್ತು ಅದು ಬೇರೆ. ಈಗೆಲ್ಲಾ ವಿಭಕ್ತ ಕುಟುಂಬಗಳು. ಈ ವ್ಯವಸ್ಥೆಯೊಳಗೆ ನಮ್ಮ ಸ್ನೇಹಿತರು ಬಹಳ ಒಳ್ಳೆಯ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಹೆಣ್ಣನ್ನು ನಾವು ರಕ್ಷಣೆ ಮಾಡುವುದಕ್ಕಾಗಿ "Save Girl Child" ಎನ್ನುವಂಥ ಒಂದು ಆಂದೋಲನ ಪ್ರಾರಂಭವಾಗಿದೆ. ಅದಕ್ಕೆ ಪೂರಕವಾಗಿ ಈ ಮನೆಯಲ್ಲಿ ಇಂಥ ವಿಚಾರ ಪ್ರಸ್ತಾಪವಾಗಿದ್ದು, ವಿಸ್ತಾರವಾಗಿ ಚರ್ಚೆಯಾಗುವುದರ ಮೂಲಕ ಬೆಳಕನ್ನು ಚೆಲ್ಲಿ ಇದಕ್ಕೊಂದು ಪರಿಹಾರ ಕೊಡಬೇಕಾದಂಥ ಜವಾಬ್ದಾರಿ ಈ ಮನೆಗಿದೆ. ಆ ದೃಷ್ಟಿಯಿಂದ ಅತ್ಯುತ್ತಮವಾದ ವಿಚಾರವಿದು, ಹೆಚ್ಚು ಚರ್ಚೆಗೆ ಅವಕಾಶ ಕೊಡಿ. ಇಂಥ ಒಳ್ಳೆ ವಿಚಾರಗಳು ಚರ್ಚೆಯಾಗಲಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಮಾನ್ಯ ಉಪಾಧ್ಯಕ್ಷರೆ, ಮಹಿಳೆಯರ ಬಗ್ಗೆ ಬಹಳ ಗಂಭೀರವಾದ ಚರ್ಚೆಗಳು ನಡೆಯುವ ಸಂದರ್ಭದಲ್ಲಿ ಪಾಪ ಅಂಗನವಾಡಿ ಕಾರ್ಯಕರ್ತೆಯರು 9 ದಿವಸಗಳಿಂದ ಧರಣಿ ಸತ್ಯಾಗ್ರಹ ಹೂಡಿದ್ದಾರೆ.

ಉಪಾಧ್ಯಕ್ಷರು:- ಅದು ಬೇರೆ ವಿಚಾರ ಬಿಡಿ. ಅದನ್ನು ಈಗ ಪ್ರಸ್ತಾಪ ಮಾಡಬೇಡಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಮಾನ್ಯ ಉಪಾಧ್ಯಕ್ಷರೆ, ಬೇರೆ ವಿಚಾರವಲ್ಲ, ಅವರು ಮಹಿಳೆಯರಲ್ಲವೇ? ಅಲ್ಲಿರುವವರೆಲ್ಲಾ ಮಹಿಳೆಯರೇ, ಅವರ ಕಷ್ಟಕ್ಕೆ ನಾವು ಹೋಗದೇ ಇದ್ದರೆ ಅವರು ನಮ್ಮ ಮಕ್ಕಳನ್ನು ಪಾಲನೆ, ಪೋಷಣೆ ಮಾಡುತ್ತಾರೆ. ಇವತ್ತು ಅವರು 9 ದಿವಸಗಳ ಕಾಲ ಸುದೀರ್ಘವಾಗಿ ಎಲ್ಲಾ ತಾಲ್ಲೂಕು, ಜಿಲ್ಲಾ ಕಛೇರಿ ಮುಂದೆ ಹಗಲು ರಾತ್ರಿ

ಧರಣಿ ಸತ್ಯಾಗ್ರಹ ಮಾಡುತ್ತಿದ್ದಾರೆ. ಅವರ ಬಗ್ಗೆ ಸ್ವಲ್ಪನೂ ಕಾಳಜಿ ಇಲ್ಲವೇ? ಹಾಗಾದರೆ ಅವರನ್ನು ಏತಕ್ಕೋಸ್ಕರ ನೀವು ಧರಣಿ ಕುಳಿತಿದ್ದೀರಿ ಎಂದು ಕೇಳುವಷ್ಟು ಸೌಜನ್ಯತೆ ಸರ್ಕಾರಕ್ಕೆ ಇಲ್ಲದೇ ಹೋದರೆ ಬಹುಶಃ ಎಲ್ಲೋ ಒಂದು ಕಡೆ ನಾವು ಮಹಿಳೆಯರ ಬಗ್ಗೆ ದೊಡ್ಡ ದೊಡ್ಡ ಭಾಷಣ ಮಾಡಿ, ಅಲ್ಲಿ ನಡೆಯುತ್ತಿರುವಂಥದ್ದೇನು? ಅವರ ಸಾಧಕ ಏನು, ಬಾಧಕ ಏನು, ನಿಮ್ಮ ಕಷ್ಟ ಏನು, ನಿಮ್ಮ ಸುಖ ಏನು ಎಂದು ಕೇಳುವ ಸೌಜನ್ಯವಿಲ್ಲವೆ?

ಶ್ರೀ ಮಾಲೀಕಯ್ಯ ವೆಂಕಯ್ಯ ಗುತ್ತೇದಾರ್:- ಮಾನ್ಯ ಉಪಾಧ್ಯಕ್ಷರೆ, ಇದು ಬಹಳ ಗಂಭೀರವಾದಂಥ ವಿಚಾರ. Minister ಸಹ ಮೊನ್ನೆ ಹೋಗಿ ಬಂದಿದ್ದಾರೆ. ಅವರು ಏನು statement ಮಾಡಿದ್ದಾರೆಂದರೆ ಖಾಸಗೀಕರಣ ಮಾಡುವುದಕ್ಕೆ ಹೊರಟಿದ್ದಾರೆ. ಅವರ ಪರಿಸ್ಥಿತಿ ಬಹಳ ಗಂಭೀರವಾಗಿದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಬಹಳ ಗಂಭೀರವಾಗಿದೆ. ಇದರ ಬಗ್ಗೆ ಚರ್ಚೆಯಾಗಬೇಕಾಗಿದೆ.

(ಗೊಂದಲ)

ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್:- ಹಗಲು ರಾತ್ರಿ ಹೆಣ್ಣುಮಕ್ಕಳು ಧರಣಿ ಮಾಡುತ್ತಿದ್ದಾರೆ.

ಉಪಾಧ್ಯಕ್ಷರು:- ಸಂಬಂಧಪಟ್ಟ ಮಂತ್ರಿಗಳನ್ನು ಕರೆಸಿ ಒಂದು statement ಮಾಡಿಸೋಣ.

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಮಂತ್ರಿಗಳಿಂದ ದಯಮಾಡಿ ಒಂದು statement ಮಾಡಿಸಿ. 9 ದಿವಸಗಳಿಂದ ಸತತವಾಗಿ ಮಹಿಳೆಯರು ಬೀದಿಯಲ್ಲಿ ತಾಲ್ಲೂಕು ಆಫೀಸ್ ಮುಂದೆ ಮಲಗಿದ್ದಾರೆಂದರೆ ಇದರ ಅರ್ಥ ಏನಿದು?

(ಗೊಂದಲ)

ಉಪಾಧ್ಯಕ್ಷರು:- ಮಂತ್ರಿಗಳನ್ನು ಕರೆಸಿ statement ಮಾಡಿಸೋಣ.

ಶ್ರೀ ಬಿ.ಬಿ. ನಿಂಗಯ್ಯ:– 16 ಬೇಡಿಕೆಗಳನ್ನಿಟ್ಟು ಹೋರಾಟ ಮಾಡುತ್ತಿದ್ದಾರೆ. ಮಾನ್ಯ ಸಚಿವರನ್ನು ಕರೆಸಿ, ಮುಖ್ಯಮಂತ್ರಿಗಳು ಸಹ ಇಲ್ಲಿ ಇರಬೇಕಾಗುತ್ತದೆ. ಅವರ ಕಷ್ಟಕ್ಕೆ ಸರ್ಕಾರ ಮುಂದಾಗಬೇಕು. ಅವರ ಕಷ್ಟವನ್ನು ಕೇಳಬೇಕು.

ಶ್ರೀ ಎನ್.ಹೆಚ್. ಕೋನರೆಡ್ಡಿ:– ಧರಣಿ ನಿರತರಾಗಿರುವ ಹೆಣ್ಣುಮಕ್ಕಳನ್ನು ಯಾರು ಕೇಳುವವರು ಇಲ್ಲ, ಹೇಳುವವರು ಇಲ್ಲ.

ಉಪಾಧ್ಯಕ್ಷರು:– ಶಿವಮೂರ್ತಿಯವರೆ ನೀವು conclude ಮಾಡಿ.

ಶ್ರೀ ಕೆ. ಶಿವಮೂರ್ತಿ:– ದ್ವಾಪರ ಯುಗದಲ್ಲಿ ಶ್ರೀ ಕೃಷ್ಣ ಪರಮಾತ್ಮನಿಗೆ ಸಾವಿರಾರು ಜನ ಹೆಂಡತಿಯರು ಇದ್ದರು. ದ್ರೌಪದಿಗೆ ಶೀಲಾಭರಣ, ಇತಿಹಾಸವಿದು.

ಉಪಾಧ್ಯಕ್ಷರು:– ನೀವು conclude ಮಾಡಿ. ಇರಲಿ, ನೀವು ಚೆನ್ನಾಗಿ ಮಾತನಾಡುತ್ತಿದ್ದೀರಿ. ಬೇರೆಯವರೂ ಸಹ ಮಾತನಾಡಬೇಕು.

ಶ್ರೀ ಕೆ. ಶಿವಮೂರ್ತಿ:– ರಾಜ ಮಹಾರಾಜರುಗಳಿಗೆ ಸಾವಿರಾರು ಜನ ಹೆಂಡತಿಯರು, ದೇವದಾಸಿ ಪದ್ಧತಿ, ಹೆಣ್ಣು ಮಕ್ಕಳ ಶಿಶು ಹತ್ಯೆ, ಬೆಂಗಾಲ್‌ನಲ್ಲಿ ರಾಜಾರಾಮ್ ಮೋಹನ್‌ರಾಯ್, ಇತಿಹಾಸ ಎಲ್ಲವನ್ನು ಹೇಳುತ್ತದೆ. ಕೆಲವು ಮನುವಾದಿಗಳು ಈ ಸಮಾಜವನ್ನು ಪರಿವರ್ತನೆ ಮಾಡುವುದಕ್ಕೆ ಬಿಡಲಿಲ್ಲ. ಹೆಣ್ಣುಮಕ್ಕಳು ಹೊಸಲು ದಾಟಬಾರದು, ಹೊಸಲಿನೊಳಗೆ ಇರಬೇಕು. ಸೇವೆ ಮಾಡಿಕೊಂಡು ಇರಬೇಕೆಂದು ಹೇಳುತ್ತಾರೆ. ನಾನು ಈ ಸದನದ ಮೂಲಕ ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ, ನೋಡಿ ಸದನ ಚಿಂತನೆ ಮಾಡಲಿ. ಶಿಕ್ಷಣ ಮತ್ತು ವೈದ್ಯಕೀಯ/ ಆರೋಗ್ಯ ಸೇವೆ ಇಲಾಖೆ ಈ ಎರಡೂ ಇಲಾಖೆಗಳನ್ನು ಹೆಣ್ಣುಮಕ್ಕಳಿಗೆ ಕೊಟ್ಟುಬಿಡಿ. You just see the wonder, they train the students, they train the child, ಯಾವ ರೀತಿ ಶಿಕ್ಷಣ ಕೊಡುತ್ತಾರೆಂದು see the difference between the boy and the girl. ಒಬ್ಬ ಗಂಡು ಮಗ ಹೇಗೆ ಪಾಠ ಮಾಡುತ್ತಾನೆ. ಹೆಣ್ಣು ಮಗಳು ಹೇಗೆ ಪಾಠ ಹೇಳುತ್ತಾಳೆಂದು ತಿಳಿಯುತ್ತದೆ. ಅವಳ ಕಂಠಸಿರಿ, ಮಾತನಾಡುವಂಥ ಮೃದು ಭಾವನೆ, ಒಬ್ಬ

ತಾಯಿ ಶಿವಾಜಿ ಮಹಾರಾಜನನ್ನೇ ತಯಾರು ಮಾಡಿದಳು. ಆದ್ದರಿಂದ a good trainer educationist are women folk. ಆದರೆ ಇಡೀ ಶಿಕ್ಷಣ ಇಲಾಖೆ ವ್ಯವಸ್ಥೆ ಪರಿವರ್ತನೆಯಾಗಬೇಕಾದರೆ, ಆ ಮಾತೃದೇವಿ, ಈ ಭೂಮಿ ಪರಿಪಕ್ವವಾಗಬೇಕಾದರೆ ಹೆಣ್ಣಿಗೆ ಈ ಇಲಾಖೆಗಳನ್ನು ಕೊಟ್ಟುಬಿಡಿ. ಹೆಣ್ಣುಮಕ್ಕಳಿಗೆ ಪೂರ್ತಿಯಾಗಿ ಶಿಕ್ಷಣ ವ್ಯವಸ್ಥೆಯನ್ನು ಅವಳಿಗೆ handover ಮಾಡಬೇಕೆನ್ನುವ ನನ್ನ ವೈಯಕ್ತಿಕ ಚಿಂತನೆ ಅದರ ಜೊತೆಗೆ ಶುಶ್ರೂಷೆ ಮಾಡುವಂಥವರು, ಆತಿಥ್ಯ ಮಾಡುವಂಥವರು, ತಂದೆ ಆಚೆಯಿಂದ ಮನೆಗೆ ಬಂದರೆ ಆತಿಥ್ಯ ಮಾಡುವವಳು ಮಗಳು. ಎಷ್ಟು ಅಪಾರವಾದ ಪ್ರೀತಿ ತೋರಿಸುತ್ತಾರೆ. ಏನೇ ಸಾಮಾಜಿಕ ಕಾರ್ಯವಿರಲಿ, ಮನೆ ಕಾರ್ಯವಿರಲಿ ಬಂಧು ಬಳಗದವರಿಗೆ ಪ್ರೀತಿ ತೋರಿ ಆತಿಥ್ಯ ಮಾಡುವಂಥ ಹೆಣ್ಣು ಒಂದು ಸಂಪತ್ತು ನಿಜವೇ ಸರಿ. ಆದ್ದರಿಂದ ಶುಶ್ರೂಷೆ ಮಾಡುವಂಥ ಇಲಾಖೆಯನ್ನು ಸಹ ಹೆಣ್ಣಿಗೆ ಕೊಡಿ ಎಂದು ಹೇಳುತ್ತಿದ್ದೇನೆ. ಇವೆಲ್ಲವೂ ಒಂದು ಕ್ರಾಂತಿಕಾರಿ ಹೆಜ್ಜೆಗಳು. ಆದ್ದರಿಂದ ಹೆಣ್ಣನ್ನು ನಾವು ಹಂತ ಹಂತವಾಗಿ ಭ್ರೂಣದಲ್ಲಿ ಗರ್ಭಕೋಶದಲ್ಲಿ ಕೊಂದು ಹಾಕುವಂಥ ಕೆಲಸವೇನಿದೆ ಇದೊಂದು ಶಾಪ, ದೊಡ್ಡ ವಿಪರ್ಯಾಸ. It's a challenge. ಆದ್ದರಿಂದ ಇದರ ಬಗ್ಗೆ ಯೋಚನೆ ಮಾಡಬೇಕೆನ್ನುವುದರ ಬಗ್ಗೆ ನಾನು ಒತ್ತಾಯ ಮಾಡುತ್ತೇನೆ. ಅದಕ್ಕೋಸ್ಕರ ವಿಶೇಷವಾಗಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಕಾನೂನುಗಳಿವೆ. ಗುಡ್ಡಗಾಡು ಪ್ರದೇಶದಿಂದ ಬರುವಂಥ ಹೆಣ್ಣುಮಗಳು, ಕಲ್ಲು ಒಡೆದು ಬಿಸಿಲಿನಲ್ಲಿ ಬೇಯುವಂಥವಳು, ಭತ್ತ, ರಾಗಿಯ ಕುಯಿಲನ್ನು ಮಾಡಿ ಕಣದಲ್ಲಿ ತಂದು ಒಂದು ಮಾಡಿ, ಸೊಪ್ಪು ಸದೆಯನ್ನು ತಂದು ಸಂಸಾರವನ್ನು ಸಾಕುವಂಥವಳು, ಇವತ್ತು ಬೇಸಾಯ ಮಾಡುತ್ತಿದ್ದಾಳೆ, ನೇಗಿಲನ್ನು ನಡೆಸುತ್ತಿದ್ದಾಳೆ. ಆದ್ದರಿಂದ ನಾನು ಕಾರ್ಮಿಕ ಇಲಾಖೆಗೆ ಒತ್ತಾಯ ಮಾಡುತ್ತೇನೆ. You give them a training,

compulsory training for the weaker section because they have got money. ಕಾರ್ಮಿಕ ಇಲಾಖೆಯಲ್ಲಿ, ಸಮಾಜ ಕಲ್ಯಾಣ ಇಲಾಖೆಯಲ್ಲಿ ಸಾಕಷ್ಟು ಹಣವಿದೆ. ಹೆಣ್ಣುಮಕ್ಕಳಿಗೆ ತರಬೇತಿ ಕೊಡುವಂಥ ಕೆಲಸವಾಗಬೇಕು. ಹೇಗೆ

ಶ್ರೀ ಎನ್.ಹೆಚ್. ಕೋನರೆಡ್ಡಿ:- ಇನ್ನು, ಗಣಿ ಇಲಾಖೆಯ ಬಗ್ಗೆ ಹೇಳುವುದಾದರೆ, ಗಣಿ ಇಲಾಖೆಯ ಪರಿಸ್ಥಿತಿ ಎಲ್ಲಿಗೆ ಬಂದಿದೆ ಎಂದರೆ ಗಣಿ ಇಲಾಖೆಯವರು ಪ್ರತಿವರ್ಷವೂ ಅತಿ ಹೆಚ್ಚು ರಾಜಧನವನ್ನು ವಸೂಲು ಮಾಡುತ್ತಿದ್ದಾರೆ. ಸರ್ಕಾರದ ಯಾವುದಾದರೂ ಅಭಿವೃದ್ಧಿ ಕೆಲಸಗಳನ್ನು ಮಾಡಬೇಕೆಂದರೆ ಒಂದು ಟ್ರಿಕ್ ಉಸುಕು (ಮರಳು) ಸಿಗುತ್ತಿಲ್ಲ, ಒಂದು ಟ್ರಿಕ್ ಕಲ್ಲು ಸಿಗುತ್ತಿಲ್ಲ. ಬಳ್ಳಾರಿ ಮೈನ್ಸ್ ವಿಚಾರವನ್ನು ತಂದುಬಿಟ್ಟು ಉಸುಕಿಗೆ ಮತ್ತು ಕಲ್ಲಿಗೆ ಸಮಸ್ಯೆ ತಂದಿಟ್ಟುಬಿಟ್ಟ ಹಾಗಿದೆ. ಇಲ್ಲೀಗಲ್‌ಆಗಿ ಒಂದು ಲಾರಿ ಬರಬೇಕಾದರೆ ಅದು ಹೇಗೋ ಪಾಸ್‌ಆಗಿ ಬರುತ್ತದೆ. ಕಾನೂನು ಪ್ರಕಾರ ರಾಜಧನವನ್ನು ತುಂಬಿ ನಾವು ಉಸುಕನ್ನು ತೆಗೆದುಕೊಂಡು ಹೋಗುತ್ತೇವೆ ಎಂದರೆ ಪೊಲೀಸ್ ಇಲಾಖೆ ಮತ್ತು ಕಂದಾಯ ಇಲಾಖೆಯ ಅಧಿಕಾರಿಗಳು ಸ್ಥಳೀಯ ಮಟ್ಟದಲ್ಲಿ ಯಾವುದೇ ವ್ಯವಸ್ಥೆಯನ್ನು ಮಾಡುತ್ತಿಲ್ಲ. ಅದಕ್ಕೆ ಇದರ ಬಗ್ಗೆ ಗಂಭೀರವಾದ ಚಿಂತನೆಯನ್ನು ಮಾಡಬೇಕು. ಐದು ವರ್ಷಗಳ ಹಿಂದೆ ಸಾರ್ವಜನಿಕರಿಗೆ 3,600 ರೂಪಾಯಿಗಳಿಗೆ ಒಂದು ಟ್ರಿಕ್ ಉಸುಕು ಸಿಗುತ್ತಿದ್ದರೆ, ಇವತ್ತು ಅದೇ ಒಂದು ಟ್ರಿಕ್ ಉಸುಕು 36,000 ರೂಪಾಯಿಯಾಗಿದೆ. ಇದರ ಬಗ್ಗೆ ನಾವ್ಯಾರೂ ಚಿಂತನೆಯನ್ನು ಮಾಡುತ್ತಿಲ್ಲ. 10,000 ರೂಪಾಯಿ ಕೊಟ್ಟರೆ ಇಲ್ಲೀಗಲ್‌ಆಗಿ ಗಾಡಿ ಪಾಸ್‌ಆಗಿ ಬರುತ್ತವೆ. ಇಲ್ಲದಿದ್ದರೆ ಕೇಸ್ ಹಾಕಿಸಿಕೊಂಡು, 15,000 ರೂಪಾಯಿಗಳನ್ನು ಕೊಟ್ಟು ಅವುಗಳು ಅಲ್ಲಿಯೇ ನಿಲ್ಲುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಅದಕ್ಕೇ ಸ್ಥಳೀಯ ಮಟ್ಟದಲ್ಲಿ ಏನಾದರೊಂದು ತೀರ್ಮಾನವನ್ನು ತೆಗೆದುಕೊಳ್ಳಿ ಎಂದು ನಾವು ಜಿಲ್ಲಾಧಿಕಾರಿಗಳಿಗೆ ಹೇಳಿದೆವು. ಆದರೆ ಅವರು ಏನು ಹೇಳುತ್ತಾರೆಂದರೆ, ಸರ್ಕಾರದ ಸುತ್ತೋಲೆ ಇದೆ, ಕಾನೂನು ಇದೆ, ಯಾವುದೇ ರೀತಿಯಾಗಿ ಬೋಟ್‌ನಿಂದ ಉಸುಕು ತೆಗೆಯಬಾರದು ಎಂದು ಹೇಳುತ್ತಾರೆ. ನಾವು

ಕಾನೂನಿಗೆ ಮನ್ನಣೆಯನ್ನು ಕೊಡೋಣ, ಕಾನೂನು ಪ್ರಕಾರ ನಡೆಯೋಣ. ಆದರೆ ಸರ್ಕಾರಿ ಮತ್ತು ಖಾಸಗಿ ಕೆಲಸಗಳಿಗೆ ಸರಿಯಾಗಿ material ಸಿಗುವಂಥ ವ್ಯವಸ್ಥೆಯಾಗಬೇಕು. ಒಂದು ಕಡೆ ರಾಜಧನವನ್ನು ಸಂಗ್ರಹಿಸುವುದು ಕಡಿಮೆಯಾಗುತ್ತಿದೆ. ಇಲ್ಲೀಗಲ್‌ಆಗಿ ದುಡ್ಡು ಹೊರಗಡೆ ಹೋಗುತ್ತಿದೆ. ಅದಕ್ಕಾಗಿ ಆ ಬಗ್ಗೆ ಸರ್ಕಾರ ಮುತುವರ್ಜಿಯನ್ನು ವಹಿಸಬೇಕು ಎನ್ನುವ ವಿಚಾರವನ್ನು ಹೇಳುತ್ತೇನೆ.

ಇನ್ನು, ಆರೋಗ್ಯ ಇಲಾಖೆಯ ಬಗ್ಗೆ ಹೇಳುವುದಾದರೆ, ನಮ್ಮಲ್ಲಿ ಸರ್ಕಾರಿ ದವಾಖಾನೆಗಳಿವೆ. ಮೂರು ದವಾಖಾನೆಗಳಿಗೆ ಒಬ್ಬರು ಡಾಕ್ಟರ್ ಇನ್‌ಜಾರ್ಜ್ ಆಗಿದ್ದಾರೆ. ದವಾಖಾನೆಗಳಲ್ಲಿ ಕೇವಲ ನರ್ಸ್‌ಗಳನ್ನು ಬಿಟ್ಟರೆ ಬೇರೆ ಯಾರೂ ಇಲ್ಲ. ನಾನು ಈ ವಿಚಾರವನ್ನು ವಿಶೇಷವಾಗಿ ಆರೋಗ್ಯ ಸಚಿವರಾದ ಖಾದರ್‌ರವರ ಗಮನಕ್ಕೆ ತಂದೆ. ಅವರು ವೈದ್ಯರನ್ನು ನೇಮಕಾತಿ ಮಾಡಿಕೊಳ್ಳುತ್ತೇವೆ ಎನ್ನುತ್ತಾರೆ. ಮೂರು ದವಾಖಾನೆಗೆ ಒಬ್ಬ ಡಾಕ್ಟರ್‌ಅನ್ನು ಇನ್‌ಚಾರ್ಜ್‌ಆಗಿ ಇಟ್ಟರೆ ಅವರು ಕೆಲಸ ಮಾಡಲು ಹೇಗೆ ಸಾಧ್ಯ? ಹೆಡ್ ಕ್ವಾರ್ಟರ್‌ಆದ ನವಲಗುಂದದಲ್ಲಿರುವ ದವಾಖಾನೆಗೆ ಮೂರು ಮಂದಿ ವೈದ್ಯರ ಕೊರತೆಯಿದೆ. ಅಣ್ಣಿಗೇರಿಯಲ್ಲಿ, ಇಂಗಲಹಳ್ಳಿಯಲ್ಲಿ, ಸಿರಗುಪ್ಪಿ, ಮೊರಬದಲ್ಲೂ ಅದೇ ಪರಿಸ್ಥಿತಿ ಇದೆ. ಈ ಪರಿಸ್ಥಿತಿಯಾದರೆ, ಹಳ್ಳಿಗಳಲ್ಲಿ ಡಾಕ್ಟರ್‌ಗಳಿಲ್ಲದೇ ನಾವು ಹೇಗೆ ಕ್ಷೇತ್ರದಲ್ಲಿರಬೇಕು? ಇದರಿಂದ ನಮಗೆ ಬಹಳ ತೊಂದರೆಯಾಗುತ್ತಿದೆ. ಸರ್ಕಾರದವರು ಆರೋಗ್ಯವನ್ನು ಹಾಗೆ ಕೊಡುತ್ತೇವೆ, ಹೀಗೆ ಕೊಡುತ್ತೇವೆ ಎಂದು ಹೇಳುತ್ತಾರೆ. ಏನು ಬೇಕಾದ್ದು ಇರಲಿ, ಮೊದಲು ಡಾಕ್ಟರ್‌ಗಳನ್ನು ನೇಮಕಾತಿ ಮಾಡಿಕೊಳ್ಳಲು ಈ ಸರ್ಕಾರ ಮುಂದಾಗಬೇಕು ಎನ್ನುವ ವಿಚಾರವನ್ನು ತಮ್ಮ ಮೂಲಕ ಹೇಳಲಿಕ್ಕೆ ಬಯಸುತ್ತೇನೆ.

ಇನ್ನು, P.W.D. ಬಗ್ಗೆ ಹೇಳುವುದಾದರೆ, ಹೆಚ್.ಸಿ. ಮಹದೇವಪ್ಪನವರು P.W.D. ಮಂತ್ರಿಗಳಾಗಿದ್ದಾರೆ. ಅವರು ಮುಖ್ಯಮಂತ್ರಿಗಳಿಗೆ ಬಹಳ ಆಪ್ತರು. ಈಗಾಗಲೇ ನಾವು ಫೆಬ್ರವರಿ ಅಂತ್ಯದಲ್ಲಿದ್ದೇವೆ. ಇಲ್ಲಿಯವರೆಗೆ Appendix-E print ಆಗಲಿಲ್ಲ. Appendix-E printಆಗಿ ಹೊರಗೆ ಬಂದು K.T.P.P. Act ಪ್ರಕಾರ ಟೆಂಡರ್ ಪ್ರಾರಂಭವಾಗಬೇಕಾದರೆ ಅಷ್ಟರಲ್ಲಿ ಮಾರ್ಚ್

ಮುಗಿದು ಹೋಗುತ್ತದೆ. ಹಾಗಾದರೆ ಈ ವರ್ಷದ ಬಜೆಟ್‌ಅನ್ನು ಏನು ಮಾಡುತ್ತೀರಿ? ಅದಕ್ಕಾಗಿ, ನಾನು ಲೋಕೋಪಯೋಗಿ ಸಚಿವರಿಗೆ ಒತ್ತಾಯ ಮಾಡುವುದು ಏನೆಂದರೆ ಒಂದು ವಾರದಲ್ಲಿ ಆ ಪ್ರಕ್ರಿಯೆಯನ್ನು ಮುಗಿಸಿಬಿಡಿ. ಪ್ರಕ್ರಿಯೆ ಮುಗಿಸಿ ಅನುದಾನವನ್ನು ಬಿಡುಗಡೆ ಮಾಡಿದರೆ ಕೂಡಲೇ ಟೆಂಡರ್ ಕರೆಯಲು ಅವಕಾಶವಾಗುತ್ತದೆ, ಕಾಮಗಾರಿಯನ್ನೂ ಮಾಡಬಹುದು.

ಶ್ರೀ ಅಶೋಕ್ ಖೇಣಿ:- ಒಂದು ನಿಮಿಷ. ಈಗ ಏನಾಗಿದೆ ಎಂದರೆ, roadsಗೆ ಸಂಬಂಧಪಟ್ಟಹಾಗೆ ಡಿಲೇ ಮಾಡಿದ್ದರಿಂದ, the cement prices which were ₹ 270/- per bag ಈಗ consortium ಆಗಿ they have raised the price to ₹ 390/- per bag. That means 40% rise. ಈಗ ನಮ್ಮ ರೋಡ್‌ಗಳಿಗೆ, ಬಿಲ್ಡಿಂಗ್‌ಗಳಿಗೆ ರಿಲೀಸ್ ಮಾಡಿದರೂ 40% less budget ಆಗುತ್ತದೆ. I think, the Government should find out why all the cement factories in South India have 390/- cost while in North it is less than ₹ 200/-. There is a consortium. ನಾವು ಕೇಳಿದರೆ, ಅವರು ನಾವು ಎಲೆಕ್ಷನ್ ಫಂಡ್ ಮಾಡಿದ್ದೇವೆಂದು ಹೇಳುತ್ತಾರೆ. So, somebody has to investigate into it. ತಾವು ಸಿಮೆಂಟ್ ರೋಡ್ ಎಂದು ಹೇಳಿದಿರಿ. Karnataka Road Development Corporationನಿಂದ ನನಗೆ ಒಂದು ಲೆಟರ್ ಬಂದಿದೆ. ಬೀದರ್‌ನಿಂದ ಚಿಂಚೋಳಿಗೆ ಕಾಂಕ್ರೀಟ್ ರೋಡ್ ಮಾಡಿ, it will last for 60 years. Don't do bituminous road, because it is black cotton soil ಎಂದು ನಾನು ಹೇಳಿದರೆ, ಅವರು ನನಗೆ ಏನೆಂದು ಲೆಟರ್ ಕಳುಹಿಸುತ್ತಾರೆ ಎಂದರೆ, concrete roads are not good, ಗಾಡಿಗಳಿಗೆ excessive variant ಆಗುತ್ತದೆ, high noise level ಇದೆ, lesser riding quality compared to bituminous and its pavement, difficulty in rectifying structural failure ಎಂದು ಹೇಳುತ್ತಾರೆ. On one side they talk of concrete road and on the other side, the other part of the PWD Department says that they are not good. Sir, I would like to submit this document to you for the purpose of record.

ಉಪಾಧ್ಯಕ್ಷರು:– ಕಳಿಸಿ.

(ಈ ಹಂತದಲ್ಲಿ ಸದಸ್ಯರಾದ ಅಶೋಕ್ ಖೇಣಿಯವರು ದಾಖಲೆಯನ್ನು ಉಪಾಧ್ಯಕ್ಷರಿಗೆ ಕಳುಹಿಸಿಕೊಟ್ಟರು)

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ಕನ್ನಡ ಮಕ್ಕಳ ಪಾರ್ಟಿ ಎನ್ನುವುದು ಅಶೋಕ್ ಖೇಣಿಯವರ ಪಾರ್ಟಿಯ ಹೆಸರು. ಆದರೆ ಅವರು ಮಾತನಾಡುವುದೆಲ್ಲ ಇಂಗ್ಲಿಷ್ ಆಗಿದೆ. ಸರ್ಕಾರವೂ ಸಹ ಅದೇ ರೀತಿ ಇದೆ.

ಶ್ರೀ ಅಶೋಕ್ ಖೇಣಿ:– Kannada Language Party ಎಂದು ಇಲ್ಲ, ಕನ್ನಡ ಮಕ್ಕಳ ಪಾರ್ಟಿ ಎಂದಿದೆ.

ಶ್ರೀ ಎನ್.ಹೆಚ್. ಕೋನರೆಡ್ಡಿ:– ಕನ್ನಡದಲ್ಲೇ ಆಡಳಿತ ಕೊಡುತ್ತೇವೆ, ಆದ್ದರಿಂದ ಕನ್ನಡದಲ್ಲೇ ಮಾತನಾಡಿ ಎನ್ನುವುದು ಅವರ ಅಪೇಕ್ಷೆಯಾಗಿದೆ.

ಉಪಾಧ್ಯಕ್ಷರು:– ಕೋನರೆಡ್ಡಿಯವರೇ conclude ಮಾಡಿ.

ಶ್ರೀ ಎನ್.ಹೆಚ್. ಕೋನರೆಡ್ಡಿ:– ಇನ್ನು ಮೂಲಭೂತ ಸೌಕರ್ಯಗಳ ಇಲಾಖೆಯ ಬಗ್ಗೆ ಹೇಳುವುದಾದರೆ, ನಮಗೆ ಎಂ.ಎಲ್.ಎ. ಫಂಡ್ ಕೊಡುತ್ತಾರೆ. ಅದು ಒಂದು ಕೋಟಿ ಇದ್ದುದ್ದನ್ನು ಎರಡು ಕೋಟಿ ಮಾಡಿದರು. ಅದಕ್ಕೆ ನಾವು ಸರ್ಕಾರಕ್ಕೆ ಅಭಿನಂದನೆಗಳನ್ನು ಹೇಳುತ್ತೇವೆ. ಅದನ್ನು 3–4 ಕೋಟಿ ಕೊಡಬೇಕೆಂದು ಅವರ ಸಿ.ಎಲ್.ಪಿ.ಯಲ್ಲಿ ಗಲಾಟೆಯಾಗಿದೆ ಎನ್ನುವ ಸುದ್ದಿ ಬಂದಿದೆ. ಮುಖ್ಯಮಂತ್ರಿಗಳಿಗೆ 224 ಜನ ಸದಸ್ಯರೂ ಒತ್ತಾಯ ಮಾಡುವುದೇನೆಂದರೆ ದಯವಿಟ್ಟು ಒಬ್ಬ ಎಂ.ಎಲ್.ಎ.ಗೆ ಕನಿಷ್ಟವೆಂದರೆ 5 ಕೋಟಿ ಕೊಟ್ಟರೆ ಮಾತ್ರ ನಾವು ಹಳ್ಳಿಗಳಲ್ಲಿ ಅಡ್ಡಾಡುವುದಕ್ಕೆ ಸಾಧ್ಯವಾಗುತ್ತದೆಯೇ ಹೊರತು ಇಲ್ಲದಿದ್ದರೆ ನಾವು ಏನೂ ಮಾಡಲು ಸಾಧ್ಯವಾಗುವುದಿಲ್ಲ. ಎಲ್ಲರೂ ಬಂದು ಗುಡಿಕಟ್ಟಲು ಬೇಕು, ಸಮುದಾಯ ಭವನಕ್ಕೆ ಬೇಕು ಎನ್ನುತ್ತಾರೆ. ನಾವು ಎಷ್ಟು ಮಂದಿಗೆ ಎಂದು ಉತ್ತರ ಕೊಡುವುದು? ಬರೀ ಸುಳ್ಳು ಹೇಳುವುದೇ ಆಗಿದೆ. ಅದಕ್ಕಾಗಿ, ಈ ಸದನದಲ್ಲಿ ಎಲ್ಲರೂ ಮುಖ್ಯಮಂತ್ರಿಗಳಿಗೆ ಬೆಂಬಲವನ್ನು ಕೊಡುತ್ತೇವೆ, ಒಬ್ಬ

ಎಂ.ಎಲ್.ಎ.ಗೆ 5 ಕೋಟಿ ಕೊಡುತ್ತೇವೆ ಎಂದು ಈ ಸಲ ಆಯವ್ಯಯದಲ್ಲಿ ಘೋಷಣೆ ಮಾಡಿ ಅದರಂತೆ ಎಲ್ಲರಿಗೂ ಕೊಡಬೇಕು. ಇನ್ನೊಂದು ವಿಷಯವೆಂದರೆ, ಕೊಟ್ಟಂಥ ಹಣವೂ ಬಿಡುಗಡೆಯಾಗುವುದಿಲ್ಲ. ಅದಕ್ಕಾಗಿ ಈ ಬಗ್ಗೆ ವಿಶೇಷವಾದಂಥ ಕ್ರಮವನ್ನು ಮುಖ್ಯಮಂತ್ರಿಗಳು ತೆಗೆದುಕೊಳ್ಳಬೇಕು. ಎಂ.ಎಲ್.ಎ. ಫಂಡ್‌ಅನ್ನು 5 ಕೋಟಿಗೆ ಏರಿಸಬೇಕು ಎನ್ನುವ ಒತ್ತಾಯವನ್ನು ನಾನು ತಮ್ಮ ಮೂಲಕ ಸರ್ಕಾರಕ್ಕೆ ಮಾಡುತ್ತೇನೆ.

ಶ್ರೀ **ಭೀಮಾನಾಯಕ್:–** ಮಾನ್ಯ ಉಪಾಧ್ಯಕ್ಷರೆ, 2014–15ಕ್ಕೆ ಕೊಟ್ಟಿರುವ 2 ಕೋಟಿ ಇನ್ನೂ ರಿಲೀಸ್ ಆಗಿಲ್ಲ. ಒಂದೊಂದು ಕೋಟಿ ಮಾತ್ರ ರಿಲೀಸ್ ಮಾಡಿದ್ದಾರೆ.

ಶ್ರೀ **ಎಸ್.ಹೆಚ್. ಕೋನರೆಡ್ಡಿ:–** ಅಶೋಕ ಪಟ್ಟಣ್‌ರವರೇ ನೀವು Chief Whip ಆಗಿದ್ದೀರಿ, ಎಂ.ಎಲ್.ಎ. ಫಂಡ್ ಗರಿಷ್ಟ 5 ಕೋಟಿ ಮಾಡಿಸಿ.

ಇನ್ನು, ಗ್ರಾಮೀಣಾಭಿವೃದ್ಧಿ ಇಲಾಖೆಯ ಬಗ್ಗೆ ಹೇಳುವುದಾದರೆ, ಒಬ್ಬ ಶಾಸಕರಿಗೆ 20 ಕಿ.ಮೀ. ರಸ್ತೆಯನ್ನು ಕೊಟ್ಟಿದ್ದೀರಿ. ಮಾರ್ಚ್ ತಿಂಗಳು ಬರುತ್ತಿದೆ. ಅದಕ್ಕೆ ದುಡ್ಡು ಬಿಡುಗಡೆಯಾಗಿ, ಟೆಂಡರ್ ಕರೆದು, ಕೆಲಸ ಪ್ರಾರಂಭವಾಗಬೇಕಾದರೆ ಎಷ್ಟು ದಿವಸ ಬೇಕಾಗುತ್ತದೆ ಎನ್ನುವುದು ತಮ್ಮ ಕಲ್ಪನೆಯಲ್ಲಿರಲಿ. ಆದ್ದರಿಂದ, ಆ ಕೆಲಸವನ್ನು ಬೇಗ ಮಾಡಬೇಕು ಎಂದು ತಮ್ಮ ಮೂಲಕ ಒತ್ತಾಯವನ್ನು ಮಾಡುತ್ತೇನೆ. 439 ಹೊಸ ಗ್ರಾಮ ಪಂಚಾಯಿತಿಗಳನ್ನು ಮಾಡಿದ್ದೀರಿ. ಅದು ಸಾಲದು. ಇನ್ನೂ ಬಹಳ ಕಡೆ ಗ್ರಾಮ ಪಂಚಾಯಿತಿಗಳು ಆಗಬೇಕು ಎನ್ನುವ ಬೇಡಿಕೆ ಇದೆ. ಅದರ ಬಗ್ಗೆ ವಿಶೇಷವಾದಂಥ ನಿರ್ಣಯವನ್ನು ಸರ್ಕಾರ ತೆಗೆದುಕೊಳ್ಳಬೇಕು. ಇನ್ನೂ ಹೆಚ್ಚು ಗ್ರಾಮ ಪಂಚಾಯಿತಿಗಳನ್ನು ಮಾಡಬೇಕು ಎಂದು ತಮ್ಮ ಮೂಲಕ ಒತ್ತಾಯವನ್ನು ಮಾಡುತ್ತೇನೆ. ಇನ್ನು, ಗ್ರಾಮ ವಿಕಾಸ ಯೋಜನೆಯಲ್ಲಿ ಮೂರು ವರ್ಷಕ್ಕೆ ಐದು ಗ್ರಾಮಗಳನ್ನು ತೆಗೆದುಕೊಳ್ಳಲು ಹೇಳಿದ್ದಾರೆ. ಅದನ್ನು ಬದಲಾವಣೆ ಮಾಡಬೇಕು. ಪ್ರತಿ ವರ್ಷ ಐದು ಗ್ರಾಮ ಎಂದು ಮಾಡಬೇಕು. ಏನಾಗುತ್ತದೆ ಎಂದರೆ ಪ್ರತಿ ಮತಕ್ಷೇತ್ರದಲ್ಲಿ 70–80 ಹಳ್ಳಿಗಳು ಇರುತ್ತವೆ, ಒಬ್ಬ

ಎಂ.ಎಲ್.ಎ. ಐದು ಗ್ರಾಮಗಳನ್ನು ಮಾತ್ರ ತೆಗೆದುಕೊಳ್ಳುತ್ತೇನೆ ಎಂದರೆ, ಬೇರೆಯವರು ಅವರಿಗೆ ನಾವು ನಿಮಗೆ ಓಟು ಹಾಕಲಿಲ್ಲವೇ? ನಮ್ಮ ಊರನ್ನು ಏಕೆ ತೆಗೆದುಕೊಳ್ಳಲಿಲ್ಲ? ಎಂದು ಕೇಳುತ್ತಾರೆ. ಹೀಗಾಗಿ, ಗ್ರಾಮಗಳನ್ನು ಆಯ್ಕೆ ಮಾಡಲು ದೊಡ್ಡ ಸಮಸ್ಯೆ ಬರುತ್ತದೆ. ಅದಕ್ಕೆ ತಮ್ಮ ಮೂಲಕ ವಿನಂತಿ ಮಾಡುವುದೇನೆಂದರೆ, ಪ್ರತಿ ವರ್ಷ ಐದು ಗ್ರಾಮಗಳು ಎಂದು ಮಾಡಬೇಕು ಎಂದು ತಮ್ಮ ಮೂಲಕ ಒತ್ತಾಯವನ್ನು ಮಾಡುತ್ತೇನೆ.

ಶ್ರೀ ಕೆ. ಎಂ. ಶಿವಲಿಂಗೇಗೌಡ:- ಈಗ ಇಲ್ಲಿ ಗ್ರಾಮೀಣಾಭಿವೃದ್ಧಿ ಮಂತ್ರಿಗಳೂ ಇಲ್ಲ, ಯಾರೂ ಇಲ್ಲ, ನಾವು ಹೇಳುವುದನ್ನು ಕೇಳುವವರು ಯಾರಿದ್ದಾರೆ? ಹೇಳುವವರು ಯಾರಿದ್ದಾರೆ? ಸುಮ್ಮನೆ ಭಾಷಣ ಹೊಡೆಯುವುದು ಆಗುತ್ತಿದೆ.

ಶ್ರೀ ಎನ್.ಹೆಚ್. ಕೋನರೆಡ್ಡಿ:- ಮಾನ್ಯ ಉಪಾಧ್ಯಕ್ಷರೆ, ಊಟದ ನಂತರ ಮಾತನಾಡಲೇ?

ಉಪಾಧ್ಯಕ್ಷರು:- ನಮ್ಮ Law Minister ಇದ್ದಾರೆ, Forest Minister ಇದ್ದಾರೆ, ನೀವು conclude ಮಾಡಿ.

ಶ್ರೀ ಆನಂದ್ ವಿಶ್ವನಾಥ ಚಂದ್ರಶೇಖರ ಮಾಮನಿ:- ಪ್ರತಿವರ್ಷ ಐದು ಗ್ರಾಮಗಳನ್ನು ತೆಗೆದುಕೊಳ್ಳುವುದು ಇರಲಿ. ಈಗ ಅವರು ಹೇಳಿರುವ ಐದು ಗ್ರಾಮಗಳನ್ನು ಕೂಡಲೇ ತೆಗೆದುಕೊಳ್ಳಲು ಸರ್ಕಾರ ಕ್ರಮ ಕೈಗೊಳ್ಳಬೇಕು. ಈಗ ನಾವು ಫೆಬ್ರವರಿ 10ರಲ್ಲಿದ್ದೇವೆ. ಮಾರ್ಚ್ 9 ಅಥವಾ 10ರಂದು ಸರ್ಕಾರ 2015-16ನೇ ಸಾಲಿನ ಬಜೆಟ್ ಮಂಡಿಸಲು ಹೊರಟಿದೆ. ಈ ಸರ್ಕಾರ ಬಂದು ಮೇ 30ಕ್ಕೆ ಎರಡು ವರ್ಷವಾಗುತ್ತಿದ್ದರೂ ಕೂಡ ಮುಖ್ಯಮಂತ್ರಿಗಳ ಗ್ರಾಮೀಣ ರಸ್ತೆಯೂ ಅನುಷ್ಠಾನಗೊಳ್ಳುತ್ತಿಲ್ಲ, ಗ್ರಾಮ ವಿಕಾಸ ಯೋಜನೆಯೂ ಅನುಷ್ಠಾನಗೊಳ್ಳುತ್ತಿಲ್ಲ. ಅದಕ್ಕಾಗಿ, ಸರ್ಕಾರ ಕೂಡಲೇ ಅದನ್ನು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಎನ್. ಹೆಚ್. ಕೋನರೆಡ್ಡಿ:- ಇನ್ನು, ಕುಡಿಯುವ ನೀರಿನ ಬಗ್ಗೆ ಹೇಳುವುದಾದರೆ, ಉತ್ತರ ಕರ್ನಾಟಕದಲ್ಲಿ ಅತೀ ಹೆಚ್ಚು ಸಮಸ್ಯೆ ಇರುವುದು

ಕುಡಿಯುವ ನೀರಿನ ಬಗ್ಗೆ. ಈ ಭಾಗದ water supply schemes sanction ಆಗಿಬಿಡುತ್ತವೆ. ಮಲಪ್ರಭಾದಿಂದ ಹುಬ್ಬಳ್ಳಿ-ಧಾರವಾಡ, ನವಲಗುಂದ ಮತ್ತು ಹುಬ್ಬಳ್ಳಿ ತಾಲ್ಲೂಕಿಗೆ ಒಂದು ಸಾವಿರ ಕೋಟಿ ರೂಪಾಯಿಗಳ ಒಂದು ಯೋಜನೆ ಸಚಿವ ಸಂಪುಟದ ಮುಂದಿದೆ. ಅದನ್ನು ಮುಂದಕ್ಕೆ ಹಾಕುತ್ತಾ ಹೋಗುತ್ತಿದ್ದಾರೆ, ಈ ಭಾಗದ ಯೋಜನೆಗಳು ಮಾತ್ರ sanction ಆಗುತ್ತಿವೆ. ಇದು ಏಕೆ ಎಂದು ಕೇಳುತ್ತೇನೆ? ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ, ಎಲ್ಲಾ ಭಾಗಗಳು ನಮ್ಮವು ಎಂದು ತಿಳಿದುಕೊಂಡು ಆ ಯೋಜನೆಯನ್ನು ಮಂಜೂರು ಮಾಡಿಕೊಡಬೇಕು. ಅಲ್ಲಿ ಪೈಪ್‌ಲೈನ್ ಆಗಿದೆ, ಎಲ್ಲ ರೆಡಿ ಇದೆ. ಅದರಿಂದ ಮೂರ್‍ನಾಲ್ಕು ತಾಲ್ಲೂಕುಗಳಿಗೆ ಕುಡಿಯುವ ನೀರಿನ ಯೋಜನೆಯನ್ನು ಜಾರಿ ಮಾಡಬಹುದು. ಅದಕ್ಕೆ ಅನುಮೋದನೆಯನ್ನು ಕೊಡಬೇಕು ಎಂದು ತಮ್ಮ ಮೂಲಕ ಒತ್ತಾಯವನ್ನು ಮಾಡುತ್ತೇನೆ.

ಇನ್ನು, ಜಲಸಂಪನ್ಮೂಲ ಇಲಾಖೆಯ ಬಗ್ಗೆ ಹೇಳುವುದಾದರೆ, ಇದು ಬಹಳ ಮಹತ್ವದ ಇಲಾಖೆಯಾಗಿದ್ದು, ಇದರಲ್ಲಿ ನಮ್ಮ ಭಾಗದ ಮಲಪ್ರಭಾ ಮತ್ತು ಘಟಪ್ರಭಾ ಎರಡು ಯೋಜನೆಗಳಿವೆ. 10 ಸಾವಿರ ಕೋಟಿ ಆಗುತ್ತದೆ ಎಂದು ನಾವು ಎಲ್ಲ ಕಡೆ ಚರ್ಚೆ ಮಾಡಿದೆವು. SCP/TSPಗೆ ಸ್ವಲ್ಪ ಅನುದಾನ ಬಂದಿದೆ. Maintenanceಗೆ ಸ್ವಲ್ಪ ದುಡ್ಡು ಕೊಟ್ಟಿದ್ದಾರೆ, ಅದನ್ನು ಬಿಟ್ಟರೆ ಇವತ್ತಿನವರೆಗೂ ಯಾವ ದುಡ್ಡೂ ಬರಲಿಲ್ಲ. ಕಳೆದ ಬೆಳಗಾವಿ ಅಧಿವೇಶನದಲ್ಲಿ ಮಾನ್ಯ ಜಲಸಂಪನ್ಮೂಲ ಸಚಿವರು, ಘಟಪ್ರಭಾಕ್ಕೆ 500 ಕೋಟಿ, ಮಲಪ್ರಭಾಗೆ 500 ಕೋಟಿ ಕೊಡುತ್ತೇವೆ ಎಂದು ಹೇಳಿದರು. ಮುಖ್ಯ ಕಾಲುವೆಯಿಂದ ಹಿಡಿದು, ಉಪ ಕಾಲುವೆಯಿಂದ ಹಿಡಿದು, ಲ್ಯಾಟರಲ್‌ವರೆಗೂ ಅಚ್ಚುಕಟ್ಟು ಪ್ರದೇಶದ ರಸ್ತೆಗಳಿವೆ. ನಮ್ಮ ಭಾಗದ 9 ಜಿಲ್ಲೆಗಳಲ್ಲಿ ಮಳೆಯಾಗಿ ಒಂದು ಕಾಲುವೆಯೂ ಶುದ್ಧವಾಗಿ ಉಳಿದಿಲ್ಲ. ಜಲ ಸಂಪನ್ಮೂಲ ಸಚಿವರಾದ ಶ್ರೀ ಎಂ.ಬಿ. ಪಾಟೀಲರು ಉತ್ತರ ಕರ್ನಾಟಕದವರಾಗಿದ್ದಾರೆ. ಅವರಲ್ಲಿ ಮನವಿ ಮಾಡುವುದೇನೆಂದರೆ, ಮಲಪ್ರಭಾ, ಘಟಪ್ರಭಾಗಳು ಈ ರಾಜ್ಯದ ನೀರಾವರಿ ಅಚ್ಚುಕಟ್ಟಿನಲ್ಲಿ ಸೇರಿವೆಯೋ, ಇಲ್ಲವೋ? ಸೇರಿದ್ದರೆ ತಕ್ಷಣ ತಾವು

ಅನುದಾನವನ್ನು ಬಿಡುಗಡೆ ಮಾಡಬೇಕು ಎಂದು ತಮ್ಮ ಮೂಲಕ ಒತ್ತಾಯವನ್ನು ಮಾಡುತ್ತೇನೆ. ಹೆಚ್ಚು ಹೇಳುವುದಕ್ಕೆ ನಾನು time ಕೂಡ ತೆಗೆದುಕೊಳ್ಳುವುದಿಲ್ಲ. ಶಿಕ್ಷಣ ಇಲಾಖೆ ಬಹಳ ಪ್ರಮುಖವಾದಂಥ ಖಾತೆ. ಸನ್ಮಾನ್ಯ ಕಿಮ್ಮನೆ ರತ್ನಾಕರ್‌ರವರು ಇಲ್ಲಿಯೇ ಇದ್ದಾರೆ. ಮಾನ್ಯ ದೇಶಪಾಂಡೆಯವರೆ ನಿಮ್ಮಿಬ್ಬರ ಬಳಿ ದೊಡ್ಡ ಖಾತೆಗಳಿವೆ. ಕಟ್ಟಡಗಳಿಲ್ಲದೆ ದೊಡ್ಡ ಸಮಸ್ಯೆಯನ್ನು ಎದುರಿಸುತ್ತಿದ್ದೇವೆ. ಪ್ರಾಥಮಿಕ ಶಾಲೆಗಳ ಕಟ್ಟಡಗಳ ಕೊರತೆಯೂ ಕೂಡ ಇದೆ. ಅದೇರೀತಿಯಾಗಿ ಪ್ರೌಢಶಾಲೆಗಳ ಕಟ್ಟಡಗಳ ಕೊರತೆಯೂ ಕೂಡ ಇದೆ. ಪದವಿ ಕಾಲೇಜುಗಳ ಕಟ್ಟಡದ ಕೊರತೆಯೂ ಇದೆ. ದಯವಿಟ್ಟು, ಈ ಸಲ ಹೇಗಿದ್ದರೂ ಆಯವ್ಯಯ ಮಂಡಿಸುತ್ತೀರಿ. ಹೊಸ ಯೋಜನೆಗೆ ತಕ್ಕಹಾಗೆ ಯಾವ ಇಲಾಖೆಗೆ ಕಡಿಮೆಯಾದರೂ ಕೂಡ ನಿಮ್ಮ ಇಲಾಖೆಗೆ grant ಕಡಿಮೆಯಾಗಬಾರದು. ಹೆಚ್ಚು ಹಣ ಕೊಡಲು ಮಾನ್ಯ ಮುಖ್ಯಮಂತ್ರಿಯವರ ಮೇಲೆ ಪ್ರಭಾವ ಬೀರಬೇಕು. ನೀವು ಸೂಕ್ಷ್ಮ ಇದ್ದೀರಿ. ಸ್ವಲ್ಪ ಜನರ ಜೊತೆ ಜಗಳ ಮಾಡಿದರು ತಮಗೂ ಮಾನ್ಯ ಮುಖ್ಯಮಂತ್ರಿಯವರು ಹೆಚ್ಚು ಕೊಡಬಹುದು. ದಯವಿಟ್ಟು, ತಮಗೆ ಕೈ ಮುಗಿಯುತ್ತೇನೆ, ಹೆಚ್ಚು ಅನುದಾನವನ್ನು ಕೊಡಲಿಕ್ಕೆ ತಾವು ಪ್ರಯತ್ನವನ್ನು ಮಾಡಬೇಕು. ಎಲ್ಲಿ ಕಟ್ಟಡಗಳಿರುವುದಿಲ್ಲ, ಅಲ್ಲಿ ಅನುದಾನ ಕೊಡಿ. ಎಲ್ಲಿ ಕಾಲೇಜು ಇರುತ್ತದೆ, ಅಲ್ಲಿ ಹೆಚ್ಚುವರಿ ಮಂಜೂರು ಮಾಡುತ್ತೀರಿ. ಒಂದೂ ಕಟ್ಟಡ ಎಲ್ಲಿ ಇರುವುದಿಲ್ಲ, ಅಲ್ಲಿಗೆ ಕೊಡಲಿಕ್ಕೆ ನೀವು ತಯಾರಿಲ್ಲ. ದಯವಿಟ್ಟು, ನೀಲನಕ್ಷೆ ತಯಾರು ಮಾಡಿ. ಇಡೀ ರಾಜ್ಯದಲ್ಲಿ ಎಲ್ಲೆಲ್ಲಿ ಸಮಸ್ಯೆ ಇದೆ, ಅಲ್ಲಿ ಹಣವನ್ನು ಬಿಡುಗಡೆ ಮಾಡುವುದಕ್ಕೆ ನಿರ್ಣಯ ಮಾಡಿ. ಹೊಸ ಪ್ರೌಢಶಾಲೆಗಳು, ಹೊಸ ಪದವಿಪೂರ್ವ ಕಾಲೇಜುಗಳು ಎಲ್ಲಿ ಅವಶ್ಯಕತೆ ಇದೆ ಅದಕ್ಕೆ ಒಂದು action plan ತಯಾರು ಮಾಡಿ. ಈ ಸಲದ ಆಯವ್ಯಯದಲ್ಲಿ ಅದನ್ನೂ ಘೋಷಣೆ ಮಾಡಲಿಕ್ಕೆ ಒಂದು ನಿರ್ಧಾರವನ್ನು ತೆಗೆದುಕೊಳ್ಳಬೇಕು. ತಾವು ಮಂತ್ರಿಗಳಾದ ನಂತರ ಯಾವುದೇ ಹೊಸ high school and college ಅನ್ನು ತೆರೆಯಲಿಲ್ಲ. 2 ವರ್ಷ ಮುಗಿಯುತ್ತಾ ಬಂತು. ಈ ಸಲದ ಬಜೆಟ್‌ನಲ್ಲಿ ಒಂದು ನಿರ್ಣಯವನ್ನು ತಾವು ತೆಗೆದುಕೊಳ್ಳಬೇಕು. 1994–95ನೇ ಸಾಲಿನ

ಅನುದಾನಕ್ಕೊಳಪಡತಕ್ಕಂಥ ಕಡತಗಳು ನಿಮ್ಮ ಹತ್ತಿರ ಏನು ಬಾಕಿ ಇವೆ, ಅವುಗಳನ್ನು clear ಮಾಡಿಬಿಡಿ. Freedom park ಹೇಗಾಗಿದೆ ಎಂದರೆ, ಅವರು ಪ್ರತಿ ವರ್ಷ ಬಂದು ಹೋರಾಟ ಮಾಡತಕ್ಕಂಥದ್ದು ಆಗಿದೆ. ಅದನ್ನು ಮಾಡಿ. 1995ರ ನಂತರದ್ದಕ್ಕೆ ತಮ್ಮ ಆರ್ಥಿಕ ಪರಿಸ್ಥಿತಿ ನೋಡಿಕೊಂಡು ಮಾಡಿ. ಏಕೆಂದರೆ, ಎಲ್ಲವನ್ನೂ ಒಂದೇ ಸಲಕ್ಕೆ ಸರ್ಕಾರಕ್ಕೆ ಮಾಡಲಿಕ್ಕಾಗುವುದಿಲ್ಲ. 1995ರಿಂದ ಪ್ರತಿ ವರ್ಷ 2 ವರ್ಷ, ಅನುದಾನಕ್ಕೊಳಪಡಿಸತಕ್ಕಂಥದ್ದಕ್ಕೂ ಕೂಡ ಸರ್ಕಾರ ಮುಂದಾಗಬೇಕೆಂಬ ವಿಚಾರವನ್ನು ತಮ್ಮ ಗಮನಕ್ಕೆತರುತ್ತೇನೆ. ಇದರ ಜೊತೆಯಲ್ಲಿ, ಅಲ್ಪಸಂಖ್ಯಾತರ ಇಲಾಖೆ, ಹಿಂದುಳಿದವರ್ಗಗಳ ಇಲಾಖೆ, ಸಮಾಜ ಕಲ್ಯಾಣ ಇಲಾಖೆಗಳ ಬಗ್ಗೆ ಹೇಳುತ್ತೇನೆ. ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಿದ್ದೀರಿ. ದೇವರಾಜ ಅರಸು ನಿಗಮ, ಹಿಂದುಳಿದ ವರ್ಗ ಅಲ್ಪಸಂಖ್ಯಾತರ ನಿಗಮ, ಸ್ವಯಂ ಉದ್ಯೋಗ ಸಾಲ – ಅದು target ಏತಕ್ಕೆ? ಒಬ್ಬ ಫಲಾನುಭವಿಯನ್ನು ಆರಿಸಬೇಕು. ನಮ್ಮ ಕ್ಷೇತ್ರದಲ್ಲಿ ಜನ ಏನಂತಾರೆ? ಕನಿಷ್ಠ 10–15 ಆದರೂ ಬೇಡವೇ? 100 ಆದರೂ ಬೇಡವೇ? ದಯವಿಟ್ಟು ಫಲಾನುಭವಿಗಳ ಸಂಖ್ಯೆಯನ್ನು ಹೆಚ್ಚಿಸಬೇಕೆನ್ನುವ ಒತ್ತಾಯವನ್ನು ತಮ್ಮ ಮೂಲಕ ಮಾಡುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ:– ಖಜಾನೆಯಲ್ಲಿ ರೂಪಾಯಿ ಇದ್ದರೆ ಕೊಡುತ್ತಾರೆ. ಇರಲಿಲ್ಲವೆಂದರೆ ಎಲ್ಲಿಂದ ಕೊಡುವುದು?

ಶ್ರೀ ಎನ್.ಹೆಚ್. ಕೋನರೆಡ್ಡಿ:– ಆದರೂ ಒತ್ತಾಯ ಮಾಡಬೇಕಲ್ಲ? ನಾವು ವಕಾಲತ್ತು ಮಾಡಿ ಹೇಳಿದರೇನೇ ಸರ್ಕಾರಗಳು ನೋಡುತ್ತವೆ. ವಿರೋಧ ಪಕ್ಷವಾಗಿ ನಾವು ಕೆಲಸವನ್ನು ಮಾಡಬೇಕಾಗುತ್ತದೆ. ಶಾದಿ ಭಾಗ್ಯ.

ಉಪಾಧ್ಯಕ್ಷರು:– Conclude ಮಾಡಿ.

ಶ್ರೀ ಎನ್.ಹೆಚ್. ಕೋನರೆಡ್ಡಿ:– Conclude ಮಾಡುತ್ತೇನೆ. ಶಾದಿ ಭಾಗ್ಯ ಯೋಜನೆ ತಂದರು. ಘೋಷಣೆ ಮಾಡಿದಮೇಲೆ ಒಂದು ತಾಲ್ಲೂಕಿಗೆ 100 ಅಥವಾ 200 ಎಂದಾದರೂ fix ಮಾಡಬೇಕಲ್ಲವೇ? 1 ಸಾವಿರ ಅರ್ಜಿಗಳು ಬರುತ್ತವೆ. ಇಡೀ ರಾಜ್ಯಕ್ಕೆ ಅಲ್ಲಿರುವುದು 1 ಸಾವಿರ. ಹೀಗಾದರೆ

ಹೇಗೆ ಸಾಧ್ಯವಿದೆ? ಶಾದಿ ಭಾಗ್ಯ ನೀವೇನು ಕೊಡುತ್ತೀರಿ ಅದು ಸರಿಯಾಗಿ ವಿತರಣೆ ಆಗುವ ರೀತಿಯಲ್ಲಿ ಮಾಡಬೇಕು. ಶಾದಿ ಮಹಲ್‌ಗಳ ಬಗ್ಗೆ ಅಲ್ಪಸಂಖ್ಯಾತರ ಸಮುದಾಯ ಭವನಗಳ ಬಗ್ಗೆ ಹೇಳುತ್ತೇನೆ. ಮಾನ್ಯ ಖಮರುಲ್ ಇಸ್ಲಾಂರವರು ಸಚಿವರಾದ ನಂತರ ಎಲ್ಲಿಯೂ ಹಣ ಬಿಡುಗಡೆಯಾದದ್ದನ್ನು ನಾನು ನೋಡಲಿಲ್ಲ. ಸರ್ಕಾರದಲ್ಲಿ ಹಣ ಇದೆಯೋ ಅಥವಾ ಇಲ್ಲವೋ? ಆ ಇಲಾಖೆಯಲ್ಲಿ ಹಣ ಇದ್ದರೆ ಕೊಡಿ. ಶಾದಿ ಮಹಲ್‌ಗಳು ಅರ್ಧಕ್ಕೆ ನಿಂತಿವೆ. ನೀವು ಹಣವನ್ನು ಇಟ್ಟುಕೊಂಡು ಕುಳಿತುಕೊಳ್ಳುತ್ತೀರಾ? ಅದು ಮಾರ್ಚ್ 31st ಗೆ close ಆಗುತ್ತದೆ. ದಯವಿಟ್ಟು, ಆ ರೀತಿಯಾಗಿ ಕ್ರಮವನ್ನು ಜರುಗಿಸಬೇಕು. ಧಾರವಾಡ ಜಿಲ್ಲೆ ಬಗ್ಗೆ ಹೇಳುತ್ತೇನೆ. ಕಂದಾಯ ಇಲಾಖೆ ಬಗ್ಗೆ ಹೇಳಬೇಕೆಂದರೆ, ಕಂದಾಯ ಸಚಿವರು ಇದ್ದಾಗ ನಾನು ಮಾತನಾಡಬೇಕೆಂದೆ. ಅತಿವೃಷ್ಟಿಯಿಂದ ಎಲ್ಲಾ ಬೆಳೆಗಳೂ ಹಾಳಾಗಿವೆ. ಪ್ರತಿ ಹೆಕ್ಟೇರ್‌ಗೆ 9 ಸಾವಿರ ರೂಪಾಯಿಗಳನ್ನು ಪರಿಹಾರವೆಂದು ಈರುಳ್ಳಿ ಬೆಳೆಗೆ ಕೊಟ್ಟರು. ಕೇವಲ 30 ಹಳ್ಳಿಗಳಿಗೆ ಆಗುವಷ್ಟು 5 ಕೋಟಿ ರೂಪಾಯಿ ಬಿಡುಗಡೆ ಮಾಡಿದರು. ಒಂದೇ ಸಲಕ್ಕೆ ಕೊಡಬೇಕೆಂದು ನಾವು 30 ಹಳ್ಳಿಗಳಿಗೆ ಕೊಡಬಾರದೆಂದು pending ಇಟ್ಟೆವು. ಆ 30 ಹಳ್ಳಿಗಳಿಗೆ ಕೊಟ್ಟೆವು ಇನ್ನು 60 ಹಳ್ಳಿಗಳಿಗೆ ಕೊಟ್ಟಿಲ್ಲ. 60 ಹಳ್ಳಿಯವರು ನಮಗೇಕೆ ಕೊಟ್ಟಿಲ್ಲವೆಂದು ಕೇಳುತ್ತಾರೆ. CRF ಅನುದಾನವೇನಿದೆ, ಅದನ್ನು ಬಿಡುಗಡೆ ಮಾಡಬೇಕು. ಕೇಂದ್ರದಲ್ಲಿ ಅತಿವೃಷ್ಟಿ ಸಲುವಾಗಿ ಒಂದು ಕಛೇರಿ ಇದೆ. ಅವರು ಹಣವನ್ನೇ ಬಿಡುಗಡೆ ಮಾಡುವುದಿಲ್ಲ. ಅಭಿವೃದ್ಧಿ ಮಾಡಬೇಕೆಂದು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಹಣವೇ ಇಲ್ಲ. ಹಣದ ಕೊರತೆ ಇಲ್ಲವೆನ್ನುತ್ತಾರೆ. ಸರ್ಕಾರ ಇಂಥವನ್ನು ಇಲ್ಲಿ ಇಟ್ಟುಕೊಂಡು ಕುಳಿತುಕೊಳ್ಳುವುದಕ್ಕಿಂತ ಅತಿವೃಷ್ಟಿಯಿಂದ ಹಾಳಾದಂಥ areaಗೆ ಅಭಿವೃದ್ಧಿ ಇರಬಹುದು ಅಥವಾ ಬೆಳೆಗಳಿಗೆ ಇರಬಹುದು ಅನುದಾನ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ತಕ್ಷಣ ಬಿಡುಗಡೆ ಮಾಡಬೇಕು ಎಂದು ತಮ್ಮ ಮೂಲಕ ನಾನು ಒತ್ತಾಯ ಮಾಡುತ್ತೇನೆ. ಹೆಸರು ಮತ್ತು ಉಳಿದ ಬೆಳೆಗಳಿಗೆ ಹಾನಿಯಾಗಿದೆ. ಅದಕ್ಕೂ ಕೂಡ ಹಣವನ್ನು ಕೊಡಬೇಕು.

ವಸತಿ ಇಲಾಖೆ ಬಗ್ಗೆ ಹೇಳುತ್ತೇನೆ. ಅಂಬರೀಷ್‌ರವರು ಈಗ ಎದ್ದು ಹೋದರು. ಬಹಳ ಮಹತ್ವದ್ದು ಎಂದರೆ, ನಮಗೆ 300 ಮನೆಗಳನ್ನು ಕೊಡುತ್ತೇವೆಂದು ಪತ್ರ ಬರೆದರು. Congress ನವರಿಗೆ 500 ಮನೆ ಕೊಟ್ಟರಿ. ಆದರೆ, ಇವತ್ತಿನವರೆಗೂ ನಮಗೆ ಸುಳ್ಳು ಹೇಳಿದರೇ ಹೊರತಾಗಿ ಕೊಡುತ್ತೇವೆ ಅಥವಾ ಕೊಡುವುದಿಲ್ಲ, ವಿರೋಧ ಪಕ್ಷದಲ್ಲಿದ್ದವರಿಗೆ ಕೊಡುವ ಹಾಗಿಲ್ಲವೆಂದು ಹೇಳಿದರೆ ಸುಮ್ಮನಿದ್ದುಬಿಡುತ್ತೇವೆ. ನೀವು ಪತ್ರ ಬರೆದ ನಂತರ ಅದು ಜಾರಿಯಾಗತಕ್ಕಂಥ ವ್ಯವಸ್ಥೆ ಆಗಬೇಕು ಎಂದು ಹೇಳುತ್ತೇನೆ. ಅಂಬರೀಷ್‌ರವರು ಮಾತು ಕೊಟ್ಟಿದ್ದಾರೆ. ಹಾಗೇ ಕೊಡುತ್ತೇವೆ ಎನ್ನುವ ಮಾತನ್ನೂ ಕೂಡ ಅವರು ಹೇಳಿದರು. ಇದರ ಜೊತೆಯಲ್ಲಿ ನಗರಾಭಿವೃದ್ಧಿ ಇಲಾಖೆ, ಕೃಷಿ ಇಲಾಖೆ ಬಗ್ಗೆ ಸಾಕಷ್ಟು ವಿಚಾರಗಳನ್ನು ತಮ್ಮ ಮೂಲಕ ಹೇಳಬೇಕೆಂದಿದ್ದೆ. ಒಳಚರಂಡಿ ಯೋಜನೆ, ನವಲಗುಂದ, ಅಣ್ಣಿಗೇರಿ ನನ್ನ ಕ್ಷೇತ್ರ ಅದು. ಕೇವಲ ಮಾಡುತ್ತೇವೆಂದು ಸದನದಲ್ಲಿ ಮಾತು ಕೊಡುತ್ತಾರೆ. ಅದೂ ಕೂಡ ಜಾರಿಯಾಗಿಲ್ಲ. ಅದಕ್ಕೂ ಕೂಡ ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ. ವಿಶೇಷವಾಗಿ ತೋಟಗಾರಿಕೆ ಇಲಾಖೆ ಬಗ್ಗೆ ಮಾತನಾಡುತ್ತೇನೆ. ನಮ್ಮ ಉತ್ತರ ಕರ್ನಾಟಕದಲ್ಲಿ 20 HPಗಿಂತ ಕೆಳಗಿರುವ tractor ಗೆ ಸಹಾಯಧನ ಕೊಡುತ್ತೇವೆ ಎನ್ನುತ್ತಾರೆ. ನಮ್ಮಲ್ಲಿ ಅಂಥ tractor ಅನ್ನೇ ಉಪಯೋಗ ಮಾಡುವುದಿಲ್ಲ. ನಮ್ಮದೇನಿದ್ದರೂ 25 HP ಗಿಂತ ಮೇಲೆ ಇದ್ದರೆ ಮಾತ್ರ. Tractor ಅನ್ನೇ ಉಪಯೋಗ ಮಾಡುವುದಿಲ್ಲ. ನಮ್ಮದೇನಿದ್ದರೂ 25 HP ಗಿಂತ ಮೇಲೆ ಇದ್ದರೆ ಮಾತ್ರ. Tractor ಗಳಿಗೆ subsidy ಕೊಡುವುದನ್ನು ಸರ್ಕಾರ ನಿಲ್ಲಿಸಿದೆ. ಅದನ್ನು ಬಿಡುಗಡೆ ಮಾಡಲಿಕ್ಕೆ ಕ್ರಮವನ್ನು ತೆಗೆದುಕೊಳ್ಳಬೇಕು ಎನ್ನುವಂಥ ವಿಚಾರವನ್ನು ತಮ್ಮ ಮೂಲಕ ಹೇಳುತ್ತೇನೆ. ತೋಟಗಾರಿಕೆ, NRHM – ಕೆಲವು ಯೋಜನೆಗಳಿವೆ. ಅವುಗಳನ್ನು ಜಾರಿಗೊಳಿಸುವುದಕ್ಕೆ ಅಧಿಕಾರಿಗಳು misguide ಮಾಡಿದ್ದಕ್ಕೆ ಆ ಎಲ್ಲಾ ಯೋಜನೆಗಳನ್ನು ನಿಲ್ಲಿಸುತ್ತಿದ್ದಾರೆ. ತೋಟಗಾರಿಕೆ ಇಲಾಖಾ ಮಂತ್ರಿಗಳಿಗೆ ನಾನು ತಮ್ಮ ಮೂಲಕ ಒತ್ತಾಯಿಸುತ್ತೇನೆ. ಹೆಚ್ಚು ಅನುದಾನವನ್ನು ಬಿಡುಗಡೆ ಮಾಡಿ, ಸಬ್ಸಿಡಿಯನ್ನು ಕೊಡುವಂಥದ್ದಕ್ಕೆ ತಾವು

ಮುಂದಾಗಬೇಕು. ನಾನು ಮಾತನಾಡಲು ತಾವು ಅವಕಾಶ ಮಾಡಿಕೊಟ್ಟಿರಿ. ನಾನು ಹುರುಪಿನಲ್ಲಿ ಕ್ರಾಂತಿಕಾರಕ ಮತ್ತು ಸಮಾಜ ಸುಧಾರಕ ಎಂದು ಹೇಳಿದೆನಲ್ಲ. ಈ ಎರಡೂ ನೋಡಿದರೆ ಇದನ್ನು ನಮ್ಮ ಉತ್ತರ ಕರ್ನಾಟಕದ ಭಾಷೆಯಲ್ಲಿ ಹೇಳಬೇಕೆಂದರೆ, ರಾಜ್ಯಪಾಲರ ಭಾಷಣ ಹೇಗಿತ್ತು ಎಂದರೆ, ಉಪ್ಪೂ ಇಲ್ಲ, ಖಾರವೂ ಇಲ್ಲ ಎನ್ನುವ ಹಾಗಿದೆ. ತಿನ್ನಬೇಕೆಂದರೆ ರುಚಿ ಹತ್ತಬೇಕಲ್ಲ? ಆ ರೀತಿಯಾಗಿ ಆಗಿದೆ. ಅದಕ್ಕೆ ಸ್ವಲ್ಪ ಉಪ್ಪು, ಖಾರ ಬರುವ ಹಾಗೆ ಆಯವ್ಯಯವನ್ನು ಮಂಡಿಸಬೇಕೆಂದು ಹೇಳಿ ಮಾನ್ಯ ಮುಖ್ಯಮಂತ್ರಿಯವರಿಗೆ ಒತ್ತಾಯ ಮಾಡಿ, ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ, ನನ್ನ ಮಾತು ಮುಗಿಸುತ್ತೇನೆ.

ಉಪಾಧ್ಯಕ್ಷರು:- ಈಗ ಸದನವನ್ನು ಮಧ್ಯಾಹ್ನ 3.15 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 2 ಗಂಟೆ 16 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ಮಧ್ಯಾಹ್ನ 3.15 ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು ಮಧ್ಯಾಹ್ನ 3 ಗಂಟೆ 28 ನಿಮಿಷಕ್ಕೆ ಪ್ರಾರಂಭಗೊಂಡಾಗ ಸನ್ಮಾನ್ಯ ಉಪಾಧ್ಯಕ್ಷರು ಪೀಠವನ್ನಲಂಕರಿಸಿದರು)

ಶ್ರೀ ಆರ್. ರೋಷನ್ ಬೇಗ್:- ಮಾನ್ಯ ಉಪಾಧ್ಯಕ್ಷರೆ, ಆ ಭಾಗದಲ್ಲಿ ಯಾರೂ ಇಲ್ಲ.

ಉಪಾಧ್ಯಕ್ಷರು:- ಏನೆಂದು ಗೊತ್ತಾಗಲಿಲ್ಲ.

ಶ್ರೀ ಆರ್. ರೋಷನ್ ಬೇಗ್:- Leader of Oppostion ಇಲ್ಲ ಆ ಭಾಗದಲ್ಲಿ ಒಬ್ಬರೂ ಇಲ್ಲ. ವಿರೋಧ ಪಕ್ಷದವರಿಗೆ ಜವಾಬ್ದಾರಿ ಇಲ್ಲ. ಓ ಹೋ ಈಗ ಗೊತ್ತಾಯಿತು. ದೆಹಲಿ result ನೋಡಿ ಬೇಜಾರಾಗಿಬಿಟ್ಟಿದೆ. ಈಗ ಒಬ್ಬರೇ ಬಂದರು ನೋಡಿ. ಎಲ್ಲಾ ಜಾಗ ಖಾಲಿ.

ಶ್ರೀ ಜಗದೀಶ ಶೆಟ್ಟರ್:– ನಿಮ್ಮ ಕಡೆಗೆ ಮೂರು ಜನ Minister, ಮೊದಲನೇ line ನೋಡಿದರೆ ಪರಿಸ್ಥಿತಿ ಗಂಭೀರವಿದೆ. ಆಡಳಿತ ಪಕ್ಷದ ಪರಿಸ್ಥಿತಿ ಮುಂದೆ ಏನಾಗುತ್ತದೆಯೋ?

ಉಪಾಧ್ಯಕ್ಷರು:– O.K., ಈಗ ಮಾನ್ಯ ರಮೇಶ್ ಕುಮಾರ್‌ರವರು ಮಾತನಾಡಿ.

ಶ್ರೀ ಆರ್. ಅಶೋಕ್:– ಉಪಾಧ್ಯಕ್ಷರೆ, ನಾವು boycott ಮಾಡಿದ್ದು ಏಕೆಂದರೆ, 3 ಗಂಟೆಗೆ Question Hour ಇದೆ ಎಂದು ಹೇಳಿದರು. ಈಗ ಕೇಳಿದರೆ Question Hour ಇಲ್ಲ ಸಂಜೆ ತೆಗೆದುಕೊಳ್ಳುತ್ತೇವೆಂದು ಹೇಳಿದರು. ಅದಕ್ಕೆ ಸಂಜೆ ಯಾರು ಇರುತ್ತಾರೆ, ಮೊದಲು Question Hour ತೆಗೆದುಕೊಳ್ಳಲಿ ಎಂದು ನಾವು ವಾಪಸ್ ಆಚೆಗೆ boycott ಮಾಡಿದೆವು. ದಯವಿಟ್ಟು Question Hour ತೆಗೆದುಕೊಳ್ಳಿ.

ಉಪಾಧ್ಯಕ್ಷರು:– 5 ಗಂಟೆಗೆ ತೆಗೆದುಕೊಳ್ಳೋಣ, ಈಗಾಗಲೇ ಮಾನ್ಯ ರಮೇಶ್ ಕುಮಾರ್‌ರವರನ್ನು ಕರೆದಿದ್ದೇನೆ.

ಶ್ರೀ ಆರ್. ಅಶೋಕ್:– ನೀವು ಬರುವಾಗ ಹೋಗುವಾಗ ಎರಡು ಸಾರಿ salute ಹೊಡೆದಿದ್ದೇನೆ. ಸುಳ್ಳು ಹೇಳಬೇಡಿ. ನಾವು ಆಗಲೇ ಬಂದು ಹೋದೆವು, ನಾನು ಇಲ್ಲಿ ಇದ್ದೆನೋ ಇಲ್ಲವೋ ಎಂದು ಬೇಕಾದರೆ ನಿಮ್ಮ ಸಚಿವರನ್ನು ಕೇಳಿ.

ಶ್ರೀ ಜಗದೀಶ್ ಶೆಟ್ಟರ್:–ಮಧ್ಯಾಹ್ನ 3 ಗಂಟೆಗೆ Question Hour ತೆಗೆದುಕೊಳ್ಳೋಣವೆಂದು ಹೇಳೀದರು.

ಉಪಾಧ್ಯಕ್ಷರು:– 4–30 ಕ್ಕೆ ತೆಗೆದುಕೊಳ್ಳೋಣ ಬಿಡಿ.

ಶ್ರೀ ಆರ್. ಅಶೋಕ್:– ಇಲ್ಲ ಆಗಲ್ಲ ಸಾರ್. 4–30 ಎಂದರೆ ಅದು 5–30, 6 ಗಂಟೆಯವರೆಗೆ ಹೋಗಿ ಬಿಡುತ್ತದೆ.

ಉಪಾಧ್ಯಕ್ಷರು:– ಇಲ್ಲ ಇಲ್ಲ ನಾನು ಈಗಾಗಲೇ ರಮೇಶ್ ಕುಮಾರ್‌ರವರನ್ನು ಕರೆದಿದ್ದೇನೆ ಬಿಡಿ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:- ಈಗ ರಮೇಶ್ ಕುಮಾರ್‌ರವರು ಮಾತನಾಡಲಿಕ್ಕೆ ಶುರು ಮಾಡಿದರೆ, ನೀವು ನಾಳೆ ಬೆಳಿಗ್ಗೆ 11-00 ಗಂಟೆಗೆ ಬನ್ನಿ ಎಂದು ಹೇಳಿ ಬಿಡುತ್ತೀರಿ.

ಶ್ರೀ ಕೆ.ಆರ್. ರಮೇಶ್ ಕುಮಾರ್:- ದಯಮಾಡಿ ಎಲ್ಲರೂ ಸಹಕರಿಸಿ.

ಉಪಾಧ್ಯಕ್ಷರು:- ಇದು ಆಗಲಿ, ಎಲ್ಲಾ discussion ಆಗಲಿ.

ಶ್ರೀ ಕೆ.ಆರ್. ರಮೇಶ್ ಕುಮಾರ್ (ಶ್ರೀನಿವಾಸಪುರ):- ಮಾನ್ಯ ಉಪಾಧ್ಯಕ್ಷರೆ, ಇವರು ಬಂದ ತಕ್ಷಣ ಒಬ್ಬರಿಗೊಬ್ಬರು ದೆಹಲಿ ಚುನಾವಣೆಯ ಫಲಿತಾಂಶದ ವಿಷಯದ ಬಗ್ಗೆ ಹೇಳುವುದನ್ನು ನೋಡಿದರೆ ಒಂದು ವಿಷಯ ಜ್ಞಾಪಕಕ್ಕೆ ಬರುತ್ತದೆ. ನಮ್ಮ ಮುಳುಬಾಗಿಲು ಹತ್ತಿರ ಕುರುಡುಮಲೆ ಎಂದು ಇದೆ. ಅಲ್ಲಿ ಬಹಳ ದೊಡ್ಡ ವಿನಾಯಕನ ಮೂರ್ತಿ ಇದೆ. ಅಲ್ಲಿನ ಪ್ರತಿತಿ ಏನೆಂದರೆ, ಅಲ್ಲಿನ ವಿನಾಯಕನ ಹೊಕ್ಕಳಿನಲ್ಲಿ ಒಂದು ಕೈಯನ್ನು ಇಡಬಹುದು. ಅಲ್ಲಿ ಯಾರು ಕೈ ಇಡುತ್ತಾರೆಯೋ ಅವರಿಗೆ ಅದೃಷ್ಟ ಬರುತ್ತದೆ ಎಂಬ ಪ್ರತಿತಿ ಇದೆ. ಒಂದು ದಿವಸ ಮೂರು ಜನ ಸಂಬಂಧಿಕರು ಮತ್ತು ವ್ಯಾಪಾರಸ್ಥ ಕುಟುಂಬದಿಂದ ಬಂದವರು ಅಲ್ಲಿಗೆ ಹೋಗುತ್ತಾರೆ. ಆ ಮೂರು ಜನರಿಗೆ ನಾನು ಬೇಗ ಕೈಯಿಡಬೇಕೆಂಬ ಆತುರ ಇರುತ್ತದೆ. ಏಕೆಂದರೆ, ಒಬ್ಬರಿಗೆ ತಪ್ಪಿಸಿ ನಾವು ಬೇಗ ಕೈ ಇಟ್ಟರೆ ನಮಗೆ ಅದೃಷ್ಟ ಬರುತ್ತದೆಂಬ urgent ಇರುತ್ತದೆ. ಮೊದಲನೇ ವ್ಯಕ್ತಿ ಕೈ ಇಡುತ್ತಾನೆ. ಒಳಗಡೆ ಒಂದು ಚೇಳು ಇರುತ್ತದೆ, ಅದು ಆತನ ಕೈಗೆ ಕುಟುಕುತ್ತದೆ. ಅದು ಆತನ ಅದೃಷ್ಟ, ಆತನಿಗೆ ಉರಿ ಆಗುತ್ತದೆ. ಆದರೆ, ಅಲ್ಲಿ ಚೇಳು ಇದೆ ಅದು ಕಚ್ಚುತ್ತದೆ ಎಂದು ಇವರಿಬ್ಬರಿಗೆ ಆತ ಹೇಳುವಂತಿಲ್ಲ. ಆತ ಮೊದಲು ಹಾಹಾ ಎಂದು ಹೇಳುತ್ತಾನೆ. ಆನಂತರ ಅದೃಷ್ಟ ಎಷ್ಟು ಚೆನ್ನಾಗಿದೆ ಎಂದು ಹೇಳುತ್ತಾನೆ. ಆಮೇಲೆ ಎರಡನೇ ವ್ಯಕ್ತಿ ಕೈ ಇಡುತ್ತಾನೆ, ಆತನಿಗೆ ಇನ್ನೂ ಜೋರಾಗಿ ಕುಟುಕುತ್ತದೆ. ಆತ ಮೊದಲನೇ ವ್ಯಕ್ತಿಯ ಮುಖ ನೋಡಿ ನಿನಗೆ ಎಷ್ಟೋ ನನಗೂ ಸಹ ಅಷ್ಟೇ ಎಂದು ಕೇವಲ ಸೈಗೆ ಮೂಲಕ ಹೇಳುತ್ತಾನೆ. ಮೂರನೇ ವ್ಯಕ್ತಿ ಕೈ ಇಟ್ಟು ತೆಗೆದು ಇವರಿಬ್ಬರ ಮುಖವನ್ನು ನೋಡಿ ನಿಮ್ಮಿಬ್ಬರದ್ದು

ಎಷ್ಟೆಂದು ಕೇಳುತ್ತಾನೆ. ನಿನ್ನಷ್ಟೆ ನಮ್ಮದೂ ಸಹ ಎಂದು ಅವರು ಹೇಳುತ್ತಾರೆ. ಆದ್ದರಿಂದ, ದೆಹಲಿಯಲ್ಲಿ ನೀವೂ ಅಷ್ಟೇ ನಾವೂ ಅಷ್ಟೇ, ಯಾರೇನು ಮಾತನಾಡುವಂತಿಲ್ಲ.

ಶ್ರೀ ಜಗದೀಶ್ ಶೆಟ್ಟರ್:– ನಿಮ್ಮದು ನಮ್ಮಗಿಂಥ ಅದೋಗತಿಯಾಗಿದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್:– ನಾನು ಹೇಳುವುದನ್ನು ಕೇಳಿ. ಭಾರತೀಯ ಜನತಾ ಪಕ್ಷದವರರಿಗೆ ಸ್ವಾಭಿಮಾನ ಎನ್ನುವುದು ಇಲ್ಲ. ಕೇವಲ ಮೂರು ಸೀಟ್‌ಗಳನ್ನು ತೆಗೆದುಕೊಂಡು ಏನು ಮಾಡುತ್ತೀರಿ?

ಶ್ರೀ ಜಗದೀಶ್ ಶೆಟ್ಟರ್:– ನೀವು ಅಷ್ಟನ್ನು ಸಹ ತೆಗೆದುಕೊಂಡಿಲ್ಲ. ನಿಮ್ಮ ಪಕ್ಷ ಅಲ್ಲಿ ಶೂನ್ಯವಾಗಿದೆ. ಮೂರು ಸಹ ಬೇಡವೆಂದು ನಿಮ್ಮವರು ಸುಮ್ಮನಾಗಿದ್ದಾರೆ.

ಶ್ರೀ ಆರ್. ಅಶೋಕ್:– ಈ ಸಹವಾಸವೇ ಬೇಡವೆಂದು ನಿಮ್ಮವರು ಶೂನ್ಯ ತೆಗೆದುಕೊಂಡಿದ್ದಾರೆ.

ಶ್ರೀ ಕೆ.ಆರ್. ರಮೇಶ್ ಕುಮಾರ್:– ಮಾನ್ಯ ಜಗದೀಶ್ ಶೆಟ್ಟರ್‌ರವರೇ, ಕಾಂಗ್ರೆಸಿನವರು ಬಹಳ ಸಿಟ್ಟಿನ ಜನರು. ಆಂದ್ರ ಪ್ರದೇಶದಲ್ಲಿ ನಾವೇನು ಅವರ ತಂಟೆಗೆ ಹೋಗಿದ್ದೇವೆಯೇ? ಆಂಧ್ರ ಪ್ರದೇಶದಲ್ಲಿ ನಮಗೆ ಒಂದು ಸೀಟೂ ಕೂಡ ಬೇಡ ಎಂಬುದು ನಮ್ಮ ಪಾಲಿಸಿ. ಬೇಕೆಂದರೆ full seats ಬೇಕು ಬೇಡವೆಂದರೆ ಒಂದು seat ಕೂಡ ಬೇಡ ಎಂಬುದು ನಮ್ಮ ಪಾಲಿಸಿ. ಕೇಂದ್ರದಲ್ಲಿ ನಿಮ್ಮ ಸರ್ಕಾರ ಇಟ್ಟುಕೊಂಡು ದೆಹಲಿಯಲ್ಲಿ ಕೇವಲ 3 ಸೀಟ್‌ಗಳಿಸಿದ್ದೀರಿ. ಈ ಮೂರು ಸೀಟ್ ಏತಕ್ಕೆ ಬೇಕು?

ಶ್ರೀ ಜಗದೀಶ್ ಶೆಟ್ಟರ್:– ನಮ್ಮದು ಇನ್ನೂ 33% vote bank ಇದೆ. ಅಂದರೆ, 33% vote ನಮ್ಮ ಪಕ್ಷಕ್ಕೆ ಬಿದ್ದಿದ್ದೆ. ಇದನ್ನು ತಾವು ಅರ್ಥಮಾಡಿಕೊಳ್ಳಿ. ನಿಮ್ಮ vote bank complete failed.

ಶ್ರೀ ರಾಮಲಿಂಗಾರೆಡ್ಡಿ:– ದೆಹಲಿಯಲ್ಲಿ 7 ಪಾರ್ಲಿಮೆಂಟ್ ಸೀಟ್ ನಿಮ್ಮದೆ ಇದೆ.

ಶ್ರೀ ಜಗದೀಶ್ ಶೆಟ್ಟರ್:– ನೀವು ಹೇಳುವುದು correct ಇದೆ. ಆದರೆ, ಕಳೆದ ಸಾರಿ ನಮಗೆ 33% vote ಇತ್ತು. ಈ ಸಾರಿ ಕೂಡ ಆ voteಗಳು ಇವತ್ತೂ ಕೂಡ ಬಿದ್ದಿವೆ. 33% voteಗೆ ನಮಗೇನು ಧಕ್ಕೆ ಆಗಿಲ್ಲ.

ಶ್ರೀ ಕೆ.ಆರ್. ರಮೇಶ್ ಕುಮಾರ್:– ಮಾನ್ಯ ಜಗದೀಶ್ ಶೆಟ್ಟರ್‌ರವರೇ, ಪರ್ಸೆಂಟೇಜ್ ಅನ್ನು calculatre ಮಾಡುವುದಿಲ್ಲ. ನಿಮ್ಮ ಮೀಸೆ ಸೈಜ್ ಎಷ್ಟು ಎಂದು ಕೇಳುತ್ತಾರೆಯೋ ಅಥವಾ ಮಕ್ಕಳು ಎಷ್ಟೆಂದು ಕೇಳುತ್ತಾರೆಯೋ? ತಾವು ಏನು ಮಾತನಾಡುತ್ತೀರಿ? ಇವತ್ತಿನದಿವಸ ನಿಮ್ಮ ಪರ್ಸೆಂಟೇಜ್ ಕೇಳುತ್ತಾರೆಯೋ ಅಥವಾ ನಿಮ್ಮ ಸೀಟ್ ಎಷ್ಟೆಂದು ಕೇಳುತ್ತಾರೆಯೋ ಹೇಳಿ?

ಶ್ರೀ ಎಂ. ಸತೀಶ್ ರೆಡ್ಡಿ:– ನಮ್ಮದನ್ನು ನೋಡಿ ನಗುವುದಕ್ಕಿಂಥ ಮೊದಲು ನಿಮ್ಮದನ್ನು ನೋಡಿ ನಗಿ. ಏಕೆಂದರೆ, ನಿಮ್ಮ ರಿಜಲ್ಟ್ ಶೂನ್ಯವಾಗಿದೆ. ಆನಂತರ ನಮ್ಮನ್ನು ನೋಡಿ ನಗಿ.

ಶ್ರೀ ಆರ್. ಅಶೋಕ್:– ಇಲ್ಲಿ ನಮ್ಮದು ಮತ್ತು ಜೆಡಿಎಸ್ ನವರದ್ದು 40:40 ಬಂದು tie-up ಆದಾಗ ಪರ್ಸೆಂಟೇಜ್ ಅನ್ನು ನೋಡಿ ಜೆ.ಡಿ.(ಎಸ್)ನವರಿಗೆ ವಿರೋಧಪಕ್ಷ ಸ್ಥಾನವನ್ನು ಕೊಡಲಾಗಿತ್ತು. ಆದ್ದರಿಂದ, ಅದು ಸಹ ಬಹಳ ಮುಖ್ಯ. ಅದೂ ಸಹ base ಆಗಿರುತ್ತದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್:– ಮಾನ್ಯ ಜಗದೀಶ್ ಶೆಟ್ಟರ್‌ರವರೇ, ದೆಹಲಿಯಲ್ಲಿ ನಮಗೂ ನಿಮಗೂ difference ಏನೆಂದರೆ, ನಿಮ್ಮನ್ನು reject ಮಾಡಿದ್ದಾರೆ. ನಮಗೆ alternatıve treat ಮಾಡಿದ್ದಾರೆ. ಆದರೆ, ನಿಮ್ಮನ್ನು ಬೇಡವೇ ಬೇಡ ಎಂದು ಹೇಳಿದ್ದಾರೆ. ಆದರೆ, ನಮ್ಮ ವೋಟು ಅಲ್ಲಿಗೆ ಶಿಫ್ಟ್ ಆಗಿ ನೀವು ರೆಸ್ಟ್ ತೆಗೆದುಕೊಳ್ಳಿ ಎಂದು ಮಾಡಿದ್ದಾರೆ. ಅಂದರೆ, ನೀವು ಈ ದೇಶಕ್ಕೆ ಎಷ್ಟು ದಿವಸ ಎಂದು ದುಡಿಯುತ್ತೀರಿ, ಕೆಲಸ ಮಾಡುತ್ತೀರೆಂದು ಯೋಚನೆ ಮಾಡಿ ನೀವು ರೆಸ್ಟ್ ತೆಗೆದುಕೊಳ್ಳಿ ಎಂದು ಮಾಡಿದ್ದಾರೆ.

ಶ್ರೀ ಆರ್. ಅಶೋಕ್:– ಮಾನ್ಯ ರಮೇಶ್ ಕುಮಾರ್‌ರವರೇ, ಇದು ದೇಶಕ್ಕೆಲ್ಲಾ ಅಪ್ಲೈ ಆಗುತ್ತದೆಯೇ? ನಿಮ್ಮ ಕಾಂಗ್ರೆಸ್ ವೋಟ್ ಅನ್ನು ಎಲ್ಲಾ

ಕಡೆ ಶಿಫ್ಟ್ ಮಾಡುತ್ತೀರಾ? ಈ ರೀತಿಯಾಗಿ ಮಾಡುವುದಕ್ಕೆ ಕಾಂಗ್ರೆಸ್‌ನಲ್ಲಿ ಏನಾದರೂ resolution ಏನಾದರೂ ಆಗಿದೆಯೇ?

ಶ್ರೀ ಕೆ.ಆರ್. ರಮೇಶ್ ಕುಮಾರ್:- ಇದು rotationನಲ್ಲಿ ಆಗುತ್ತದೆ. ಕೆಲವು ಕಡೆ ನಿಮ್ಮ turn ಮತ್ತೆ ಕೆಲವು ಕಡೆ ನಮ್ಮ turn ಬರುತ್ತದೆ. ಆದ್ದರಿಂದ, ಅದರ ಬಗ್ಗೆ ಏಕೆ ಚಿಂತೆ ಮಾಡುತ್ತೀರಿ? Anyway, one thing is certain; peoples' power is ultimate in parliament. ನೆಹರುರವರ ಕಾಲಕ್ಕಿಂಥ ಹೆಚ್ಚು ಸೀಟ್ ಅನ್ನು 1971 ನೇ ಇಸವಿಯಲ್ಲಿ ಶ್ರೀಮತಿ ಇಂದಿರಾಗಾಂಧಿಯವರು ತೆಗೆದುಕೊಂಡಾಗ ಲೋಕಸಭೆಯಲ್ಲಿ ಅಟಲ್ ಬಿಹಾರಿ ವಾಜಪೇಯಿರವರು ನೀನು ದುರ್ಗಾ ಎಂದು ಹೇಳಿದರು. 1977ನೇ ಇಸವಿಯಲ್ಲಿ ಶ್ರೀಮತಿ ಇಂದಿರಾಗಾಂಧಿಯವರು ಮತ್ತು ಮಾನ್ಯ ಸಂಜಯ್‌ಗಾಂಧಿ ಇಬ್ಬರು ಲೋಕಸಭೆಯಲ್ಲಿ ಗೆಲ್ಲುವುದಕ್ಕೆ ಆಗಲಿಲ್ಲ. ಈ specialty ನಿಮ್ಮದು ಅಲ್ಲ, ನಮ್ಮದು ಸಹ ಅಲ್ಲ. ಜನರು ಯಾವಾಗ ಏನು ತೀರ್ಮಾನ ತೆಗೆದುಕೊಳ್ಳುತ್ತಾರೆಂದು ಗೊತ್ತಾಗುವುದಿಲ್ಲ. ಈ ವಿಷಯಕ್ಕೆ ನಿಧಾನಕ್ಕೆ ಬರುತ್ತೇನೆ. Governor's address ಮೇಲೆ ಈ ಸಭೆ ಒಂದು ನಿರ್ಣಯವನ್ನು ಮಂಡಿಸುತ್ತದೆ. ಅವರು ಇಲ್ಲಿಗೆ ಬಂದು ನಮ್ಮನ್ನು ಉದ್ದೇಶಿಸಿ ಜಂಟಿ ಸದನಕ್ಕೆ ಭಾಷಣ ಮಾಡುತ್ತಾರೆ. ನಾವು ಅವರಿಗೆ ವಂದನೆ ಸಲ್ಲಿಸತಕ್ಕಂಥದ್ದು ಒಂದು ಪದ್ಧತಿಯಾಗಿದೆ. ನಮಗೆ ಸಂಸದೀಯ ಪ್ರಜಾಪ್ರಭುತ್ವದಲ್ಲಿ England is the mother of Parliament. U.K. ಅಲ್ಲಿ ಇದು ಯಾವಾಗ ಪ್ರಾರಂಭವಾಯಿತ್ತೆಂದರೆ, ಅಲ್ಲಿನ ಜನ ರೊಚ್ಚಗೆದ್ದು ಗಲಾಟೆ ಮಾಡಿ ರಾಜರ ವಿರುದ್ಧ ತಿರುಗಿ ಬಿದ್ದಾಗ ಆ ಬಗ್ಗೆ ಸಂದಾನ ಮತ್ತು ಚರ್ಚೆ ಮಾಡುವ ಉದ್ದೇಶದಿಂದ ಪಾರ್ಲಿಮೆಂಟ್ ಅಸ್ತಿತ್ವಕ್ಕೆ ಬಂದ ಮೇಲೆ last evidence history ಪ್ರಕಾರ 1642 ನೇ ಇಸವಿಯಲ್ಲಿ Charles I ರಾಜನಾಗಿದ್ದಾಗ, he was the last King to enter the House of Commons. ಐದು ಜನರನ್ನು ಅರೆಸ್ಟ್ ಮಾಡಬೇಕೆಂದು ತಾನೇ ನುಗ್ಗುತ್ತಾನೆ. ಅದಾದ ನಂತರ ಎಂದೂ ಕೂಡಾ ರಾಜವಂಶದವರು ನೇರವಾಗಿ ಹೌಸ್‌ಗೆ enter ಆಗಲಿಲ್ಲ. ಆ ಮೇಲೆ ಈ ರೀತಿಯಾದ ಪದ್ಧತಿಯನ್ನು ರೂಪಿಸಲಾಯಿತು. ಬಕ್ಕಿಂಗ್‌ಹ್ಯಾಂ

ಪ್ಯಾಲೇಸ್‌ನಿಂದ ರಾಣಿ ಮತ್ತು ಅವರ ಜೊತೆಗೆ Duke of Edinburgh, ಇವರೆಲ್ಲರೂ ಸಾರೋಟಿನಲ್ಲಿ ಅಲ್ಲಿಗೆ ಬರಬೇಕು. ಅದು, it used to be a very costly programme. ಆ ನಂತರ Common Weallth Contriesಗಳು ಈ ಪದ್ಧತಿಯನ್ನು borrow ಮಾಡಿಕೊಂಡವು. ಇಂಡಿಯಾ ದೇಶದಲ್ಲಿ Government of India Act ಪ್ರಕಾರ 1919ರಲ್ಲಿ Central Legislative Assembly ಮೊದಲು ಅಸ್ಥಿತ್ವಕ್ಕೆ ಬಂತು. 1919 ರಿಂದ 1938 ನೇ ಇಸವಿಯವರೆಗೆ ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ಪ್ರತಿನಿದಿಯಾಗಿ ಇಲ್ಲಿದ್ದಂಥ Governor General ರವರು ಬಂದು Central Legislative Assemblyಯನ್ನು ಉದ್ದೇಶಿಸಿ ಭಾಷಣ ಮಾಡುತ್ತಿದ್ದರು. ಆದರೆ, Government of India Act ನಲ್ಲಿ ಇದಕ್ಕೆ provision ಇರಲಿಲ್ಲ. ಆದರೆ, ಅದು practice, it is a convention. ಅದು ಹಾಗೆಯೇ ಮುಂದುವರಿಯುತ್ತದೆ. 1947ರಲ್ಲಿ ನಮಗೆ ಸ್ವಾತಂತ್ರ್ಯ ಬಂತು. 1947 ರಿಂದ 1950 ರವರೆಗೆ ಮೂರು ವರ್ಷಗಳ ಕಾಲ Constituent Assembly ಇದ್ದಾಗ there was no address. For three years when we were a Constituent Assembly, drafting our own Constitution, there was no address. So the first address began in 1950. ಎಂಥ ಒಂದು ಮುಜುಗರದ ಸನ್ನಿವೇಶ ಎಂದರೆ ಅಲ್ಲಿ ಗೌರವದ ಸಂಕೇತವಾಗಿ ರಾಜನನ್ನು ನಿರ್ಬಂಧಿಸುತ್ತಾರೆ. ರಾಜತ್ವದ ಪ್ರಭಾವವನ್ನು ಕಡಿಮೆ ಮಾಡುತ್ತಾರೆ. ತಮ್ಮನ್ನು ತಾವೇ ಆಳ್ವಿಕೆ ಮಾಡುತ್ತಾರೆ. ಆದರೆ ಅವರನ್ನು ಗೌರವವಾಗಿ ಕಾಣುತ್ತಾರೆ. ಇಲ್ಲಿ ಗಣರಾಜ್ಯದ ಒಕ್ಕೂಟದ ಸಾರ್ವಭೌಮನಾಗಿ ರಾಷ್ಟ್ರಪತಿ ಪಾರ್ಲಿಮೆಂಟ್ ಅನ್ನು ಮತ್ತು ಅವರ ಪ್ರತಿನಿಧಿಯಾಗಿ ಅಂದರೆ, ಸಂವಿಧಾನದ ಪ್ರತಿನಿಧಿಯಾಗಿ ರಾಜ್ಯಪಾಲರು ಇಲ್ಲಿ ಭಾಷಣ ಮಾಡುತ್ತಾರೆ. It is a policy statement. ರಾಜ್ಯಪಾಲರ ಭಾಷಣ ಮತ್ತು ರಾಷ್ಟ್ರಪತಿಗಳ ಭಾಷಣ ಆಗದೆ, ಒಂದು ವರ್ಷದ ಪಾರ್ಲಿಮೆಂಟ್‌ನ ಚಟುವಟಿಕೆಗಳು ಪ್ರಾರಂಭವಾಗುವಂತಿಲ್ಲ. ಅದಕ್ಕೆ May's Parliamentary Practice ನಲ್ಲಿ it is called "Opening of the Parliament". ನಮ್ಮಲ್ಲಿಯೂ ಸಹ 2015 ನೇ ಇಸವಿ ಪ್ರಾರಂಭವಾದರೂ ರಾಜ್ಯಪಾಲರ ಭಾಷಣ ಆಗುವವರೆಗೂ ನಮ್ಮ ಯಾವುದೇ ಚಟುವಟುಕೆಗಳು

ಇರಲಿಲ್ಲ. ಆದರೆ, ಈ ವರ್ಷಕ್ಕೆ ಯಾವ ಸರ್ಕಾರ ಇಲ್ಲಿ ಆಳ್ವಿಕೆ ನಡೆಸುತ್ತಿರುತ್ತಾರೆಯೋ ಅವರು ತಮ್ಮ ಉದ್ದೇಶಗಳನ್ನು, ಸಾಧನೆಗಳನ್ನು, ಆಲೋಚನೆಗಳನ್ನು ರಾಜ್ಯಪಾಲರು ಅಥವಾ ರಾಷ್ಟ್ರಪತಿಗಳ ಮುಖಾಂತರ as the case may be ಸಾದರಪಡಿಸಬೇಕು. ಆದರೆ, ಇದು ತನ್ನ ಗಾಂಭೀರ್ಯವನ್ನು ಕಳೆದುಕೊಂಡಿತು. ಕೆಲವು ಕಡೆ protest, ಕೆಲವು ಕಡೆ ಚೀರಾಟ, ಕೆಲವು ರಾಜ್ಯದಲ್ಲಿ ಎದ್ದು ಹೋಗುವುದು, ಮಾತನಾಡುವುದಕ್ಕೆ ಬಿಡದೆ ಇರುವುದು ಹಾಗೆಯೇ ರಾಜ್ಯಪಾಲರ ಕಡೆಯಿಂದ ಏನು ಬೇಕೋ ಅದನ್ನು ಹೇಳಿಸುವಂಥದ್ದು ಆಗುತ್ತಿದೆ. Governor ಏನೆಂದು ಭಾಷಣ ಪ್ರಾರಂಭ ಮಾಡುತ್ತಾರೆಂದರೆ, “My Government’ ಎಂದು first person, ಪ್ರಥಮ ವಚನದಲ್ಲಿ ಪ್ರಾರಂಭ ಮಾಡುತ್ತಾರೆ. ಆದರೆ, ಉತ್ತರವನ್ನು Governor ಕೊಡುತ್ತಾರೆಯೇ? ಕೊಡುವುದಿಲ್ಲ. Government Governorದ್ದು, ಆದರೆ, ಉತ್ತರವನ್ನು ಇವರು ಕೊಡಬೇಕು. ಭಾಷಣ Governor ಬರೆದುಕೊಂಡು ಬಂದು ಓದಬಹುದೇ? ಬರೆದುಕೊಂಡು ಬಂದು ಓದುವಂತಿಲ್ಲ. ಇವರು ಬರೆದು ಕೊಟ್ಟಿದ್ದನ್ನು ಅವರು ಓದಬೇಕು. ನಿನ್ನೆ ಕುಮಾರಸ್ವಾಮಿಯವರು ಮಾತನಾಡುವಾಗ Governor ಹತ್ತಿರಕ್ಕೆ ಹೋದರು. ಹಿಂದಿನ Governor ಅದು ಇದು ಎಂದು ಹೇಳಿದರು. ನಾನು ಅವರು ಮಾತನಾಡಬಹುದು ಎಂದು ನಿರೀಕ್ಷೆ ಮಾಡಿದೆ, ಅವರು ಏನು ಹೇಳಲಿಲ್ಲ. Governor ನಡವಳಿಕೆಯನ್ನು, ಇನ್ನೊಂದು ಮತ್ತೊಂದನ್ನು ನಾವು ಟೀಕೆ ಮಾಡುವುದಕ್ಕೆ ಆಗುವುದಿಲ್ಲ. But, ಎಡವಿದಾಗ ಸಂವಿಧಾನಕ್ಕೆ ಅಪಚಾರದ ಕೆಲಸ ಅವರಿಂದ ಆದಾಗ ನಾವು we can deliberate upon. ಸಂವಿಧಾನದಲ್ಲಿ ಅದಕ್ಕೆ provision ಇದೆ. Anyway we have traveled this far. ಮೊದಲನೆಯ ಬಾರಿಗೆ ಕರ್ನಾಟಕದಲ್ಲಿ ಹಿಂದಿಯಲ್ಲಿ ಭಾಷಣ ಮಾಡಿದರು. ಬಹುಶಃ ವಾಟಾಳ್ ನಾಗರಾಜ್‌ರವರು ಈ ಸದನದಲ್ಲಿ ಇದ್ದಿದ್ದರೆ ಅಥವಾ ರಾಜಕೀಯ ಒಂದು ಹೊಂದಾಣಿಕೆಗಳು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದಲ್ಲಿ ಸ್ವಲ್ಪ ವ್ಯತ್ಯಾಸಗಳು ಇದ್ದಿದ್ದರೆ ಸುಮಾರು ಗದ್ದಲವಾಗುತ್ತಿತ್ತು. ಅವರು ಅವರಿಗೆ Governor ಎಂದು ತಿಳಿದುಕೊಂಡಿದ್ದಾರೆ. ಅವರು ಈ ರಾಜ್ಯದ Governor.

ಅವರು silent ಆಗಿ ಇರಬೇಕಾಗುತ್ತದೆ, ಸರ್ಕಾರದವರು ಗಲಾಟೆ ಮಾಡುವಂತಿಲ್ಲ ಇವರು silent ಆಗಿ ಇರಬೇಕಾಗುತ್ತದೆ. ಆದರೆ ಹಿಂದಿಯಲ್ಲಿ ಮಾತನಾಡುವುದಕ್ಕೆ ನಮ್ಮ ಸಂವಿಧಾನದಲ್ಲಿ ಅವಕಾಶವಿದೆ, ಮಾತನಾಡಬಹುದು. ಹಿಂದಿ ರಾಷ್ಟ್ರ ಭಾಷೆ, ತಪ್ಪೇನಿಲ್ಲ. ಆದರೆ on these matters ನಾವು ಹೇಗೆ react ಮಾಡುತ್ತೇವೆ ಎನ್ನತಕ್ಕಂಥದ್ದನ್ನು I am just mentioning ಅಷ್ಟೆ. ನಮಗೆ 1880 ರಿಂದ Governor's address ಯಾವ ರೀತಿ ಮಾಡಬೇಕೆಂದು references ಇದೆ. ಎರಡಡು ಸಂದರ್ಭದಲ್ಲಿ ಮಾತ್ರ queen ಬರುವುದಕ್ಕಾಗುವುದಿಲ್ಲ. ಅವರ ಪರವಾಗಿ ಅವರ Emissaries ಬಂದು ಭಾಷಣ ಮಾಡಿ ಹೋಗುತ್ತಾರೆ. ಒಂದು ಸಲ West Bengal ನಲ್ಲಿ ಒಂದು ದೊಡ್ಡ ಗಲಾಟೆ ಆಯಿತು. Whether the proceedings should be taken congnizance or not ಎಂದು Supreme Court ಗೆ ಹೋದರು. ಆಮೇಲೆ Supreme Court took a decision about that. Governorರವರ ಭಾಷಣದ ಮೇಲೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ್ದಾರೆ, ಹೆಚ್.ಡಿ. ಕುಮಾರಸ್ವಾಮಿಯವರು ಮಾತನಾಡಿದ್ದಾರೆ. ಈ ಕಡೆ ಕೆಲವರು ಮಾತನಾಡಿ ಅನ್ನಭಾಗ್ಯ, ಹಾಲಿನ ಭಾಗ್ಯ ಏನೇನು ಎನ್ನುವುದನ್ನು ಇವರೆಲ್ಲಾ ಹೇಳಿದ್ದಾರೆ. ಅದಕ್ಕಾಗಿ ನಾನು I changed the track. ಈ ಕಡೆ ಇರುವುದರಿಂದ ಅನಿವಾರ್ಯವಾಗಿ ನಾವು ಒಂದೆರಡು ಮಾತು ಹೊಗಳುವುದು. ನೀವು ಒಂದೆರಡು ಮಾತು ಸರಿಯಿಲ್ಲವೆಂದು ಹೇಳುವುದು. ನಿರ್ಣಯವನ್ನು ಪಾಸ್ ಮಾಡಿಕೊಂಡು ಹೋಗುವುದು ಅಷ್ಟೆ ಆಗಬಾರದು. ಮಾಹಿತಿ ಎಲ್ಲಾ ಇರಲಿ ನಮ್ಮ ಸಮಸ್ಯೆಗೆ ಎಲ್ಲವು ತಿಳಿದುಕೊಂಡಿರುತ್ತಾರೆ. ನನಗೇನೋ ಒಂದು anxiety, ಹಂಚಿಕೊಳ್ಳಬೇಕೆಂದು ಪ್ರಯತ್ನವನ್ನು ಮಾಡುತ್ತಿದ್ದೇನೆ. ನಮ್ಮಲ್ಲಿ ಕೆಲವು ಪ್ರಮುಖ ವಿಚಾರಗಳನ್ನು ವಿರೋಧ ಪಕ್ಷದ ನಾಯಕರು ಮಾತನಾಡಿದ್ದಾರೆ. ಅವರು ಮಾತನಾಡುವಾಗ ಇನ್ನು ಹೆಚ್ಚು ರಭಸ ಇರುತ್ತದೆಂದು ನಿರೀಕ್ಷೆ ಮಾಡಿದ್ದೆ. ಮಾನ್ಯ ಹೆಚ್.ಡಿ. ಕುಮಾರಸ್ವಾಮಿಯವರು ಬಂದರು. ನನಗೆ ಅವರು definite ಬಂದೆ ಬರುತ್ತಾರೆಂದು ನಮ್ಮಿಬ್ಬರಲ್ಲಿ ಆ understanding ಇದೆ. ಅವರು ಮಾತನಾಡಿದರೆ ನಾನು absent ಆಗುವುದಿಲ್ಲ,

ನಾನು ಮಾತನಾಡಿದರೆ ಅವರು absent ಆಗುವುದಿಲ್ಲ. ಹೆಚ್.ಡಿ. ಕುಮಮಾರಸ್ವಾಮಿಯವರೆ, ನೀವು ಬಂದೆ ಬರುತ್ತೀರೆಂದು ನನಗೆ ವಿಶ್ವಾಸ.

ಶ್ರೀ ಕೆ.ಎಸ್. ಪುಟ್ಟಟಣ್ಣಯ್ಯ:- Understanding ಅಂದರೆ ಯಾವ ತರಹ ಎನ್ನುವುದನ್ನು explain ಮಾಡಬೇಕು. ಯಾವ ತರಹ ಹೊಂದಾಣಿಕೆ ಎಂದು ಅಷ್ಟೆ.

ಶ್ರೀ ಎನ್.ಹೆಚ್. ಕೋನರೆಡ್ಡಿ:- ಸರ್ ಏನಾದರೂ ರಾಜಯೋಗ ಇದೆಯಾ? ನಿಮಗೆ ಯಾವದಾದರೂ ರಾಜಯೋಗ ಇದ್ದಂತೆ ಇಲ್ಲ.

(ಗೊಂದಲ)

ಶ್ರೀ ಕೆ.ಆರ್. ರಮೇಶ್ ಕುಮಾರ್:- ಪುನಃ ಏನು ಸೇರುತ್ತೀರಿ, ಇವತ್ತಿನ ದೆಹಲಿ ಪರಿಸ್ಥಿತಿ ನೋಡಿದರೆ ಗೊತ್ತಾಗುವುದಿಲ್ಲವೇ? ದೆಹಲಿ ಪರಿಸ್ಥಿತಿ ನೋಡಿದರೆ ಆ ಕಡೆ ಈ ಕಡೆ ಇರುವವರು ಎಲ್ಲರೂ ಇವತ್ತು ಸೇರಬೇಕಾಗುತ್ತದೆ. ವಿರೋಧ ಪಕ್ಷದ ನಾಯಕರು ಕೆಲವು fundamental issues ಗೆ ಹೋಗುತ್ತಾರೋ ಏನೋ ಎಂದು ನಾನು ನಿರೀಕ್ಷೆ ಮಾಡಿದ್ದೆ. ಇವರು ಬಹಳ ಚಿಕ್ಕ ವಯಸ್ಸಿನಲ್ಲಿಯೇ ಮುಖ್ಯಮಂತ್ರಿಗಳಾದರು. ಹೆಚ್.ಡಿ. ಕುಮಾರಸ್ವಾಮಿಯವರಿಗೂ ಚಿಕ್ಕ ವಯಸ್ಸಿನಲ್ಲಿ ಮುಖ್ಯಮಂತ್ರಿಯಾಗುವ ಒಂದು ಅವಕಾಶ ಸಿಕ್ಕಿತು. ಅವರಿಗೆ humility ಅವರಿಗೆ ಅನುಭವದ ಕೊರತೆ ಇತ್ತು. ಕೆಲವು ನನ್ನಿಂದ mistakes ಆಗಿರಬಹುದು ಅದನ್ನು ಒಪ್ಪಿಕೊಳ್ಳಬೇಕಾದರೆ ಮನುಷ್ಯನಿಗೆ ಬಹಳ ದೊಡ್ಡತನ ಬೇಕು. I really admire him. Chief Minister ಆಗಬೇಕೆಂದು ಒಂದು ಕನಸು ಕಾಣಬೇಕು ಎನ್ನುವುದು ತಪ್ಪೇನಲ್ಲ. ಅರ್ಹತೆ ಇದ್ದವರು Chief Minister ಆಗಬೇಕೆಂದು ಪ್ರಯತ್ನ ಮಾಡಿದವರು ಅನೇಕ ಜನರಿಗೆ ಈ ರಾಜ್ಯದಲ್ಲಿ ಅವಕಾಶವೇ ಸಿಗಲಿಲ್ಲ. ಕೆ.ಹೆಚ್. ಪಾಟೀಲ್‌ರಿಗೆ ಅವಕಾಶ ಸಿಕ್ಕಲಿಲ್ಲ, ಸಿದ್ದವೀರಪ್ಪನವರಿಗೂ ಅವಕಾಶ ಸಿಕ್ಕಲಿಲ್ಲ. ಬಸವಲಿಂಗಪ್ಪನವರು, ಕೆ.ಹೆಚ್. ರಂಗನಾಥವರು, ಖರ್ಗೆಯವರು, ಇನ್ನು ಅನೇಕ ಜನರಿಗೆ ಅವಕಾಶ ಸಿಕ್ಕಲಿಲ್ಲ. ನಿಮ್ಮಲ್ಲಿ ಕೂಡ ಬಹಳ ಜನ ಇದ್ದರು. ಇದಕ್ಕೆ empanelling ಎಂದು ಹೇಳುತ್ತಾರೆ. ಯಾರ್‍ಯಾರೆಲ್ಲಾ Chief

Ministershipಗೆ probable candidates empanel ಆಗಿದ್ದರು ಅವರ names delete ಆಗಿ ಬಿಟ್ಟಿತು. ಅವರು vive voce ಗೆ ಬರಲಿಲ್ಲ. ಇವರು ಎಲ್ಲಿದ್ದರೋ ಏನೋ sudden ಆಗಿ emerge ಆಗಿಯೇ ಬಿಟ್ಟರು. Sir Virendra Patil was very young when he became the Chief Minister. ಅವರು ಎರಡನೆಯ ಬಾರಿ Chief Minister ಆಗಿ ಕಾಯಿಲೆ ಬಿದ್ದು ಮನೆಯಲ್ಲಿದ್ದಾಗ ದಿ:ಜೆ.ಹೆಚ್. ಪಟೇಲರು, ವಾಟಾಳ ನಾಜರಾಜ್ ಮತ್ತು ನಾನು ಒಂದು ಕಾರ್ಯಕ್ರಮದ invitation ಕೊಡುವುದಕ್ಕೆ Legislature ಪರವಾಗಿ ಅವರ ಮನೆಗೆ ಹೋಗಿದ್ದೆವು. ಪಾಪ ಅವತ್ತು ಅವರು ಒಂದು ಮಾತು ಹೇಳಿದರು. ಈ ಸಣ್ಣ ವಯಸ್ಸಿನಲ್ಲಿ Chief Minister ಆಗುವುದು ಬಹಳ ಅಪಾಯ ಪಾಟೀಲರೆ ಎಂದು. ಏಕೆಂದರೆ, ಉಳಿದ ಆಯಸ್ಸು ಎಲ್ಲಾ ನಾವು ಅದಕ್ಕೆ ಹೊಂದುಕೊಂಡೆ ಬದುಕಬೇಕಾಗುತ್ತದೆ. ಅಧಿಕಾರ ಇರುವುದಿಲ್ಲ, ಅವಕಾಶ ಇರುವುದಿಲ್ಲ, ಜವಾಬ್ದಾರಿ ಇರುತ್ತದೆ. So, you are into that position. ಅವಕಾಶದಿಂದ ವಂಚಿತರಾದಂಥವರು ಬೇರೆ ಬೇರೆ ಕಾರಣಗಳು. They lost the opportunity. ಈ political gymnasticsನಲ್ಲಿ ಯಾರು ವಿಜೇತರಾಗುತ್ತಾರೋ ಯಾರು ಕಳೆದುಕೊಳ್ಳುತ್ತರೋ ನಮಗೆ ಗೊತ್ತಾಗುವುದಿಲ್ಲ. ಗೋಪಾಲಗೌಡರು Chief Minister ಆಗಲಿಲ್ಲ, Minister ಕೂಡ ಆಗಲಿಲ್ಲ. MLA ಕೂಡ ಬಹಳ term ಆಗಲಿಲ್ಲ. ಪ್ರೋ: ನಂಜುಂಡಸ್ವಾಮಿಯವರು ಒಂದೇ term. ಚರಿತ್ರೆ ಏನಾದರೂ ಅವರನ್ನು ಬಿಟ್ಟು ಬರೆಯುವುದಕ್ಕೆ ಆಗುತ್ತದೆಯಾ? ಸಾಧ್ಯವೇ ಇಲ್ಲ. ಅಂದರೆ ಇದರ ಅರ್ಥ ನಾವು ಅವಕಾಶ ಇದ್ದಾಗ ಚರಿತ್ರೆಯ ಒಂದು ಭಾಗ ಆಗಬೇಕು. ಮಾನ್ಯ ದೇವೇಗೌಡರು Chief Minister ಆಗಿದ್ದರು, Prime Minister ಆಗಿದ್ದರು. ನನ್ನ ಪ್ರಕಾರ ಅವರ ರಾಜಕೀಯ ಜೀವನದ ಅತ್ಯಂತ ವೈಭವದ ದಿನಗಳು, ಹೆಮ್ಮೆಯ ದಿನಗಳು ಎಂದರೆ 1972 ರಿಂದ 1978 ರವರೆಗೆ ಕರ್ನಾಟಕ ವಿಧಾನಸಭೆಯ ವಿರೋಧ ಪಕ್ಷದ ನಾಯಕರಾಗಿದ್ದಾಗ ಹೊರತು ಉಳಿದ ದಿವಸಗಳು ಅಲ್ಲ. ದೇವೇಗೌಡರು ಎನ್ನುವವರು ಒಬ್ಬರು ಇದ್ದಾರೆ ಎನ್ನುವುದು ಈ ರಾಜ್ಯದ ಜನರಿಗೆ ಪರಿಚಯವಾದದ್ದೆ ಆಗ. ಆಗ ಒತ್ತಿದ ಚಾಪು ಹೋಗಲೇ ಇಲ್ಲ. ಉಳಿದದ್ದು ಅದರ ಮೇಲೆ ಬಂದ interest,

principal ಅದೆ. ಇವರು ಇಬ್ಬರು ನಿನ್ನೆ ನಾನು ಎಲ್ಲೋ ಒಂದು ಕಡೆ ಎಸ್. ಶಿವಪ್ಪನವರನ್ನೋ, ದೇವೇಗೌಡರನ್ನೋ ಹತ್ತಿರಕ್ಕೆ ಹೋಗುವ ಪ್ರಯತ್ನ ಮಾಡುತ್ತಾರೇನೋ ಎನ್ನುವ ಆಸೆ ಇಟ್ಟುಕೊಂಡಿದ್ದೆ. ಮಾನ್ಯ ಸಿದ್ದರಾಮಯ್ಯನವರು ಸಾಕಷ್ಟು ಭಯ ಬೀಳುತ್ತಾರೆ ಅವರಿಗೆ ಚಳಿಜ್ವರ ಬರುತ್ತದೆಂದು ನಾನು expect ಮಾಡಿದೆ. ಆ ತರಹ ಏನೂ ಕಾಣಲಿಲ್ಲ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಮಾನ್ಯ ಉಪಾಧ್ಯಕ್ಷರೆ, ಅರ್ಕಾವತಿ ವಿಷಯ sub-judice ಎನ್ನತಕ್ಕಂಥದ್ದು ಮುಖ್ಯಮಂತ್ರಿಗಳು raise ಮಾಡಿದರು. ಅವರು raise ಮಾಡದೆ ಆ ಒಂದು ಕಾರಣ ಕೊಟ್ಟು ನಾನು ಮಾತನಾಡತಕ್ಕಂಥದದಕ್ಕೆ ಅವಕಾಶ ತಪ್ಪಿಸದೆ ಹೋಗಿದ್ದರೆ ಬಹುಶಃ ಈ issue ಒಳಗಡೆ ಸತ್ಯಾಂಶಗಳು ಏನಿತ್ತು ಅದನ್ನೆಲ್ಲಾ ಸದನದಲ್ಲಿಡುತ್ತಿದ್ದೆ. ಶ್ರೀ ಕೆಂಪಣ್ಣನವರ ಜುಡಿಷಿಯಲ್ ಆಯೋಗ ರಚನೆ ಆಗಿದೆ. ನಾನು ಅವರ ಬಗ್ಗೆ ಸಣ್ಣತನದಲ್ಲಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಸರ್ಕಾರ ಹೇಳಿದರಲ್ಲಾ ಒಂದೂವರೆ ಲಕ್ಷ ಪುಟಗಳನ್ನು ಕಳುಹಿಸುತ್ತೇವೆಂದು ಇನ್ನು ಹೋಗಿಲ್ಲವೆಂದು ಕೆಂಪಣ್ಣ ಆಯೋಗದವರು ಹೇಳಿದ್ದಾರೆಂದು ಪತ್ರಿಕೆಯಲ್ಲಿ ಇವತ್ತು ಇತ್ತು. ಅಲ್ಲಿ ಒಂದೂವರೆ ಲಕ್ಷ ಪುಟಗಳು ಬೇಕಾಗಿಯೇ ಇಲ್ಲ. ಒಂದು ರೀತಿ ಹೇಳಬೇಕೆಂದರೆ ಅಲ್ಲಿ ಒಂದೂವರೆ ಲಕ್ಷ ಪುಟಗಳು ಬೇಕಾಗಿಲ್ಲ. ಕೆಲವು ಪ್ರಮುಖವಾದಂತಹ ತೀರ್ಮಾನಗಳು ಏನಾಗಿವೆ ಅದರ ಬಗ್ಗೆ ಮಾತನಾಡಲು ಹತ್ತೇ ನಿಮಿಷ ಸಾಕಾಗಿತ್ತು. ಆದರೆ ಸತ್ಯಾಂಶಗಳು ಏನಿವೆ ಅದನ್ನು ಸದನದ ಮುಂದೆ ಇಟ್ಟುಬಿಟ್ಟಿದ್ದರೆ ಅದನ್ನು ಸದನ ಹತ್ತೇ ನಿಮಿಷದಲ್ಲಿ ತೀರ್ಮಾನ ಮಾಡಬಹುದಾಗಿತ್ತು. Even KPSC ವಿಷಯದಲ್ಲಿ ನಾನು Governorರವರನ್ನು refer ಮಾಡದೇ, ಯಾವುದೋ ಒಂದು ಅಮಾನತ್ತುಗೊಳಿಸಿದ್ದೀರಲ್ಲಾ, ಎಷ್ಟು immature ಎಂದರೆ, ಬಹುಶಃ ನಮ್ಮ ರಾಷ್ಟ್ರದಲ್ಲಿ Governor ರವರಂತಹ ಕಾನೂನಿನ ಪರಿಣತರು, ಅವರ ಎತ್ತರಕ್ಕೆ ಇದ್ದಂತಹವರು ಯಾರು ಇದ್ದ ಹಾಗೆ ಇಲ್ಲ. ಸರ್ಕಾರದಿಂದ recommend ಮಾಡಿ KPSC memberರವರನ್ನು ಅಮಾನತ್ತುಗೊಳಿಸಿದರಲ್ಲಾ, ಅವರು ತೆಗೆದುಕೊಂಡ ನಿರ್ಧಾರ ಬಹುಶಃ 'ಘನತೆವೆತ್ತ ರಾಜ್ಯಪಾಲರು' ಎಂದು ಇಲ್ಲಿ ಹೇಳುತ್ತೇವೆ, ಅವರನ್ನು ಯಾವ

ಮಟ್ಟಕ್ಕೆ ಇಳಿಸಿದರು ಎನ್ನುವುದಕ್ಕೆ ಹೇಳುತ್ತಿದ್ದೇನೆ. Application of mind ಎನ್ನುವುದನ್ನು ನಾವು ಸರ್ಕಾರದವರು ತೆಗೆದುಕೊಳ್ಳುವಂತಹ ನಿರ್ಧಾರಗಳ ಬಗ್ಗೆ, ಅಲ್ಲಿ ಅಠಾರ ಕಛೇರಿಯಿಂದ ನಮಗೇನು ಛಾಟಿ ಬೀಸುತ್ತಾರೆ, Governorರವರು ತೆಗೆದುಕೊಂಡಂತಹ ನಿರ್ಧಾರವನ್ನು ಅಠಾರ ಕಛೇರಿಯಲ್ಲಿರುವವರು ಎತ್ತಿಹಿಡಿಯುವುದು. ಆ ತೀರ್ಮಾನ ಕೊಟ್ಟಾಗ ಅವರು ಎಷ್ಟರ ಮಟ್ಟಿಗೆ application of mind ಅನ್ನು apply ಮಾಡಿಕೊಂಡರು? ಯಾವ ಮಟ್ಟಕ್ಕೆ ರಾಜ್ಯಪಾಲರಾದಂತಹವರು ಅವರ ಕೆಲಸ ನಿರ್ವಹಿಸಬೇಕಾದರೆ ನಡೆದುಕೊಂಡಿದ್ದಾರೆ, ಈಗ ತಾವು ಅದರ ಬಗ್ಗೆ ಏನು ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಿಕೊಂಡು ಕುಳಿತಿದ್ದೀರಿ ಅದನ್ನು ಹೇಳುವುದಕ್ಕೆ ಹೋದೆ. University Bill ತಂದಾಗ ಇವತ್ತು Vice Chancellor ರವರದ್ದು ಕಳೆದ ಐದು ವರ್ಷಗಳಲ್ಲಿ ಯಾವ್ಯಾವ ರೀತಿಯಲ್ಲಿ ನಡೆದುಕೊಂಡು ಹೋಗಿದೆ ಎಂದು ಹೇಳುತ್ತಿದ್ದರು. ಇವತ್ತು ಅವೆಲ್ಲಾ ಚರ್ಚೆಯಾಗಬೇಕೆನ್ನುವುದರಲ್ಲಿ ನಿಜಕ್ಕೂ ನೀವು ಏನು ಹೇಳುತ್ತಿದ್ದೀರಿ, ನಾನು ಮುಖ್ಯಮಂತ್ರಿಯಾಗಿದ್ದ 20 ತಿಂಗಳ ಸನ್ನಿವೇಶದಲ್ಲಿ ನನಗೆ ಕಡತಗಳನ್ನು ನೋಡುವುದಕ್ಕೆ ಸ್ವಲ್ಪ ಅನುಭವದ ಕೊರತೆ ಇತ್ತು ಎಂದು ನಾನೇ ಹೇಳಿದ್ದೆ. ಅದರಲ್ಲಿ ಸಣ್ಣಮಟ್ಟ ತಪ್ಪೂ ಮಾಡಿದ್ದೇನೆ ಎಂದು ಹೇಳಿದ್ದೇನೆ. ಇಲ್ಲಿ ಕೆಲಸ ಮಾಡಲು ಏನು ಪ್ರಾರಂಭ ಮಾಡಿದ್ದೇನೆ, ಬಹುಶಃ ತಾವು ಹೇಳಿದಂತಹ ರೀತಿಯಲ್ಲಿ ಈ ರಾಜ್ಯದ ಇತಿಹಾಸದಲ್ಲಿ ವಿರೋಧ ಪಕ್ಷದಲ್ಲಿ ಕೆಲಸ ಮಾಡಿರುವಂತಹ ಮಾನ್ಯ ಗೋಪಾಲಗೌಡರನ್ನು ನಾವು ನೆನಪಿಸಿಕೊಳ್ಳಬೇಕು. ಮಾನ್ಯ ರಮೇಶ್‌ಕುಮಾರ್‌ರವರು ಮಾತನಾಡುವಾಗ, 'ಮಾನ್ಯ ದೇವೇಗೌಡರ ಒಂದು ವೈಭವದ ದಿನಗಳು ಎಂದರೆ, ಅವರು ಮುಖ್ಯಮಂತ್ರಿಯಾಗಿಯೂ ಅಲ್ಲ, ಪ್ರಧಾನ ಮಂತ್ರಿಯಾಗಿಯೂ ಅಲ್ಲ' ಎನ್ನುವ ಮಾತನ್ನು ತಾವು ಏನು ಹೇಳಿದಿರಿ ಬಹುಶಃ ಈ ರಾಜ್ಯದಲ್ಲಿ ದೇವೇಗೌಡರನ್ನು ಸ್ಮರಿಸಿಕೊಂಡಂಥದ್ದು ಅವರ ರಾಜಕೀಯವನ್ನು ಗುರುತಿಸಿದ್ದು, ಈ ಜಾಗದಲ್ಲಿ ಕೂತು ಕೆಲಸ ಮಾಡಿದಾಗಲೆ. ಬಹುಶಃ ದೇವರಾಜ ಅರಸುರವರು ಮುಖ್ಯಮಂತ್ರಿಗಳಾಗಿ, ಇವರು ವಿರೋಧ ಪಕ್ಷದ ನಾಯಕರಾಗಿ ಆವತ್ತು ಏನು ಚರ್ಚೆಗಳಾಗುತ್ತಿತ್ತು,

ಆಗ ಘಟಾನುಘಟಿಗಳೇ ಇದ್ದರು. ಕೋಣಂದೂರು ಲಿಂಗಪ್ಪನವರು, ನಮ್ಮ ಕಾಗೋಡು ತಿಮ್ಮಪ್ಪನವರು, ಬಂಗಾರಪ್ಪನವರು ಈ ಭಾಗದಲ್ಲೇ ಇದ್ದರು. ಆವತ್ತಿನ ದಿನಗಳನ್ನು ಬಹುಶಃ ಮತ್ತೆ ನಾವು ನೋಡುತ್ತೇವೆಯೋ ಇಲ್ಲವೋ ಎಂದು ನಾವು ಹೋಗುತ್ತಿರುವ ಮಾರ್ಗ ನೋಡಿದರೆ ಎಲ್ಲೋ ಒಂದು ಕಡೆ ನಮಗೆ ವಿಶ್ವಾಸದ ಕೊರತೆ ಆಗುತ್ತಿದೆ. ನಾವು ಈ ಭಾಗದಲ್ಲಿ ಆ ಮಟ್ಟಕ್ಕೆ ಹೋಗಿ ಕೆಲಸ ಮಾಡಬೇಕೆನ್ನುವುದು ಮಾನ್ಯ ರಮೇಶ್‌ಕುಮಾರ್‌ರವರ ಭಾವನೆ ಏನಿದೆ ಅದಕ್ಕೆ ಪ್ರಯತ್ನ ಪಡುವುದಕ್ಕೆ ಸ್ವಲ್ಪ ಪ್ರಾರಂಭ ಮಾಡಿದ್ದೇನೆ. ಮಾತನಾಡಬೇಕು, ದೊಡ್ಡಮಟ್ಟದಲ್ಲಿ ಹೋಗಬೇಕೆನ್ನುವುದು ಎಲ್ಲೋ ಒಂದು ಕಡೆ ಪ್ರಾರಂಭವಾಗುತ್ತದೆ. ಮಾನ್ಯ ಮುಖ್ಯಮಂತ್ರಿಯವರ ಮುಖವನ್ನು ನೋಡಿದಾಗ ಎಲ್ಲೋ ಒಂದು ಕಡೆ ಕುಳಿತುಬಿಡುತ್ತೇವೆ ಎಂದು ತಾವು ಏನು ಹೇಳುತ್ತಿದ್ದೀರಿ. ನಿನ್ನೆ ನನಗೆ ಮಾತನಾಡಲು ಒಂದು ಚೂರು ಅವಕಾಶ ಕೊಟ್ಟಿದ್ದರೆ ಸತ್ಯಾಂಶಗಳು, ಅರ್ಕಾವತಿ ಕರ್ಮಕಾಂಡದ್ದು ಎಲ್ಲವನ್ನೂ ತರುತ್ತಿದ್ದೆ. ಆದರೆ sub–judice ಎಂದು ಇಟ್ಟುಕೊಂಡು, ನಾನು ಒಳಗಡೆ ಮಾನ್ಯ ಅಧ್ಯಕ್ಷರನ್ನು ಕೇಳಿಕೊಂಡೆ. ಅವರು ಡಿನೋಟಿಫಿಕೇಷನ್ ಬಗ್ಗೆ ಯಾವುದೇ ಕಾರಣಕ್ಕೂ ಸದನದಲ್ಲಿ ಚರ್ಚೆಗೆ ಅವಕಾಶ ಕೊಡುವುದಿಲ್ಲ ಎಂದು ಹೇಳಿದರು. ಮಾಧ್ಯಮ ಸ್ನೇಹಿತರು ಕುಮಾರಸ್ವಾಮಿಯವರು ಏನೋ ಜೋರು ಬಾಣ ಬಿಡುತ್ತಾರೆ ಎಂದು ಇದ್ದೆವು ಆದರೆ ಅವರು ಏನೋ ಸ್ವಲ್ಪ soft ಆದರು ಎನ್ನುವುದು ಬಂದಿತು. ಆದರೆ ಈ ಕಾರಣಗಳಿಂದ ನಿನ್ನೆ ನಾನು ಹಲವಾರು ವಿಷಯಗಳನ್ನು ಏನು ಪ್ರಸ್ತಾಪ ಮಾಡಬೇಕಾಗಿತ್ತು ಅದನ್ನು ಮಾಡುವುದಕ್ಕೆ ಆಗಲಿಲ್ಲ. ಮಾನ್ಯ ಮುಖ್ಯಮಂತ್ರಿಯವರು ರಾಜ್ಯಪಾಲರ ಭಾಷಣದ ಮೇಲೆ ಉತ್ತರ ಕೊಡುತ್ತಾರಲ್ಲಾ ಆಗ ಅವರಿಂದ clarification ತೆಗೆದುಕೊಳ್ಳಬೇಕಾದಂತಹ ಸಮಯ ಉಪಯೋಗ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್:– ಮಾನ್ಯ ಉಪಾಧ್ಯಕ್ಷರೆ, ಮೊದಲು telegrams ಇತ್ತು. Telegram ಬಂದಿರುವುದನ್ನು ಸರಿಯಾಗಿ ಓದಿದರೆ ಏನೂ ಅನಾಹುತ ಆಗುತ್ತಿರಲಿಲ್ಲ. ಒಬ್ಬರು ಸೇಠು ಅಜ್ಮೀರಕ್ಕೆ ಹೋಗುತ್ತಾರೆ. ಅವರು ಅವರ ಮನೆಗೆ 'ಸೇಟ್ ಅಜ್ಮೀರ್ ಗಯಾ' ಎಂದು telegram ಕಳುಹಿಸುತ್ತಾರೆ.

ಓದುವವನು ಯಾರೋ ನನ್ನವಂಥವನು 'ಸೇಠ್ ಆಜ್ ಮರ್‌ಗಯಾ' ಎಂದು ಹೇಳುತ್ತಾರೆ. ನನಗೆ ನಮ್ಮ ಮಾಧ್ಯಮದ ಸ್ನೇಹಿತರು ಗಂಟು ಬಿಟ್ಟಿದ್ದಾರೆ. ಇದು ಆಯಿತಲ್ಲವೇ ನಿಮ್ಮ ಮಧ್ಯೆ ಚಿಕ್ಕ exchange. ಇದನ್ನು ನಾಳೆಯೂ ಬೇಕಾದರೆ ಬರೆದುಬಿಡುತ್ತಾರೆ. ಮಾನ್ಯ ಹೆಚ್.ಡಿ. ಕುಮಾರಸ್ವಾಮಿಯವರು ಮಾತನಾಡದೇ ಸುಮ್ಮನೆ ಕುಳಿತಿದ್ದರು. ಆಡಳಿತ ಪಕ್ಷದ ರಮೇಶ್‌ಕುಮಾರ್‌ರವರೆ ಅವರಿಗೆ ಎತ್ತಿಕೊಟ್ಟರು ಎಂದು ಬರೆದುಬಿಡುತ್ತಾರೆ. ಅವರು ಹೇಳದೇ ಹೋದರೆ ಇಲ್ಲಿಂದಲೇ ಯಾರಾದರೂ ಕೆಲವರು ಹೇಳುವವರು ಇರುತ್ತಾರೆ. ಇಲ್ಲಿ ಏನಾಗಿದೆ ಎಂದರೆ, ಅಧಿಕಾರದಲ್ಲಿರುವವರನ್ನು ಓಲೈಸುವಂತಹವರು ಜಾಸ್ತಿ. ಮೊನ್ನೆ ಮಾನ್ಯ ಜಗದೀಶ್ ಶೆಟ್ಟರ್‌ರವರು ಮಾತನಾಡುತ್ತಿದ್ದರು. Mines ಬಗ್ಗೆ ಮಾತನಾಡುವಾಗ, ಯಾವ ಕಾರಣಕ್ಕೆ ಮಾಡಿರುತ್ತಾರೆ? Specific details ಅನ್ನು ಕೊಡಿ ನಾವು ತೆಗೆದುಕೊಳ್ಳುತ್ತೇವೆ ಎಂದು ಹೇಳಿದೆ. ಅದರ context ಬಿಟ್ಟುಬಿಟ್ಟರು. ನಾನು ಹೇಳಿದ ಕೆಲವು ಮಾತುಗಳನ್ನು ಮಾತ್ರ ಉಲ್ಲೇಖ ಮಾಡಿ ಟಿ.ವಿ.ಯಲ್ಲಿ ಅಲ್ಲಿಲ್ಲಿ ತೋರಿಸಿದರು. ಶನಿವಾರ, ಭಾನುವಾರದಂದು ಊರಿಗೆ ಹೋದೆವಾ, 'ನೀನು ಏಕಪ್ಪಾ ಸುಮ್ಮನಿರುವುದಿಲ್ಲ, ಏನಾದರೂ ಮಾತನಾಡಿ ಮೈ ಮೇಲೆ ಹಾಕಿಕೊಳ್ಳುತ್ತೀಯಲ್ಲಾ' ಎಂದು ಊರಿನ ಜನರು ಹೇಳುತ್ತಾರೆ. ಅವರಿಗೆ ಊರಿನ ಕೆಲಸ ಆಗಬೇಕು. It is so difficult. ನಮ್ಮ values, ನಮ್ಮ commitment, practical situations, ಇದಕ್ಕೆ ನೀವು ಏನು ಸಮಜಾಯಿಷಿ ಕೊಟ್ಟರೆ ನಾನು ಒಪ್ಪಿಕೊಳ್ಳುತ್ತೇನೆ. ನಮ್ಮ ಉದ್ದೇಶ ನಿಮ್ಮನ್ನು ಪ್ರೇರೇಪಿಸಿ ಮಾತನಾಡಿಸಬೇಕಾಗಿತ್ತು. I am at a larger issue. Political system devalue ಆಗಿದೆ. ನಾನು ಬಕಿಂಗ್‌ಹ್ಯಾಮ್ ಪ್ಯಾಲೇಸ್‌ನಿಂದ ಮಾತನಾಡುವುದನ್ನು start ಮಾಡಿಕೊಂಡು ಬಂದೆ. ಕಾಂಗ್ರೆಸ್‌ನಲ್ಲಿ 1950, 1957, 1962 ನೇ ಇಸವಿಯಲ್ಲಿ ಯಾರು leaders ಆಗಿದ್ದರು? ಭಾರತೀಯ ಜನಸಂಘದಲ್ಲಿ ಯಾರ್ಯಾರು ಇದ್ದರು? Communist party, Marxist party, ಆವಾಗ Marxist, CPI ಎಂದು ಇರಲಿಲ್ಲ it is all undivided communist party. Socialist partyಯಲ್ಲಿ ಯಾರ್ಯಾರು ಇದ್ದರು? ಎಲ್ಲಿಯ ಲೋಹಿಯಾ, ಎಲ್ಲಿಯ ಜಗನ್ನಾಥ್‌ರಾವ್ ಜೋಷಿ, ಎಲ್ಲಿಯ ದೀನದಯಾಳ್

ಉಪಾಧ್ಯಾಯರು, ಎಲ್ಲಿಯ ಶ್ಯಾಮಪ್ರಸಾದ್ ಮುಖರ್ಜಿ, ಎಲ್ಲಿಯ ಮೌಲಾನ್ ಅಬ್ದುಲ್ ಕಲಾಂ ಅಜಾದ್, ನೆಹರೂರವರು, ಮೀನುಮಸಾನಿಯವರು, ಪಿಲ್ಲುಮೋದಿಯವರು, ಹಿರಣ್ ಮುಖರ್ಜಿ, ಭೂಪೇಶ್ ಗುಪ್ತಾ. ಈಗ ನಾವೇ ಮಾತನಾಡಿಕೊಳ್ಳೋಣ. ಮಾನ್ಯ ಅಶೋಕ್‌ರವರೇ ದೀನ್‌ದಯಾಳ್ ಉಪಾಧ್ಯಾಯವರ ಹೆಸರು ಎಲ್ಲದ್ದಕ್ಕೂ ಇಡುತ್ತಿದ್ದೀರಿ. ನಿಮ್ಮ ಬಿ.ಜೆ.ಪಿಯಲ್ಲಿ ಎಷ್ಟು ಜನರಿಗೆ ದೀನ್‌ದಯಾಳ್ ಉಪಾಧ್ಯಾಯವರು ಯಾರು ಎನ್ನುವುದು ಗೊತ್ತಿದೆಯೇ? ನಿಮ್ಮಲ್ಲಿ ಅವರೂ ಗೊತ್ತಿಲ್ಲ. ನಮ್ಮಲ್ಲಿ ಗಾಂಧೀನಗರವೂ ಗೊತ್ತಿಲ್ಲ. ನಾವು ಗಿಡದ ಹೆಸರು ಹೇಳಿಕೊಂಡು ಕಾಯಿ ಮಾರಿಕೊಳ್ಳುವವರು. ಗಾಂಧಿಯಾದರೂ ಅಷ್ಟೆ, ಉಪಾಧ್ಯಾಯರು ಆದರೂ ಅಷ್ಟೆ, ವಾಜಪೇಯಿ ಆದರೂ ಅಷ್ಟೇ ಸಾರ್ ಎಲ್ಲಾ ಒಂದೇ trade ನಮ್ಮದು. Devalue ಆಗಿಬಿಟ್ಟಿದ್ದೇವೆ. That is what I was trying .... Sri Chalpathi Rao was the editors of National Herald. 1952 ರಲ್ಲಿ ನೆಹರೂವರು first election list ಅನ್ನು announce ಮಾಡುತ್ತಾರೆ. Constituent Assembly ಇನ್ನು ಸ್ವಲ್ಪ ದಿವಸ ನಡೆಸಬೇಕು. Interim Government ನಡೆಯಲಿ. Elections ಅನ್ನು ಬೇಗ ಮಾಡಬೇಡಿ country is not prepared ಎಂದು ಅವರ ಮೇಲೆ ಬಹಳ ಒತ್ತಡ ಇರುತ್ತದೆ. I Ad hoc Prime Minister ಆಗಿ ನಾನು ಇರುವುದಿಲ್ಲವೆಂದು ಅವರು election ಅನ್ನು declare ಮಾಡುತ್ತಾರೆ. ಮಾನ್ಯ ಪುಟ್ಟಣ್ಣಯ್ಯನವರೆ, 1952 ನೇ ಇಸವಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಪಟ್ಟಿಯನ್ನು ಅವರು ಪ್ರಕಟ ಮಾಡಿದಾಗ, ಛಲಪತಿರಾವ್ ಒಬ್ಬರು ಪತ್ರಿಕಾಕರ್ತ ನೆಹರೂರವರಿಗೆ, 'ನೆಹರೂರವರೆ ನಿಮ್ಮ ಕಾಂಗ್ರೆಸ್ ಪಟ್ಟಿಯಲ್ಲಿ ಕೆಲವರು ಭ್ರಷ್ಟರಿದ್ದಾರೆ' ಎಂದು ಹೇಳುತ್ತಾರೆ. ಅದಕ್ಕೆ ನೆಹರೂರವರು 'ನಾನು ತರಾತುರಿಯಲ್ಲಿ ಪಟ್ಟಿ ಮಾಡಿದ್ದೇನೆ, ಕೆಲವು ಅಚಾತುರ್ಯಗಳು ಆಗಿರಬಹುದು, ಈಗ ನಿಮ್ಮ ಎದುರಿನಲ್ಲಿಯೇ ನಿಮಮ್ಮ ಮುಖಾಂತರವೇ statement ಕೊಡುತ್ತೇನೆ. ಒಂದು ವೇಳೆ ಯಾರಾದರೂ ಭ್ರಷ್ಟರಿಗೆ ಕಾಂಗ್ರೆಸ್ ಟಿಕೆಟ್ ಕೊಟ್ಟಿದ್ದರೆ ದಯಮಾಡಿ ಅವರನ್ನು ಸೋಲಿಸಿ ಎಂದು ಜನರಿಗೆ appeal ಮಾಡುತ್ತೇನೆ' ಎಂದು ಉತ್ತರ ನೀಡುತ್ತಾರೆ. ಇದು ಇವತ್ತು ಸಾಧ್ಯವೇ? ತಾನೇ announce ಮಾಡಿ B-Form

ಕೊಟ್ಟು nomination ಹಾಕಿ ಎಂದು ಹೇಳಿರುವಂತಹ ಕಾಂಗ್ರೆಸ್ಸಿಗರನ್ನು ಒಬ್ಬ ಪ್ರಾಮಾಣಿಕ journalist suggest ಮಾಡಿದ ತಕ್ಷಣ ಅವರನ್ನು ಸೋಲಿಸಿ ಎಂದು ನಾನು ಜನರಿಗೆ ಕರೆ ಕೊಡುತ್ತೇನೆ ಎಂದು ಹೇಳತಕ್ಕಂಥ ನಾಯಕತ್ವ ಯಾವ ಮಟ್ಟದ ನಾಯಕತ್ವ? ಅದು ಯಾವ ರೀತಿಯ ನಿರ್ಭೀತವಾದ ಪತ್ರಿಕಾ ಧರ್ಮ? ಅಲ್ಲಿಂದ ನಾವು ಇಲ್ಲಿಗೆ ಇಳಿದುಬಿಟ್ಟಿದ್ದೇವೆ. ಏನಪ್ಪಾ ಮಾನ್ಯ ಮುಖ್ಯಮಂತ್ರಿಯವರು ಬಂದೇ ಬಿಟ್ಟರಲ್ಲಾ, ಅವರು ಸೀಟಿನಲ್ಲಿ ಇಲ್ಲದಿದ್ದರೆ ನಮ್ಮಷ್ಟಕ್ಕೆ ನಾವು free ಆಗಿ ಏನು ಬೇಕಾದರೂ ಮಾತನಾಡಬಹುದಾಗಿತ್ತು. ಅಧಿಕಾರ ಎಂದರೆ ಭಯ.

ಶ್ರೀ ಆರ್. ಅಶೋಕ್:- Restriction ಹಾಕುವುದಕ್ಕೆ ಬಂದಿರುವುದು.

ಶ್ರೀ ಸಿದ್ದರಾಮಯ್ಯ:- ಮಾನ್ಯ ಅಶೋಕ್‌ರವರೆ, ಇಲ್ಲಪ್ಪ, ನಮ್ಮಷ್ಟು democratic ಆಗಿರುವವರು ಯಾರು ಇಲ್ಲ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:- ಮಾನ್ಯ ರಮೇಶ್‌ಕುಮಾರ್‌ರವರೆ, ಆ ದಾರಿ ತಪ್ಪಬಾರದು ಎಂದು ತಿಳಿದುಕೊಂಡೆ ಅವರು ಇಲ್ಲಿಗೆ ಬಂದುಬಿಟ್ಟರು. ಮಾತನಾಡುವಾಗ ದಾರಿ ತಪ್ಪಬಾರದು ಎಂದು ಅವರು ಬಂದುಬಿಟ್ಟರು.

ಶ್ರೀ ಸಿದ್ದರಾಮಯ್ಯ:- ಮಾನ್ಯ ರಮೇಶ್‌ಕುಮಾರ್‌ರವರು ಯಾವಾಗಲೂ ತಪ್ಪು ಮಾಡುವುದಿಲ್ಲ.

ಶ್ರೀ ಆರ್. ಅಶೋಕ್:- ಇಲ್ಲ ಸಾರ್, ನೀವು ಬಂದಿದ್ದು ಅವರಿಗೆ ಒಂದು ರೀತಿ speed breaker ಹಾಕಿದಂತೆ ಆಯಿತು.

ಶ್ರೀ ಸಿದ್ದರಾಮಯ್ಯ:- ಇಲ್ಲ. ಇನ್ನೂ spirit ಹೆಚ್ಚಾಗುತ್ತದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್:- ಬಹುಶಃ ಮಾನ್ಯ ಕುಮಾರಸ್ವಾಮಿಯವರಿಗೆ proper idea ಇದೆ. ನನ್ನದು speed ಇಲ್ಲ, breaker ಇಲ್ಲ., ನಾನು road ಮೇಲೆ ಹೋದರೆ ತಾನೇ ಅವೆಲ್ಲಾ ಬರುವುದು. ನಾನು airway ಯಲ್ಲಿರುವವನು. ಅಲ್ಲಿ ಒಂದೇ ಸಲ crash ಅಷ್ಟೆ. ಅದು safeಆಗಿ land ಆದರೆ ಮಾತ್ರ ನಾನು ಹಲೋ ಎಂದು ಮಾತನಾಡುತ್ತೇನೆ. ಹಲೋ

ಅನ್ನಲಿಲ್ಲ ಅಂದರೆ ಅದು crash ಆಯಿತು ಎಂದು ಅರ್ಥ. ಈ ಸದನದಲ್ಲಿ 1963ನೇ ಇಸವಿಯಲ್ಲಿ Governor's Address ಆದಮೇಲೆ ಮೇಲ್ಮನೆಯೊಳಗಡೆ ಶ್ರೀ ಜೆ.ಬಿ. ಮಲ್ಲಾರಾಧ್ಯರವರು 17 ಪುಟಗಳ ರಾಜ್ಯಪಾಲರ ಭಾಷಣವನ್ನು ಎಷ್ಟು ಓದಿಸಿದ್ದೀರಾಪ್ಪ ಈ Governor ಕೈಯಲ್ಲಿ ಇಷ್ಟು ಉದ್ದದ ಭಾಷಣ ಏತಕ್ಕಾಗಿ ಬೇಕಿತ್ತು ಎಂದು ಕೇವಲ 17 ಪುಟಕ್ಕೆ ಕೇಳುತ್ತಾರೆ. ಈಗ 2015ರಲ್ಲಿ ನಮ್ಮ ರಾಜ್ಯಪಾಲರ ಭಾಷಣವು 24 ಪುಟ ಆಗಿದೆ. ಇಲ್ಲಿ ಬಜೆಟ್ ಕೂಡ ಜಾಸ್ತಿ, departments ಕೂಡ ಜಾಸ್ತಿ, ಮಂತ್ರಿಗಳು ಕೂಡ ಜಾಸ್ತಿ, adjustment ಕೂಡ ಜಾಸ್ತಿಯಾಗಿದೆ. ಇದೇನು ಸಿದ್ದರಾಮಯ್ಯನವರು ತೆಗೆದುಕೊಂಡು ಬಂದಿದ್ದು ಏನು ಅಲ್ಲ. ಅಥವಾ ಮಾನ್ಯ ಕುಮಾರಸ್ವಾಮಿಯವರು ಹುಟ್ಟುಹಾಕಿ ಹೋಗಿದ್ದೇನು ಅಲ್ಲ, ಅಥವಾ ಜಗದೀಶ್ ಶೆಟ್ಟರ್‌ರವರು ಬಿಟ್ಟುಹೋಗಿರುವುದು ಏನು ಅಲ್ಲ. ಅವುಗಳ ಮೊದಲು ಬಂದು towel ಹಾಕಿ ಕುಳಿತುಬಿಟ್ಟಿವೆ, adjustmentಗಳು. ನಾವು ಸುಮ್ಮನೆ ಬರುವುದು ಹೋಗುವುದನ್ನು ಮಾಡುತ್ತಿದ್ದೇವೆ. ಇಲ್ಲಿ ಹೊತ್ತು ಹೋಗದೆ ನಾವು ನಿಮ್ಮ ಮೇಲೆ ನೀವುಗಳು ನಮ್ಮ ಮೇಲೆ ಮಾತನಾಡಿಕೊಳ್ಳುತ್ತೇವೆ. Bangalore Corporationನಲ್ಲಿ Commissioner ಬಹಳ strict ಆಗಿದ್ದರೆ ಯಾವುದಾದರೂ plan ಆಗಬೇಕಾಗಿದ್ದರೆ ಅವರು engineersಗಳು ಏನು ಹೇಳುತ್ತಾರೆಂದರೆ ಈಗ Commissioner ಬಹಳ strict ಆಗಿದ್ದಾರೆ. ಅದಕ್ಕೆ ಏನು ಪರಿಹಾರವೆಂದರೆ ಅದು cost double ಆಗುತ್ತದೆಯಂತೆ. ಮಾಮೂಲಿ 10,000 ರೂಪಾಯಿಗಳಿಗೆ ಕೆಲಸ ಆಗುವುದಿದ್ದರೆ Commissioner strict ಆದರೆ ಅದು 20,000 ರೂಪಾಯಿಗಳಾಗುತ್ತದೆ. ಏಕೆಂದರೆ risk ಮಾಡುವುದು ಅಂತಾ. ಈ strictನ effect ಎಲ್ಲಿಗೆ ಬಂದಿದೆ ಎಂದರೆ ಅದು ಇಲ್ಲಿಗೆ ಬಂದು ಕುಳಿತುಕೊಂಡಿದೆ. Political de-valuation. ನಿನ್ನೆ ದಿನ ಬಹಳ ಚೆನ್ನಾಗಿ ಹೇಳಿದ್ದೀರಿ. ನಾವು ಮಾತ್ರ ಏತಕ್ಕಾಗಿ ಟೀಕೆಗೆ ಒಳಗಾಗುತ್ತೇವೆಂದರೆ, ಪಂಚಾಯಿತಿ ಸದಸ್ಯನಿಂದ ಹಿಡಿದು ಪಾರ್ಲಿಮೆಂಟಿನ ರಾಷ್ಟ್ರಪತಿಯವರೆವಿಗೆ ನಾವು ಚುನಾವಣೆಗೆ ಹೋಗಲೇಬೇಕು. ನಮಗೆ ಓಟು ಹಾಕುವವರು ಕೆಲವರು ಇದ್ದೇ ಇರುತ್ತಾರೆ. ಆ 20–21 ದಿವಸ ಟೈಮ್ ಅವರಿಗೆ ನಿಮ್ಮನ್ನು ಹೊಗಳುವುದಕ್ಕೋ,

ಬೈಯುವುದಕ್ಕೋ, ಖುಷಿ ಪಡುವುದಕ್ಕೋ, ಮೆರವಣಿಗೆ ಮಾಡುವುದಕ್ಕೋ, ನಿಮ್ಮ ಮೇಲೆ ಕಲ್ಲು ಹೊಡೆಯುವುದಕ್ಕೋ, ನಿಮ್ಮ ಮೇಲೆ ಮೊಟ್ಟೆ ಬಿಸಾಕುವುದಕ್ಕೋ ಅದು ಒಂದು ಅವರಿಗೆ ಒಂದು ಟೈಮ್. IAS, IPS, mediaದವರಿಗೆ, judiciaryಯಲ್ಲಿ ಇರುವವರಿಗೆ ಬೀಳುವ ಪ್ರಶ್ನೆಯೇ ಇರುವುದಿಲ್ಲ. ಹಾಗಾಗಿ ಏನಾಗಿದೆ ಎಂದರೆ ನಾವು ಎಲ್ಲರಿಗೂ ಕೆಟ್ಟವರಾಗಿದ್ದೇವೆ. ಇದರ ಮಧ್ಯೆ ನಮ್ಮದು ಸ್ವಂತ ಜಗಳ ಬೇರೆ ಇದೆ. ನಮ್ಮ ಹತ್ತಿರ ಎಷ್ಟು ಇರಬಹುದು, ಅವರ ಹತ್ತಿರ ಎಷ್ಟು ಇರಬಹುದು ಎಂದು ಈ ದೇಶದಲ್ಲಿ ಯಾರು assess ಮಾಡಿದ್ದಾರೆ? ರಾತ್ರಿಯಿಂದ ಅದೊಂದು ಬೇರೆ tension ಆಗಿ ಬಿಟ್ಟಿದೆ. ಈ black money list ಬರುತ್ತಿದೆ. ಎಲ್ಲವನ್ನು ಅವರು ತೆಗೆಯುತ್ತಿದ್ದಾರೆ. ನನಗೆ ಎಲ್ಲಿ ನನ್ನ ಹೆಸರು ಬರುತ್ತದೆ ಎಂದು ಅದು ಒಂದು tension ಆಗಿದೆ. ಈ ಹುಡುಗರಿಗೆ ಗೊತ್ತಾಗುವುದಿಲ್ಲ ಎಲ್ಲೆಲ್ಲೋ ಇಟ್ಟುಬಿಟ್ಟಿದ್ದಾರೆ. ಹೆಸರುಗಳು ಈಚೆಗೆ ಬಾರದ ರೀತಿಯಲ್ಲಿ ನಾವು ಸಾಧ್ಯವಾದಷ್ಟು ಜಾಗ್ರತೆಯನ್ನು ತೆಗೆದುಕೊಂಡುಬಿಟ್ಟಿದ್ದೇವೆ. ಆದರೂ ಭಯ ಇದೆ. ಈ ದೇಶ ಎಲ್ಲಿಗೆ ಬಂದಿದೆ ಎಂದರೆ ಮಾನ್ಯ ಕುಮಾರಸ್ವಾಮಿಯವರೆ ನೀವು ಅರ್ಕಾವತಿಯದ್ದೇ ಮಾತನಾಡಬೇಕಾಗಿರಲಿಲ್ಲ. There are so many things. ಸರ್ಕಾರಗಳು ಬದಲಾವಣೆಯಾಯಿತು. ಒಂದು Ration Card, Death Certificate ಮತ್ತು ಒಂದು order copyಯನ್ನು ತೆಗೆದುಕೊಳ್ಳಬೇಕಾದರೆ, ಕೆಳಗಿನ ಹಂತದಲ್ಲಿ ಮಾನ್ಯ ಕಾರಜೋಳರವರೆ ದುಡ್ಡು ಕೊಡದೆಹೋದರೆ ಕೆಲಸ ಆಗುತ್ತದೆಯೇ? ನಾವು ಬೆಂಗಳೂರು ಮತ್ತು ದೆಹಲಿಯಲ್ಲಿ ಕೋಟಿಗಟ್ಟಲೆ transaction ಆಗಿದ್ದನ್ನು ಊರಿಗೆ ಹೋಗಿ public meetingನಲ್ಲಿ ಹೇಳಿದರೆ ಯಾರಿಗೂ ಅರ್ಥವಾಗುವುದಿಲ್ಲ. ಈ ಊರಿನಲ್ಲಿರುವ village acccountantನನ್ನು ಕುರಿತು ಹೇಳಿದರೆ ಜನರು ಚಪ್ಪಾಳೆಯನ್ನು ತಟ್ಟುತ್ತಾರೆ. The corruption at the higher level is not felt by the common man. Impact ಅವನ ಮೇಲೆ ಆಗುತ್ತದೆ. ಅವನಿಗೆ ಇದು ಗೊತ್ತಾಗುವುದಿಲ್ಲ. ಜಗದೀಶ್ ಶೆಟ್ಟರ್ ಸಾಹೇಬರೆ, you were the Chief Minister, ನೀವು ಸಹ ಸಮಾಧಾನಪಟ್ಟುಕೊಳ್ಳುವಹಾಗಿಲ್ಲ, ನಿಮಗಿಂತಲೂ ಮೊದಲು ಮಾನ್ಯ

ಕುಮಾರಸ್ವಾಮಿಯವರು Chief Minister ಆಗಿದ್ದವರು ಖುಷಿ ಪಡುವಹಾಗಿಲ್ಲ. ಇವತ್ತು ಆಡಳಿತವನ್ನು ನಡೆಸುತ್ತಿರುವಂತಹ ನಮ್ಮ ನಾಯಕರಾದ ಶ್ರೀ ಸಿದ್ದರಾಮಯ್ಯನವರು ಕೂಡ ಧೈರ್ಯವಾಗಿ ಇಲ್ಲಾ ನನ್ನ ಸರ್ಕಾರದಲ್ಲಿ corruption ಇಲ್ಲ, ಯಾವ ಅಧಿಕಾರಿಯು ಮುಟ್ಟುತ್ತಿಲ್ಲ ಎಂದು ಹೇಳುವಂತಹ ಧೈರ್ಯ ಅವರಿಗೂ ಸಹ ಇಲ್ಲ. ಇದೇನು party basis ಮೇಲೆ ಮಾತನಾಡುವಂತಹ ವಿಚಾರವಲ್ಲ. ಅಥವಾ ಪರ ವಿರೋಧದ ವಿಚಾರವಲ್ಲ. All of us collectively ನಾವು ಸಾಮಾನ್ಯ ಮನುಷ್ಯನಿಗೆ ಆ ವಿಶ್ವಾಸವನ್ನು ಹುಟ್ಟಿಸುವಂತಹ ಕೆಲಸ ನಮ್ಮ ಕೈಯಲ್ಲಿ ಆಗುತ್ತಿಲ್ಲ. Was this not a matter to be discussed? ಲೋಕಾಯುಕ್ತದವರು ಒಂದು ಕಡೆಗೆ, ಬೇರೆ ಬೇರೆ agencyಗಳು ಒಂದು ಕಡೆಗೆ ಇದರಿಂದ ಏನು ಪ್ರಯೋಜನ? ಲೋಕಾಯುಕ್ತದವರಿಂದ ಎಷ್ಟು raids ಆಗಿದೆ? ಇದರಿಂದ ಪರಿಣಾಮ ಏನಾಯಿತು? ಇದರಿಂದ ಎಷ್ಟು ಜನರು ಮನೆಗೆ ಹೋದರು? ಎಷ್ಟು ಜನರ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡರು? ಎಷ್ಟು ಜನರು ಭಯಬಿದ್ದು corruption ಮಾಡುವುದನ್ನು ನಿಲ್ಲಿಸಿದ್ದಾರೆ? Do we have an answer? All of us ಒಟ್ಟಿಗೆ ನಮ್ಮ 224 ಜನ ಸದಸ್ಯರು plus nominated members ಸೇರಿದರೆ ಹೊರಗಡೆ ಹೋಗಿ ಬಜಾರ್‌ನಲಿ ನಿಂತುಕೊಂಡು ಜನರಿಗೆ ಹೇಳುವುದಕ್ಕೆ ನಿಂತರೆ ನಮ್ಮಲ್ಲಿ ಏನಾದರೂ ಉತ್ತರ ಇದೆಯಾ? We have no answer. ಅದಕ್ಕೆ Governor ಅವರು ಆ ಒಂದು ವಿಚಾರವನ್ನು ಮಾತನಾಡಲಿಲ್ಲ. ಆದರೆ ಬೇರೆ ಎಲ್ಲಾ ವಿಚಾರವನ್ನು ಮಾತನಾಡಿದ್ದಾರೆ. ಏಕೆಂದರೆ ಇವೆಲ್ಲಾ ಸಾಧ್ಯವಿಲ್ಲ ಎಂದು ಅವರಿಗೂ ಸಹ ಗೊತ್ತಿದೆ. So, this is where I think ನಾನು ತಮ್ಮಲ್ಲೇ ಏನು appeal ಮಾಡಿಕೊಳ್ಳುತ್ತೇನೆಂದರೆ, ನಾವು collective ಆಗಿ ವ್ಯವಸ್ಥೆಯನ್ನು ಸುಧಾರಿಸುವ ವಿಚಾರದಲ್ಲಿ ಕೆಲವು ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಸಾಮಾನ್ಯ ಜನರಿಗೆ ಈ ವ್ಯವಸ್ದೆಯಲ್ಲಿ ವಿಶ್ವಾಸವು ಹೋಗಲಾರದಂತಹ ಕೆಲಸವನ್ನು ಮಾಡಬೇಕಾಗುತ್ತದೆ. ವ್ಯವಸ್ಥೆಯು ಬಲವಾಗಿದ್ದರೆ ಆ ಸ್ಥಾನದಲ್ಲಿ ನೀವು ಯಾರಾದರೂ ಕುಳಿತುಕೊಳ್ಳಿ ಆಗ ಜನರಿಗೆ ನೆಮ್ಮದಿ ಇರುತ್ತದೆ. ಇದೇ ವ್ಯವಸ್ಥೆಯನ್ನು ಇನ್ನಷ್ಟು ಹದಗೆಡಿಸಿ ನಾವು

ಮುಂದುವರಿಯುವುದಾದರೆ ಇಲ್ಲಿ ಯಾರಿದ್ದರೆ ಏನು ಪ್ರಯೋಜನ? 1973ನೇ ಇಸವಿಯಲ್ಲಿ Governor Address ಆದಾಗ ಮಾನ್ಯ ಹೆ.ಡಿ. ದೇವೇಗೌಡರು ವಿರೋಧಪಕ್ಷದಲ್ಲಿದ್ದರು, ಡಿ. ದೇವರಾಜ ಅರಸುರವರರು ಆಡಳಿತಪಕ್ಷದ ಕಡೆಯಲ್ಲಿದ್ದರು. ಮಾನ್ಯ ಸುಬ್ಬಯ್ಯಶೆಟ್ಟರು ruling partyಯ member ಆಗಿ motion move ಮಾಡುತ್ತಾರೆ. ನಮ್ಮ ಸಭಾಧ್ಯಕ್ಷರಾದ ಶ್ರೀ ಕಾಗೋಡು ತಿಮ್ಮಪ್ಪನವರು he was a member in the opposition. Sri C.M. Armugam ಎಂಬುವವರು ಕೆ.ಜಿ.ಎಫ್‌ನಿಂದ ಆಯ್ಕೆಯಾಗಿ ಶಾಸಕರಾಗಿ ಬಂದಿದ್ದರು. ಅವರು Point of Order ಅನ್ನು ರೈಸ್ ಮಾಡುತ್ತಾರೆ. Thanks ಹೇಳಬೇಕೆಂದು constitutionನಲ್ಲಿ ಎಲ್ಲಿಯೂ ಹೇಳಿಲ್ಲ. ಏತಕ್ಕಾಗಿ ನಾವು move ಮಾಡಬೇಕು, ಏಕೆ ನಾವು thanks ಹೇಳಬೇಕು. ಅವರ ಕರ್ತವ್ಯವನ್ನು ಅವರು ಮಾಡಿ ಹೋಗಿದ್ದಾರೆ. ಆಗ ಅದು ಎಂತಹ interesting debate ಗೊತ್ತೇ? It is not far off. 1972ನೇ ಇಸವಿಯಲ್ಲಿ ಮಾನ್ಯ ಕೋಳಿವಾಡರವರು ಮತ್ತು ಈಗಿನ ಸಭಾಧ್ಯಕ್ಷರು ಇದ್ದರು ಎಂದು ಕಾಣುತ್ತೆ, ನಾವೆಲ್ಲರೂ 1978ರ breed ಆಗಿದ್ದೇವೆ. ನಾವು ಎಷ್ಟು ಕೆಳಗೆ ಬಂದುಬಿಟ್ಟಿದ್ದೇವೆ. ಈ Houseನ debate personal matters ಅನ್ನು ಬಿಟ್ಟು matters of public interest, matters of common interest ಅವುಗಳ ಕಡೆಗೆ ನಾವು ಕೇಂದ್ರಿಕೃತವಾದಾಗ ಜನರನ್ನು ಬಾಧಿಸುತ್ತಿರುವಂತಹ ವಿಚಾರಗಳ ಬಗ್ಗೆ ನಾವು ಚರ್ಚೆಗೆ ತೆಗೆದುಕೊಂಡಾಗ address ಮಾಡುವುದಕ್ಕೆ ಪ್ರಾರಂಭ ಮಾಡಿದಾಗ, I think ಸ್ವಲ್ಪ ಮಟ್ಟಿಗೆ things will start improving. ನಾನು ತಮ್ಮೆಲ್ಲರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. I think it is necessary. ಅದೇ ಮಲ್ಲಾರಾದ್ಯರು 1964ನೇ ಇಸವಿಯಲ್ಲಿ ಭ್ರಷ್ಟಾಚಾರದ ಬಗ್ಗೆ ಹೇಳುತ್ತಾರೆ. Corruptionನ institution ಆಗಿಬಿಟ್ಟಿದೆ ಎಂದು ಹೇಳುತ್ತಾರೆ. Sri M.P.L. Shastryಯವರು he was in the Upper House. ಅವರು ನನ್ನ ಗುರುಗಳಾಗಿದ್ದಾರೆ, ಅವರು ನನಗೆ ಪಾಠ ಹೇಳಿದ್ದಾರೆ. He was a nominated member. Sri M.P.L. Shastryಗಳು I object to it ಎಂದು ಹೇಳುತ್ತಾರೆ. ಅದಕ್ಕೆ ಬಹಳ humorous ಆಗಿ ಮಲ್ಲಾರಾದ್ಯರು ನೀವು ಒಂದು institutions ಅನ್ನು ನಡೆಸುತ್ತಿದ್ದೀರಿ ಹಾಗೆ

ಅಂತ ಭಯ ಪಟ್ಟರಾ ನೀವು ಎಂದು ಹೇಳುತ್ತಾರೆ. ಅಂದರೆ corruption issue ಇದೆಯಲ್ಲಾ ಇದು ಕೂಡಾ ನಿನ್ನೆ ಮೊನ್ನೆಯದಲ್ಲಾ it has been there. ಅವತ್ತಿನಿಂದ ಇವತ್ತಿನವರೆಗೂ ಅದು ಕಾಲೆಳೆಯುತ್ತಲೆ ಇದೆ. ಆ ದಿನಕಳೆದಂತೆ ಎಲ್ಲಾ ಅದು ಬಲವಾಗುತ್ತಿದೆ. ನಾವು weak ಆಗುತ್ತಿದ್ದೇವೆ. I think ಅದನ್ನು ಆಗುವುದಕ್ಕೆ ಬಿಡಬಾರದು ಎಂದು ನನ್ನ ಮುಖ್ಯ ಉದ್ದೇಶವಾಗಿದೆ. Administration ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು I think he is familiar with this court. ಇದನ್ನು ಜವಹರಲಾಲ್ ನೆಹರುರವರು ಹೇಳುತ್ತಾರೆ. ಆಮೇಲೆ ಬಹಳ ಜನ ಹೇಳಿದ್ದಾರೆ. ಯಾವ ಆಡಳಿತ ಬಹಳ ಒಳ್ಳೆಯ ಆಡಳಿತ ಎಂದರೆ It is that administration which rules the least is the best administration. ಹೆಚ್ಚು ಪರಿಪಾಲನೆಗೆ ಕೈಹಾಕದೆ ಇರತಕ್ಕಂಥ ಆಡಳಿತ ಇರುತ್ತದೆಯೆಲ್ಲಾ ಅದೇ ಅತ್ಯುತ್ತಮವಾದ ಆಡಳಿತ. ನಮ್ಮದು ಈಗ ಏನಾಗಿಬಿಟ್ಟಿದೆ ಎಂದರೆ ಬೆಳಗಾಗಿ ಎದ್ದರೆ D-Group servant ನಿಂದ ಹಿಡಿದು Chief Secretary and additional Chief Scretary ವರೆಗೂ ನಮ್ಮ ಹಸ್ತಕ್ಷೇಪ ಇಲ್ಲದೆ ಯಾವುದೂ ನಡೆಯುವ ಹಾಗೇ ಇಲ್ಲ. ನನ್ನ ಹತ್ತಿರ ಒಬ್ಬ ಉದ್ಯೋಗಿ ಬರುತ್ತಾನೆ. ಅವನಿಗೆ 51 ವರ್ಷ ವಯಸ್ಸು. ಅವನಿಗೆ transfer ಬೇಕು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಸರ್, ಒಂದು ನಿಮಿಷ, ಈಗ ನಾನು ಛೇಂಬರ್‌ನಿಂದ ಹೊರಗೆ ಬರಬೇಕಾದರೆ ಒಬ್ಬ ಅತಿಥಿ ಉಪನ್ಯಾಸಕರ ಬಗ್ಗೆ ನಮ್ಮ ಶಿಕ್ಷಣ ಸಚಿವರು Chief Secretary ಗೆ ಒಂದು ಪತ್ರ ಬರೆದಿದ್ದಾರೆ. ನಿಜಕ್ಕೂ administration ಎಲ್ಲಿಗೆ ಬಂದಿದೆ ಎನ್ನುವುದಕ್ಕೆ. ಅವರು ಬರೆದಿರುವ ಪತ್ರವನ್ನು ನಾನು ಅಲ್ಲೇ ಬಿಟ್ಟುಬಂದೆ ಆಮೇಲೆ ನಾನು ಮುಖ್ಯ ಕಾರ್ಯದರ್ಶಿಯವರಿಗೆ ಹೇಳುತ್ತೇನೆಂದು ಹೇಳಿ ಬಂದೆ. Court ಆದೇಶ ಆಗಿದೆ, Supreme Court ಆದೇಶವಾಗಿದೆ. ಮಂತ್ರಿಗಳು Chief Secretary ಗೆ ಪತ್ರ ಬರೆಯುತ್ತಾರೆ. ನಿಮ್ಮ Principal Secretary ಅದನ್ನು implement ಮಾಡುತ್ತಿಲ್ಲ. ಮಾನಸಿಕವಾಗಿ ಆ ಉಪನ್ಯಾಸಕರು ಹಿಂಸೆಗೆ ಒಳಗಾಗಿದ್ದಾರೆ. ನೀವಾದರೂ ನಿಮ್ಮ Principal Secretary ಗೆ ಹೇಳಿ ತಕ್ಷಣ ಆದೇಶ ಹೊರಡಿಸಿ ಎಂದು ನೀವು ಬರೆದಿರುವ ಪತ್ರವನ್ನು ಈಗ ನೋಡಿದೆ. ಅದ್ಯಾರೂ

ಇಂಥ ಅಧಿಕಾರಿಗಳನ್ನು ಮೊದಲು ಹೊರಗೆ ಹಾಕಿಬಿಡಿ. Suspend ಮಾಡಿ. ಯಾರು ನಿಮ್ಮ Principal Secretary, Education. ನೀವು ಆ ಮಟ್ಟಕ್ಕೆ ಪತ್ರ ಬರೆದರೆ ಏನು ಅವರು ನಿಮಗಿಂಥ superior? ನಿಮ್ಮ Principal Secretary ಆ ಪತ್ರವನ್ನು ತರಲಿಲ್ಲ. ಹೊರಗೆ ಬಂದು Chief Secretary ಗೆ ಹೇಳುತ್ತೇನೆ ಎಂದು ಹೇಳಿಬಂದೆ. ಇವರು ಅಧಿಕಾರಿಗಳು ಏನು ತಿಳಿದುಕೊಂಡಿದ್ದಾರೆ? ಕಾನೂನುಬದ್ಧವಾಗಿರುವುದನ್ನು ಮಾಡಲಿಕ್ಕೆ ನೀವು ಅವರನ್ನು ಬೇಡಿಕೊಳ್ಳಬೇಕೆ? ಆ ಪತ್ರವನ್ನು ನೋಡಿದಾಗ ನನಗೆ ಎಂಥ ದುರವಸ್ಥೆ, ದುರ್ಗತಿಗೆ ಬಂದಿದ್ದೇವೆ ಎನ್ನಿಸಿತು.

ಶ್ರೀ ಕೆ.ಆರ್. ರಮೇಶ್‌ಕುಮಾರ್:- ಕುಮಾರಸ್ವಾಮಿಯವರೇ ನೀವು ಹೇಳುವುದು Correct ತೊಂದರೆಯೇನಾಗಿದೆ ಎಂದರೆ ಬಹಳ ಜನರಿಗೆ ಒದೆಯಬೇಕು ಎಂದು ಆಸೆ. ನಮಗೆಲ್ಲಾ ಕಾಲುಗಳು ಹೋಗಿ ಬಹಳ ಕಾಲವಾಗಿದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ನಾನು ಒಂದು ಬಾರಿ ಹೇಳುತ್ತೇನೆ ಕೇಳಿ ಸರ್, ನಾನು ಅನುಭವ ಇಲ್ಲವೆಂದು ಹೇಳಿದೆ, ಒಂದು humanitarian ground ನಲ್ಲಿ ಒಬ್ಬ ಹೆಣ್ಣುಮಗಳು handcap ಒಂದು mentally retarded ಸಣ್ಣ ಮಗುವನ್ನು ಎತ್ತಿಕೊಂಡು ದಿನವೂ ಜನತಾದರ್ಶನಕ್ಕೆ ಬರುತ್ತಾಳೆ. ಒಂದು transfer ಮಾಡಲಿಕ್ಕೆ ಹೇಳಿದರೂ ಮಾಡಲೇ ಇಲ್ಲ. ಕೊನೆಗೆ ನಿಮ್ಮ IAS Officer ರವರನ್ನೇ suspension ನಲ್ಲಿಟ್ಟಿದ್ದೆನು. ಇವರು ಅಧಿಕಾರಿಗಳು ಏನು ತಿಳಿದುಕೊಂಡಿದ್ದಾರೆ? ಕಾನೂನು ಬದ್ಧವಾಗಿರುವುದನ್ನು ಜಾರಿಗೊಳಿಸಲಿಕ್ಕೆ ಸತಾಯಿಸಿಕೊಂಡು ಕುಳಿತುಕೊಂಡರೆ ಅರ್ಥ ಇದೆಯೇ?

ಶ್ರೀ ಕೆ.ಆರ್. ರಮೇಶ್ ಕುಮಾರ್:- Petition mongry, Right to Information Act ಬಹಳ ಒಳ್ಳೆಯ ಕಾನೂನು ಅದು. ಅದರ ಉಪಯೋಗಕ್ಕಿಂತ ದುರುಪಯೋಗ ಮಾಡುವುದೇ ಜಾಸ್ತಿಯಾಗಿದೆ. ಈಗ ಕೆಳಗಡೆ ಹೋಗುತ್ತಾ, ಹೋಗುತ್ತಾ, ಈ RTI Act ಇಟ್ಟುಕೊಂಡು ಕೆಲವರು ಆಫೀಸರ್‌ಗಳಿಗೆ ಅವರದೇ ಏನಾದರೂ ಹೆಚ್ಚು ಕಡಿಮೆಗಳು ಇದ್ದೇ ಇರುತ್ತದೆ.

ಅದಕ್ಕೆ ಬಾಣ ಬಿಡುವುದು, ದುಡ್ಡು ಪಡೆದುಕೊಳ್ಳುವುದು. ನಾವು ಹಾಗೆ ಎಂದರೆ general ಆಗಿ ಒಂದು ಹೇಳಿಕೆ ಮಾಡಿದಂತಾಗುತ್ತದೆ. ಆ ಕಾನೂನನ್ನೆ ತಿರಸ್ಕರಿಸಿ ಮಾತನಾಡುವುದು No, it is not that. Media ದವರಿಗೆ ವಿಶೇಷವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. RTI ಶಾಸನದ ಬಗ್ಗೆ ಮಾತನಾಡುತ್ತಿಲ್ಲ. ಎಲ್ಲಾ RTI Activists ಬಗ್ಗೆ generalize ಮಾಡಿ ಮಾತನಾಡುತ್ತಿಲ್ಲ. ಹೇಗೆ ಇದನ್ನು ದುರುಪಯೋಗ ಮಾಡಿಕೊಳ್ಳುತ್ತಾರೆ ಎಂದರೆ ಭಾನುವಾರ ನಾನು ನಮ್ಮ ಊರಿನಲ್ಲಿದ್ದೆ. ನಮ್ಮೂರಿನ ಪಕ್ಕದಲ್ಲಿ ಒಬ್ಬ ಹೆಣ್ಣುಮಗಳು ಅವಳಿಗೆ ಎರಡು ಕಾಲುಗಳಿಗೆ ತೊಂದರೆ ಇದೆ. ತೊಂದರೆ ಎಂದರೆ crawl ಮಾಡಿಕೊಂಡು ಬರುತ್ತಾಳೆ. ಅವಳಿಗೆ ಒಬ್ಬ ಗಂಡ, ಅವನಿಗೂ ಎರಡೂ ಕಾಲುಗಳಿಲ್ಲ. ಅವಳಿಗೆ ಅಂಗನವಾಡಿಯಲ್ಲಿ ಕೆಲಸ ಕೊಟ್ಟಿದ್ದರೆ ಇವಳು handicap ಅಲ್ಲವೆಂದು ಯಾರೋ ಒಬ್ಬರು ಅರ್ಜಿ ಬರೆದಿದ್ದಾರೆ ಅದರ ಮೇಲೆ ಅವಳ ಸಂಬಳವನ್ನು ನಿಲ್ಲಿಸಿಬಿಟ್ಟು ಕೆಲಸದಿಂದಲೇ ತೆಗೆದಿದ್ದಾರೆ. ಅವಳಿಗೆ ಕಾಲಿಲ್ಲ ಎಂಬ ಬಗ್ಗೆ ಪರೀಕ್ಷೆಯೇ ಮಾಡಬೇಕಾಗಿಲ್ಲ. ನೋಡಿದ ತಕ್ಷಣ ಅವಳಿಗೆ ಕಾಲಿಲ್ಲದೇ ಇರುವುದು ಕಾಣುತ್ತದೆ. ಆ ಪತ್ರ ಬರೆಯುವವರು RTI Activist ಇವರು Women and Child Welfare Department ನವರಿಗೆ ಏನೇನೋ ವ್ಯವಹಾರಗಳಿರುತ್ತವೆ ಅದಕ್ಕೆ ಇವರಿಗೆ ಭಯ. ಆ activist ಹೇಳಿದಂತೆ ಕೇಳದೆಹೋದರೆ ಇವಳನ್ನು ತೆಗೆದುಹಾಕದೇ ಹೋದರೆ ಅವರು ಇವರ ಮೇಲೆ ccomplaint ಕೊಡುತ್ತಾರೆ. ಹೇಗಿದೆ ನೋಡಿ. See, ವರ್ಷಗಳು ಕಳೆದುಹೋದವು, ಸುಧಾರಣೆಯಾಯಿತೆ? Number of departments increase ಆಯಿತು. Comprehensive Agriculture Department ಎಂದರೆ

Agriculture, Horticulture, Sericulture, Forest, Animal Husbandry and Fisheries ಇವೆಲ್ಲಾ it was coming under agriculture. ಈಗ departments ಜಾಸ್ತಿ, ಮಂತ್ರಿಗಳೂ ಜಾಸ್ತಿ. Departmental Heads ಜಾಸ್ತಿ, Secretaries ಜಾಸ್ತಿ. ಮೀನಿನ ಸಂಖ್ಯೆಯೇನಾದರೂ ಜಾಸ್ತಿಯಾಯಿತೆ ಎಂದರೆ ನಾನು ಆವತ್ತಿನಿಂದ ಇವತಿನವರೆಗೆ fisheriesಗೆ ಹೋಗಿ ಕೇಳುತ್ತಿದ್ದೇನೆ. ನಮ್ಮಲ್ಲಿ, inland fisheries ನಲ್ಲಿ Rohu Katla ಬಿಟ್ಟರೆ ಮೂರನೇ variety fish

ಬಂದೇ ಇಲ್ಲ. ನೀವು ಹೆಸರುಘಟ್ಟಕ್ಕೆ ಹೋಗಿ animal husbandry department ನಲ್ಲಿ ಹೊಸ ತಳಿ ಹಂದಿ ಯಾವುದಾದರೂ ತಂದಿದ್ದೀರಾ ಎಂದರೆ Yorkshire variety ಬಿಟ್ಟು ಹೊಸದು ಇವತ್ತಿನವರೆಗೆ ಬರಲೇ ಇಲ್ಲ. Animal husbandry departmentಗೆ ಹೋಗಿ ಬೇರೆ ಕೆಲವು details ಕೇಳಿದರೆ, best semen ಎಲ್ಲಿ ಸಿಗುತ್ತದೆ, ಏಕೆ ಈ ನಡುವೆ ಜಾಸ್ತಿ ನಮ್ಮದು failures ಆಗುತ್ತಿದೆ? ಏಕೆ ನಮಗೆ repeat ಆಗುತ್ತಿದೆ ಎಂದು ಕೇಳಿದರೆ they have no answer. Agriculture Departmentನಲ್ಲಿ for the year 2013–14 ನಲ್ಲಿ 2,151 ಕೋಟಿ ರೂಪಾಯಿಗಳನ್ನು ಈ House vote ಮಾಡಿದ್ದು. Demands ಗೆ we voted 2151 crores. At the end of the year, they returned 800 crores ಖರ್ಚು ಮಾಡಲಿಕ್ಕಾಗಲಿಲ್ಲವೆಂದು. ಕತ್ತಿಯವರು You were the Agriculture Minister ಆ ಕಾಲಕ್ಕೆ ನೀವಿದ್ದರೋ, ಬೇರೆಯವರು ಇದ್ದರೋ ನೀವೇನು clarification ಕೊಡಬೇಡಿ. ಸಂಬಳ ಸಾರಿಗೆಗಳು ಉಳಿದಿದ್ದು ಎಲ್ಲಾ ಸೇರಿ 800.00 ಕೋಟಿ ರೂಪಾಯಿಗಳು. ಇನ್ನು ಬೇರೆ ಯಾವ್ಯಾವುದಕ್ಕೋ ಹೋಗುವುದು 600.00 ಕೋಟಿ ರೂಪಾಯಿಗಳು. return ಮಾಡಿದ್ದು 800.00 ಕೋಟಿ. ಅಂದರೆ ಇಡೀ ಇಲಾಖೆಗೆ ಈ ವರ್ಷವೆಲ್ಲಾ ಸೇರಿ ಈ ಅಸೆಂಬ್ಲಿ pass ಮಾಡಿಕೊಟ್ಟಿದ್ದನ್ನು ಅವರಿಗೆ ಎಷ್ಟು demand ಇದೆ, ಖರ್ಚು ಇದೆ? ಎಷ್ಟು ಬೇಕಾಗುತ್ತದೆಂದು ಕೇಳುವ ಕಲ್ಪನೆ ಕೂಡ ಅವರಿಗಿಲ್ಲ. ಅಂದರೆ if your estimate is prepared, without an imagination of what your requirement is for the forthcoming year. Are we a governance? Are we a government? Procedural ಆಗಿ ಇವನ್ನೆಲ್ಲಾ ಮಾಡಿಕೊಂಡು ಹೋಗುತ್ತಿದ್ದೇವೆ. ಯಾರು ಕೇಳುವವರು ಇರುವುದಿಲ್ಲ. ಇಡೀ ರಾಜ್ಯದಲ್ಲಿ, ಕೃಷಿ ಕ್ಷೇತ್ರದಲ್ಲಿ ಸಾಧಿಸಬೇಕಾದ್ದು, ಮಾಡಬೇಕಾದ್ದು ಏನೂ ಇಲ್ಲ. ಎಲ್ಲಾ ಪ್ರಗತಿಯನ್ನು ಸಾಧಿಸಿಬಿಟ್ಟು ಉತ್ತುಂಗಕ್ಕೆ ಹೋಗಿಬಿಟ್ಟಿದ್ದೇವೆ. ಯಾಕ್ರಪ್ಪಾ ದುಡ್ಡು ತಂದು ನಮ್ಮ ಮೇಲೆ ಸುರಿದಿರಿ, ಇನ್ನೆಲ್ಲಿಗಾದರೂ ತೆಗೆದುಕೊಂಡು ಹೋಗಿ ಮಹರಾಯರಾ ಎಂದು ಹೇಳಿದಂತಾಗಿದೆ. But factual is that the position? Estimates committee report ಕೊಡುತ್ತದೆ. ನಮ್ಮಲ್ಲಿ ಆ practice ಇಲ್ಲ. We

do not debate, we do not discuss the report of the statutory committees ತಪ್ಪು ಮಾಡಿದರೆ, ತಪ್ಪಾದರೆ, ಎಲ್ಲಿ ತಪ್ಪಾಗಿದೆ ಎಂದು ಅದನ್ನು ಸರಿಪಡಿಸಿಕೊಳ್ಳುವುದಕ್ಕೆ ನಮ್ಮಲ್ಲಿ system evolve ನಾವು ಮಾಡಿಲ್ಲವಲ್ಲ? ಇದರ ಬಗ್ಗೆ ನಾವು ಮಾತನಾಡಬಹುದಾಗಿತ್ತಲ್ಲವೇ? It is just one department. Irrigation ಗೆ ಬರುತ್ತೇನೆ, last ನಲ್ಲಿ ಹೇಳುತ್ತೇನೆ. ಈ lower level corruption ಅಂತೂ unbearable ಆಗಿಬಿಟ್ಟಿದೆ. Decentralization or over concentration. . . . . .

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- Corruption corruption ಎಂದು ಮಾತನಾಡುತ್ತೀದ್ದೇವೆ. ಇದು ಇಷ್ಟು ಉದ್ದವಾಗಿ ಬೆಳೆಯಲಿಕ್ಕೆ ಕಾರಣವೇನು ಸರ್? ಈ ವ್ಯವಸ್ಥೆಯಲ್ಲಿ ಯಾವ ಲೋಪವಿದೆ? ಇಷ್ಟೊಂದು ಹಣದ ಅವಶ್ಯಕತೆ ಏಕೆ? ಯಾರಿಗಾಗಿ ಈ ಹಣ? ಏತಕ್ಕೋಸ್ಕರ ಇಷ್ಟೊಂದು corruption ಬಗ್ಗೆ ನಾವು ವ್ಯಾಖ್ಯಾನ ಮಾಡಿ ನಿರಾಶೆಯಾಗುವಂಥ ಪರಿಸ್ಥಿತಿ ಸೃಷ್ಟಿಯಾಗಿದೆ? ಇದಕ್ಕೆ ಬೇರೆ ದಾರಿಯೇನು ಎಂದು ತಾವು ದಯವಿಟ್ಟು ಹೇಳಬೇಕು.

ಶ್ರೀ ಕೆ.ಆರ್. ರಮೇಶ್ ಕುಮಾರ್:- ಇದರ ಬಗ್ಗೆ ನೇರವಾಗಿ ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ಹೆಚ್.ಡಿ. ಕುಮಮಾರಸ್ವಾಮಿ:- ಒಂದೇ ನಿಮಿಷ, ಇದು corruption ಬಗ್ಗೆ ಇಲ್ಲಿ ಚರ್ಚೆ ಮಾಡುತ್ತಿದ್ದೇವೆ. ನಮ್ಮ ರಾಮನಗರ ಜಿಲ್ಲೆಯಲ್ಲಿ ಮದ್ಯ ಸಗಟು ಮಾರಾಟಗಾರರ ಒಂದು ಸಮ್ಮೇಳನ ನಡೆಯಿತು. ಆ ಸಮ್ಮೇಳನದಲ್ಲಿ ಅದರ ಸಂಘದ ಅಧ್ಯಕ್ಷರು ಭಾಷಣ ಮಾಡುತ್ತಾರೆ. ಅಬಕಾರಿ ಇಲಾಖೆಯೊಂದಕ್ಕೆ ಪ್ರತಿವರ್ಷ ಅಧಿಕಾರಿಗಳಿಗೆ ನಾವು 300 ರಿಂದ 400 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇವೆ ಎಂದು. ಪತ್ರಿಕೆಯಲ್ಲಿ ಬಂದಿದೆ ಅದರ ಬಗ್ಗೆ ನಮ್ಮ ಸರ್ಕಾರದಿಂದ ಗಮನ ಕೊಡುತ್ತೇವೆಯೇ? ಅದನ್ನು ಇಲ್ಲಿಯವರೆಗೆ ಯಾರೂ ನಿರಾಕರಣೆಯನ್ನು ಮಾಡಿಲ್ಲ. ನೀವು departmentwise ಖರ್ಚು ವೆಚ್ಚದ ಬಗ್ಗೆ ಹೇಳಿದಿರಿ. ನಾನು ಆಯಾಯ

ಇಲಾಖಾ ಮಂತ್ರಿಗಳಿಗೆ ಮನವಿ ಮಾಡುವುದು ಇಷ್ಟೆ. Every three months ಗೆ ಒಂದು ಸಲ at least ಸರಿಯಾದ ರೀತಿಯಲ್ಲಿ ನೀವು ನಿಮ್ಮ ಕಚೇರಿಗೆ ನಿಮ್ಮ ಇಲಾಖಾಧಿಕಾರಿಗಳನ್ನು ಕರೆಸಿಕೊಂಡು, ನಿಮ್ಮ ಪ್ರಗತಿಗಳೇನಿದೆ ಇವುಗಳನ್ನೆಲ್ಲಾ ಚರ್ಚೆ ಮಾಡದೇ ಹೋದರೆ ultimately ಇದೇ ಆಗುವುದು. ನಾವು ಸಹ 20 ತಿಂಗಳುಗಳ ಕಾಲ ಆಡಳಿತ ನಡೆಸಬೇಕಾದರೆ ಅನುಭವ ಇಲ್ಲದೇ ಹೋದರೂ every 2–3 months ಪ್ರತಿ ಇಲಾಖೆಯದ್ದನ್ನೂ ಕುಳಿತುಕೊಂಡು ಚರ್ಚೆ ಮಾಡುತ್ತಿದ್ದೆವು. ಅದು ಆಗದೇ ಇದ್ದರೆ ಇವೆಲ್ಲಾ ಈ ರೀತಿ ಆಗುತ್ತದೆ.

ಶ್ರೀ ಕೆ. ಶಿವಮೂರ್ತಿ:– ನಿನ್ನೆ ಮಾನ್ಯ ಕುಮಾರಸ್ವಾಮಿಯವರು ಮಾತನಾಡಬೇಕಾದರೆ judicially, judiciary, judicial judgment and judiciary interpretation ಬಗ್ಗೆ ಬಹಳ ಗಂಭೀರವಾಗಿ ಮಾತನಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ರಮೇಶ್ ಕುಮಾರ್‌ರವರು ಮಾತನಾಡಬೇಕಾದರೆ ಇವರು ಬಹಳ ಬುದ್ಧವಂತರು ಇದರ ಬಗ್ಗೆ ಬೆಳಕನ್ನು ಚೆಲ್ಲುತ್ತಾರೆ ಎನ್ನುವಂತಹ ಮಾತನ್ನು ಹೇಳಿದರು. ಆಮೇಲೆ corruption ಬಗ್ಗೆ ನಮ್ಮ ಮಾನ್ಯ ಪುಟ್ಟಣ್ಣಯ್ಯನವರು ಸಹಿತ ಹೇಳಿದರು. Corruption ಎನ್ನುವುದು administration executive ನಲ್ಲಿ ಇದೆಯೋ ಅಥವಾ legislature ನಲ್ಲಿ ಇದೆಯೋ ಅಥವಾ judiciary ನಲ್ಲಿ ಇದೆಯೋ? Judicial corruption, judicial nexus ನಿನ್ನೆ ತಾವು ಒಂದು ಪದ ಪ್ರಯೋಗ ಮಾಡಿದ್ದೀರಿ ಸರ್. Judicial terrene ಎನ್ನುವುದು, judicial terror and terrene ಎನ್ನುವುದು ಪ್ರಯೋಗ ಮಾಡಿದ್ದೀರಿ. It reflects, it controls these three organs and plus media all go together. ಅದಕ್ಕೆ ಯಾರು ಯಾರನ್ನು interfere ಆಗುತ್ತಾರೆ, stay ಕೊಡುತ್ತಾರೆ, interpret ಮಾಡುತ್ತಾರೆ, ಆ block ಮಾಡುತ್ತಾರೆ, how the democracy should function, corruption is the worldwide phenomena and someone can say it is a natural phenomena. ಸರ್ ಅದಕ್ಕೋಸ್ಕರ ತಾವು ಭಾಷಣ ಮುಗಿಸುವುದಕ್ಕಿಂತ ಮುಂಚಿತವಾಗಿ judiciary reform ಬಗ್ಗೆ ಈ ಸದನ ಏನು ಹೇಳುತ್ತದೆ

ಎನ್ನುವ ಬೆಳಕನ್ನು ಚೆಲ್ಲಬೇಕು ಎಂದು ಹೇಳುತ್ತೇನೆ. They should not block our rights or individual rights. How judiciary works in the system and controls ಎನ್ನುವುದರ ಬಗ್ಗೆ ತಾವು ದಯವಿಟ್ಟು ಬೆಳಕು ಚೆಲ್ಲಬೇಕು.

ಶ್ರೀ ಕೆ.ಆರ್. ರಮೇಶ್ ಕುಮಾರ್:- ಅಂದರೆ, ಇವರು ಹೇಳುವುದನ್ನು ನೋಡಿದರೆ ಸೀತಾರಾಮ ಶಾಸ್ತ್ರಿಗಳನ್ನು ಹೋಗಿ ಚಾಪ್ಸ್ ಹೇಗೆ ಮಾಡುವುದು ಎಂದು ಕೇಳಿದ ಹಾಗೆ ಆಯಿತು. ನಾನು ಹೇಳಿ ಕೇಳಿ ಒಂದು third class degree ತೆಗೆದುಕೊಂಡಿರುವವನು. Judicial reforms ಬಗ್ಗೆ ಮಾತನಾಡಬೇಕಂತೆ. ಈಗ ನಾನು ಇಷ್ಟು ಮಾತನಾಡಿರುವುದೇ ದುಬಾರಿ. Judicial terrene is the word used by late Sri. V.R. Krishna Iyer, Former Judge of the Supreme Court of India. Judicial actions ಬಗ್ಗೆ ಹಾಗೂ judgments ಬಗ್ಗೆ ನಾವು comment ಮಾಡುವ ಆಗಿಲ್ಲ. Bench ಮೇಲೆ ಕುಳಿತಾಗ ಅವರ utterances ಏನಿರುತ್ತದೆ, ಅವರ pronouncements ಏನಿರುತ್ತದೆ, ಕೆಲವು actions ಏನಿರುತ್ತದೆ, that will constitute to judicial teranny. ನಮ್ಮದು medieval judiciary. It is not progressive judiciary. ನಮ್ಮಲ್ಲಿ there is a struggle, confrontation between the legal justice and the social justice. ತಾವು ನಾವು we are all advocates of social justice. Legal justice is the advanced stage of medieval justice. It is called imperial justice. Now the clash is between the imperial justice. ಅಂದರೆ, ಸಾಮ್ರಾಜ್ಯಶಾಹಿಗಳ ನ್ಯಾಯಕ್ಕೆ ನಾವು ಸಾಮಾಜಿಕ ನ್ಯಾಯ ಕೇಳುವಂತಹದ್ದರ ಮಧ್ಯೆ ಘರ್ಷಣೆಯಾಗುತ್ತದೆ ಎನ್ನುವುದು ಅದನ್ನು ಬಿಡಿ. ಅದು ಬಹಳ ದೊಡ್ಡ ವಿಚಾರ. ಇನ್ನೊಂದು ದಿವಸ ಯಾವಾಗಲಾದರು debate ಗೆ ತೆಗೆದುಕೊಳ್ಳೋಣ. Corruption ವಿಚಾರವನ್ನು ಮಾನ್ಯ ಪುಟ್ಟಣ್ಣಯ್ಯನವರು ಹೇಳಿದರು. Corruption ಹೇಗಿದೆ ಅಂದರೆ, ಇದು ಕಪ್ಪಗೆ ಇದೆಯೇ ಅಥವಾ ಕೆಂಪಗೆ ಇದೆಯೇ, ಘಾಟು ಇದೆಯೇ ಅಥವಾ ಸೀನಾ, ಮಂಡ್ಯಕ್ಕೆ ಇರುತ್ತದೆಯೇ ಅಥವಾ ಕೋಲಾರಕ್ಕೆ ಇರುತ್ತದೆಯೇ ಎಂದರೆ ಗೊತ್ತಿಲ್ಲ. ಆದರೆ, ನನಗೆ ಗೊತ್ತಿರುವ ಹಾಗೆ ನಾನು ಹೇಳಬಲ್ಲೆ. ಈಗ ಮಾನ್ಯ

ಮುಖ್ಯಮಂತ್ರಿಗಳಿದ್ದಾರೆ. ಕ್ಯಾಬಿನೆಟ್ ಮಾಡುವುದು ಹಾಗೂ portfolios ಕೊಡುವುದೆಲ್ಲಾ ಅವರ ವಿವೇಚನೆಯಲ್ಲವೇ? ಮಂತ್ರಿಗಳನ್ನು ಮಾಡುವವರೆಗೆ ಅವರ ಜೀವ ಹಿಂಡಿಬಿಡುತ್ತೇವೆ. ಏನಣ್ಣಾ ನೀನು ಇದ್ದಾಗಲೂ ನನ್ನನ್ನು ಮಂತ್ರಿ ಮಾಡದೇ ಹೋದರೆ ಹೇಗಣ್ಣಾ? ನಾನು ಎಷ್ಟು ಕಷ್ಟಪಟ್ಟಿದ್ದೇನಣ್ಣಾ? ನಿನ್ನನ್ನು ಆವತ್ತು ನನ್ನ ಹೆಗಲ ಮೇಲೆ ಹೊತ್ತುಕೊಂಡು ಬಿಟ್ಟೆ ಅಣ್ಣ, ಬೇಕಾದರೆ ನೋಡಣ್ಣ ಮೂಳೆ ಸವೆದು ಹೋಗಿದೆ ಎಂದು ಹೇಳುತ್ತಾರೆ. ಸರಿ ಹಾಳಾಗಿ ಹೋಗಲಿ ತಪ್ಪಿಸಿಕೊಳ್ಳುವುದಕ್ಕೆ ಆಗುವುದಿಲ್ಲ, ಇವನ ಕಾಟ ತಪ್ಪಿದರೆ ಸಾಕಪ್ಪ ಎಂದು ಇವನ ಹೆಸರನ್ನು ಬರೆದುಬಿಡು ಎಂದು ಹೇಳುತ್ತಾರೆ. ಅಲ್ಲಿಯವರೆಗೆ ಒಂದು ಸ್ಟೇಜ್. ಅದು ಆದಮೇಲೆ next typist ಹತ್ತಿರ ಕೇಳುತ್ತಾರೆ, ನನ್ನದು ಕ್ಯಾಬಿನೆಟ್‌ನಲ್ಲಿದೆಯೋ ಅಥವಾ ಸ್ಟೇಟ್‌ನಲ್ಲಿದೆಯೋ ನೋಡಪ್ಪ ಎಂದು ಕೇಳುತ್ತಾರೆ. ಟೈಪಿಸ್ಟರವರಿಗೆ ಓದುವುದಕ್ಕೆ ಬರುತ್ತದೋ ಅಥವಾ ಬರುವುದಿಲ್ಲವೋ? ಅವರಿಗೆ statement ಅನ್ನೇ ಸರಿಯಾಗಿ ಮಾಡುವುದಕ್ಕೆ ಬರುವುದಿಲ್ಲ. ಕ್ಯಾಬಿನೆಟ್ ಎಂದು ಅವರು ಹೇಳಿ ಬಿಡುತ್ತಾರೆ. ಆದರೆ, ಇಲ್ಲಿ ನೋಡಿದರೆ state ಆಗಿರುತ್ತದೆ. ಅಯ್ಯೋ ಅವನನ್ನು ಕೇಳಿದರೆ ಅವನು ಎಷ್ಟು ಘಾಟಿಯಾಗಿರುತ್ತಾನೆ ಗೊತ್ತಾ, ನಿನ್ನದು ಕ್ಯಾಬಿನೆಟ್‌ನಲ್ಲಿ ಇತ್ತು, last minute ನಲ್ಲಿ ತಪ್ಪಿ ಹೋಯಿತಣ್ಣ ಎಂದು ಹೇಳುತ್ತಾರೆ. state ಆಯಿತಲ್ಲವೇ? State ಆದಮೇಲೆ ನಿಮ್ಮದು attachment ಆಗಿದೆಯೇ ಅಥವಾ independent charge ಆಗಿದೆಯೇ ಎಂದು ವಿಷಯ ಬರುತ್ತದೆ. Portfolio ಬರುತ್ತದೆ. ಬಾಯಿ ಬಡಿದುಕೊಳ್ಳುವುದಕ್ಕೆ ನನ್ನನ್ನು ಏನಾದರೂ ಇವರು ಮಂತ್ರಿ ಮಾಡಿ NCC, Museum, Library, Radio ಇವುಗಳಲ್ಲಿ ಯಾವುದಾದರೂ ಕೊಟ್ಟರೆ ಏನು ಸಾಯುವುದೇ? ಏನೋ ಯಾವುದಾದರೂ ಅನುಕೂಲವಾಗಿರುವುದನ್ನು ಕೊಟ್ಟರೆ ಸರಿ. Adult Education ಕೊಟ್ಟುಬಿಟ್ಟರೆ ಏನು ಮಾಡುವುದು? ನಾವೆಲ್ಲಾ ನಿಮ್ಮನ್ನೆಲ್ಲಾ ಕರೆದು ಕುಳ್ಳಿರಿಸಿಕೊಂಡು ನಿಮಗೆಲ್ಲಾ ಅ,ಆ,ಇ,ಈ. ಹೇಳಿಕೊಂಡು ಇರಬೇಕು. ನೀವೆಲ್ಲರೂ ಸಹ ಸಾಯಂಕಾಲದ ಹೊತ್ತಿಗೆ ನನ್ನ ಕಂಟ್ರೋಲ್‌ಗೆ ಸಿಗುವ ಹಾಗೆ ಇರುವುದಿಲ್ಲ. ಆಗ ನಮ್ಮ ಹಣೆಬರಹ ದೇವರೇ ಕಾಪಾಡಬೇಕು. ಇದೇ corruption. ಇನ್ನು ಏನೂ ಇಲ್ಲ. Portfolio ಇದೇ

ಬೇಕು, ಕ್ಯಾಬಿನೆಟ್ಟೇ ಆಗಬೇಕು, ನಾನು ಹೇಳಿದ ಹಾಗೆಯೇ ನಡೆಯಬೇಕು ಅದೆಲ್ಲಾ ಆದಮೇಲೆ next ಏನು ಎಂದರೆ, Secretary ಇವನೇ ಇರಬೇಕು, Director ಇವನೇ ಇರಬೇಕು, M.D. ಇವನೇ ಇರಬೇಕು, Joint Secretary ಇವನೇ ಇರಬೇಕು. Private Secretary ಯಾರಿರಬೇಕು ಎಂದರೆ ಭಾವಮೈದ ಇರಬೇಕು. ಅದೇ corruption. ಕೆಲವು ಆಫೀಸ್‌ಗಳಲ್ಲಿ Private Secretary ಗಳಿಗಿಂತ P.A.ಗಳೇ more powerful ಇರುತ್ತಾರೆ. ಏಕೆಂದರೆ, ಸಾಯಂಕಾಲದ ಹೊತ್ತು ಸೋಡಾ arrange ಮಾಡುವವನು ಅವನೇ ಆಗಿರುತ್ತಾನೆ. ಇದೇ corruption. ಈಗ ಅರ್ಥವಾಯಿಯೇ? ಮಾನ್ಯ ಪುಟ್ಟಣ್ಣಯ್ಯನವರೆ, ನಿಮಗೆ ಏನೂ ಗೊತ್ತಿಲ್ಲ. ಬರೀ ಹೋರಾಟ, ಕಬ್ಬು, ಇಲ್ಲಿ ರಸ ಇಷ್ಟು ಬರುತ್ತದೆ, ಅಲ್ಲಿ ಭೂಮಿಯಲ್ಲಿ ತೇವಾಂಶ ಅಷ್ಟಾಗಿದೆ, ಅಲ್ಲಿ ಸಾರಾಂಶಯಿದೆ. ಒಂದಿಷ್ಟು ದಿವಸಗಳ ಕಾಲ ಈ ಕಡೆಗೆ ಬನ್ರಿ ನಿಮಗೆ ವಿಚಾರ ಗೊತ್ತಾಗುತ್ತದೆ. ಯಾವ ಯೂನಿವರ್ಸಿಟಿಯಲ್ಲಿಯೂ ನಿಮಗೆ ಈ knowledge ಬರುವುದಕ್ಕೆ ಸಾಧ್ಯವಿಲ್ಲ. ನನ್ನನ್ನು ಯಾವುದಾದರೂ . . . .(ಗೊಂದಲ)

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು):- ನೀವು ಒಂದು institute open ಮಾಡುವುದು ಒಳ್ಳೆಯದು.

ಶ್ರೀ ಕೆ.ಆರ್. ರಮೇಶ್ ಕುಮಾರ್:- so ಅಲ್ಲಿಗೆ ಇವರ ತೀರ್ಮಾನ ಗೊತ್ತಾಯಿತಲ್ಲವೇ? ನನಗೆ next ಏನು job ಎಂಬುದು ಗೊತ್ತಾಯಿತಲ್ಲವೇ?

ಶ್ರೀ ಆನಂದ ವಿಶ್ವನಾಥ ಚಂದ್ರಶೇಖರ್ ಮಾಮನಿ:- Adult Education for MLA's, MLC's and MP's ಎಂದು ಮಾಡಿ ಎಂದು ನಿಮಗೆ C.M. ಸಾಹೇಬರು ಹೇಳಬಹುದು.

ಶ್ರೀ ಕೆ.ಆರ್. ರಮೇಶ್ ಕುಮಾರ್:- ಇದು ಬಹಳ interesting.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:- ಮಾನ್ಯ ರಮೇಶ್ ಕುಮಾರ್ ಸಾಹೇಬರೇ, ಹೇಗೂ ನಿಮಗೆ ಭವಿಷ್ಯ ಗೊತ್ತಾಯಿತು. ನೀವು ಹೇಗೆ ಬೇಕಾದರೆ ಹಾಗೆ ಹೊಡೆಯಬಹುದು. ಇನ್ನು ಹೋರಾಟ ಬೇಡ ನಿಮಗೆ. ಇನ್ನು ನೀವು ಹೇಗೆ ಮುಂದೆ ನೋಡುವುದಕ್ಕೆ ಹೋಗಬೇಡಿ.

ಶ್ರೀ ಕೆ.ಆರ್. ರಮೇಶ್ ಕುಮಾರ್:- ಬಹಳ ದಿವಸಗಳಿಂದ ನಾನು ಒಬ್ಬರು ಸಂಗಾತಿಯನ್ನು ಹುಡುಕಿದೆ. ಸ್ವಲ್ಪ ನಿಮ್ಮ ಮೇಲೆ ವಿಶ್ವಾಸ ಬರುತ್ತಿದೆ. ನಾನು ಏನಾದರೂ ಮಾಡುವುದು ಇದ್ದರೆ ನಿಮ್ಮನ್ನು ಜೊತೆಗೆ ಇಟ್ಟುಕೊಂಡೇ ಮಾಡುವುದು. ಮಾನ್ಯ ಅಧ್ಯಕ್ಷರೆ, ಎಷ್ಟನೇ ವರ್ಷ ಎಂಬುದು ಗೊತ್ತಿಲ್ಲ. ನಮ್ಮ ರಾಜ್ಯದಿಂದ ಒಬ್ಬರು ಕೇಂದ್ರದಲ್ಲಿ ಮಂತ್ರಿಯಾಗಿದ್ದರು. ಅವರಿಗೆ ಅದು ಎಂತಹದ್ದೋ youth portfolio ವನ್ನು ಏನೋ ಕೊಟ್ಟಿದ್ದರು. ಅದು ಆದಮೇಲೆ ಕೆಲವು ದಿವಸಗಳಿಗೆ ಸಂಪುಟ ಪುನರ್‌ರಚನೆ ಹಾಗೂ ಅದು ಇದು ಆದಾಗ Urban Development ಖಾತೆ ಕೊಟ್ಟರು. ಮಾನ್ಯ ಜಗದೀಶ್ ಶೆಟ್ಟರ್‌ರವರೆ, ಮಂತ್ರಿ ಆಗಲೇ ಆಗಿರುವವರಿಗೆ ಒಂದು ಇಲಾಖೆಯಿಂದ ಇನ್ನೊಂದು ಇಲಾಖೆಗೆ ಬದಲಾಯಿಸುವುದು ಏನು ಬಹಳ ದೊಡ್ಡ ಮಹತ್ತರವಾದ ಬದಲಾವಣೆಯೇ? ನಿಮಗೆ candidate ಯಾರು ಎಂಬುದು ಗೊತ್ತಿದೆ. Procession ನಲ್ಲಿ airport ನಿಂದ ಕರೆದುಕೊಂಡು ಬಂದುಬಿಟ್ಟರು. What does it mean? Urban Development ಎಂದರೆ, ಕಾಂಚಾಣ, ಝಣ ಝಣ. ಆಮೇಲೆ ಪ್ರಾಮಾಣಿಕತೆ ಬಗ್ಗೆ ಯಾರು ಮಾತನಾಡಿದರು? ನಾವು ಮಾತನಾಡುವವರು. ದಯಮಾಡಿ ಹೇಳುತ್ತೇನೆ. ಪ್ರಾಮಾಣಿಕತೆ ವಿಷಯ ಬಂದಾಗ ನಾವು ಕಾಂಗ್ರೆಸ್, ಜನತಾ ಪಕ್ಷ, ಬಿ.ಜೆ.ಪಿ., ಜೆ.ಡಿ.ಎಸ್., socialist party, republic party ಎಂದು ಬೋರ್ಡ್‌ಗಳನ್ನು ಹಾಕುವುದು ಬೇಡ. ಹೀಗೆಲ್ಲಾ ಮಾಡಿಕೊಳ್ಳಬಾರದು. ನಾವು ದೇಶ ಕಟ್ಟಬೇಕು, ಜವಾಬ್ದಾರಿಯುತವಾಗಿ ನಾವೆಲ್ಲರೂ ಒಗ್ಗಟ್ಟಾಗಿರಬೇಕು. ನಮ್ಮ ಮಧ್ಯೆ ಗೋಡೆಗಳಿರಬಾರದು. ನಾವೆಲ್ಲರೂ ಒಗ್ಗಟ್ಟಾಗಿರಬೇಕು. ಆಗಲೇ ದೇಶ ಇನ್ನಷ್ಟು ಬೇಗ ಸುಧಾರಿಸುವುದು. With all these departments, I will come to Health. Medical colleges ಜಾಸ್ತಿ ಮಾಡಿದೆವು, ಸರ್ಕಾರಿ ಮೆಡಿಕಲ್ ಕಾಲೇಜುಗಳನ್ನು ಜಾಸ್ತಿ ಮಾಡಿದೆವು. ಎಲ್ಲಿ ನೋಡಿದರೂ corporate Hospitals ಬಂದುಬಿಟ್ಟಿತು. ಕೇಳಿ ಮಾನ್ಯ ಮುಖ್ಯಮಂತ್ರಿಯವರು ಇಲ್ಲಿಯೇ ಇದ್ದಾರೆ. ದಿವಸಕ್ಕೆ ಎಷ್ಟು ಅರ್ಜಿಗಳಿಗೆ ಸಹಿ ಮಾಡುತ್ತಾರೆ ಕೇಳಿ. Medical relief ಗೆ ಸಂಬಂಧಿಸಿದಂತೆ ಎಷ್ಟು ಅರ್ಜಿ ಬರುತ್ತವೆ ಎಂದು ಕೇಳಿ. ಇವತ್ತಿಗೆ

ನೀವು ಆಗಲಿ, ನಾವು ಆಗಲಿ ಅಥವಾ ಅವರು ಆಗಲಿ, ಈ ಕಾರ್ಪೋರೇಟ್ ಹಾಸ್ಪಿಟಲ್ಸ್ ಹಾಗೂ ನರ್ಸಿಂಗ್ ಹೋಮ್ಸ್‌ಅನ್ನು ಕಂಟ್ರೋಲ್‌ಗೆ ತರುವುದಕ್ಕೆ ಅವರು ಹಾಕತಕ್ಕಂತಹ ಬಿಲ್‌ಗೆ ಏನಾದರೂ ರೀತಿ-ರಿವಾಜು, ನೀತಿ-ನಿಜಾಯಿತಿಯ ಲೆಕ್ಕಚಾರ ಇದೆಯೇ? ಯಾರಾದರೂ ಆಲೋಚನೆ ಮಾಡಿದ್ದೀರಾ? ಕಾಯಿಲೆ ಬಾ ಎಂದರೆ ಶ್ರೀಮಂತರಿಗೆ ಹಾಗೂ ಅನುಕೂಲಸ್ಥರಿಗೆ ಬರುತ್ತದೆಯೇ? ಬಡವರಿಗೆ ಕಾಯಿಲೆ ಬಂದರೆ ಅವರು ಎಲ್ಲಿಗೆ ಹೋಗಬೇಕು? ವಾಪಸ್ಸು ಹಣ ಕೊಡುವುದಿಲ್ಲ ಆ ರೀತಿಯ ಪರಿಸ್ಥಿತಿಯಿದೆ. ಆ ಲಕ್ಷ ರೂಪಾಯಿಗಳನ್ನು ಕೇಳುವುದನ್ನು ನೋಡಿದರೆ ಹದ್ದು-ಆಚಾರ ಏನೂ ಇಲ್ಲ. ಏನು ಇದರ ಅರ್ಥ? ಇದರ ಅರ್ಥವೇನು? ತಪ್ಪು ಮಾಡಿದರೆ ಅವರನ್ನು sue ಮಾಡುವುದಕ್ಕೆ ಒಂದು ಶಾಸನದ ಬಗ್ಗೆ ನಾವು ಆಲೋಚನೆ ಮಾಡಿದ್ದೇವೆಯೇ? ಪ್ರೈವೆಟ್ ಹೈಸ್ಕೂಲ್‌ಗೆ ಅನುಮತಿ ಕೊಡುವವರು ನಾವೇ, ಕಾನ್ವೆಂಟ್‌ಗಳಿಗೆ ಅವಕಾಶ ಕೊಡುವವರು ನಾವೇ, ಸರ್ಕಾರಿ ಶಾಲೆಗಳು ಮುಚ್ಚಿಹೋಯಿತೆಂದು ಹೇಳುವವರು ನಾವೇ.

ಶ್ರೀ ಬಸವರಾಜ ಬೊಮ್ಮಾಯಿ:- ಪ್ರೈವೆಟ್ ನರ್ಸಿಂಗ್ ಹೋಂ ಅಮೆಂಡ್‌ಮೆಂಟ್ ಆಕ್ಟ್ ಈ ಸದನಕ್ಕೆ ಬಂದು ಚರ್ಚೆಯಾಗಿ ವಾಪಸ್ಸು ಹೋಯಿತೆಂದರೆ ಲಾಬಿ ಎಷ್ಟು strong ಇರಬಹುದು.

ಶ್ರೀ ಕೆ.ಆರ್. ರಮೇಶ ಕುಮಾರ್:- ಬಸವರಾಜ ಬೊಮ್ಮಾಯಿರವರೆ ದೆಹಲಿ results ಬಗ್ಗೆ ಪ್ರಾರಂಭದಲ್ಲಿ ಬಹಳ interesting subject ಬಂತು. ಆ ಬಗ್ಗೆ ಮಾತನಾಡುತ್ತಿದ್ದೆವು. ಜಗದೀಶ್ ಶೆಟ್ಟರ್‌ರವರು percentage of votes ಎಷ್ಟೆಂದು ಹೇಳಿದರು. ನಮ್ಮ electoral system ನಲ್ಲಿ it is not percentage that is counted it is number of seats. ಏನೇನು ಕಾರಣಗಳು, ಏನೇನು ಘಟನೆಗಳು ಇರುತ್ತವೆಂದು ತಿಳಿದಿರುವುದಿಲ್ಲ for a person to get elected. How do we get elected? Polled votes ನಲ್ಲಿ valid votesನಲ್ಲಿ out of the contesting candidates, ಯಾರಿಗೆ highest number of votes ಬಿದ್ದಿರುತ್ತದೆ he/she, they are declared elected. ಗೆದ್ದು ಬಂದ ನಂತರ he/she ಅವರು ಜನರನ್ನು ಪ್ರತಿನಿಧಿಸಲೇಬೇಕೆಂಬ ನಿರ್ಬಂಧ ನಮ್ಮ ಜನ ಪ್ರಾತಿನಿಧಿಕ

ಕಾಯ್ದೆಯಲ್ಲಿ Representation of Peoples Act ನಲ್ಲಿ ಇಲ್ಲ. ಅದಕ್ಕೆ ಉದಾಹರಣೆಯೆಂದರೆ ನೀವು ಈಗ ಹೇಳಿರುವುದು. ನರ್ಸಿಂಗ್ ಹೋಂಗಳನ್ನು regulate ಮಾಡುವಂತಹ Act ಈ ಸದನಕ್ಕೆ ಬಂದು ಚರ್ಚೆ ಆಗಿ ಪಾಸ್ ಆಗದೆ, ಅದರ ಮೇಲೆ ಏನು ಕ್ರಮ ತೆಗೆದುಕೊಳ್ಳದೆ ಹಿಂದಕ್ಕೆ ಹೋಗುತ್ತದೆಯೆಂದರೆ ಜನರ ಹಿತ ಮುಖ್ಯವಲ್ಲ ನರ್ಸಿಂಗ್ ಹೋಂಗಳವರ ಹಿತ ಮುಖ್ಯವೆಂದಾಗುತ್ತದೆ. ಜನಪ್ರತಿನಿಧಿಗಳಿರುವ ಈ ಸಭೆಯಲ್ಲಿ ಅವರ ಲಾಭಿ work ಮಾಡುತ್ತದೆಯೇ ಹೊರತು ಜನರ ಹಿತ work ಮಾಡುವುದಿಲ್ಲ.

People's interest takes the second place, nursing home's interest takes the first place. ನಾನು ಹೇಳುತ್ತಿರುವುದು ಅದನ್ನು. It is not the question of Congress, BJP, JDS. As a House, ಎಲ್ಲಾ ಜನ ಕ್ಯೂನಲ್ಲಿ ನಿಂತು vote ಹಾಕಿ ನಮ್ಮನ್ನು ಕಳುಹಿಸಿರುವ ಜನರ ಋಣವನ್ನು ತೀರಿಸಿಕೊಳ್ಳುವ ವಿಚಾರದಲ್ಲಿ ನಾವು ಎಷ್ಟರಮಟ್ಟಿಗೆ ಕೆಲಸ ಮಾಡಿದ್ದೇವೆ? ಸಾಲ ತೆಗೆದುಕೊಂಡಿದ್ದರೆ ನಾನು ನಮ್ಮ ಅಪ್ಪನ ಮಗನಾಗಿ ಹುಟ್ಟಬೇಕು ಅವನ ಸಾಲ ತೀರಿಸುವವರೆಗೆ ನೆಮ್ಮದಿಯಿರುವುದಿಲ್ಲವೆಂದು ನಮ್ಮ ಕಡೆ ಮಾತನಾಡುತ್ತಾರೆ. ಇದನ್ನು ನಾವು ಋಣವೆಂದು ಹೇಳುತ್ತೇವೆ, ಹಳ್ಳಿ ಕಡೆ ಸಾಲವೆಂದು ಕರೆಯುವುದಿಲ್ಲ. ಕಾರಜೋಳರವರೆ ನಿಮ್ಮ ಭಾಷೆಯಲ್ಲಿ ಏನೆಂದು ಹೇಳುತ್ತಾರೆಂದು ನನಗೆ ಗೊತ್ತಿಲ್ಲ. ಸಾಯಬೇಕಾದರೆ ಮುದುಕರು ತಮ್ಮ ಮಕ್ಕಳನ್ನು ಕರೆದು ನಾನು ನಿಮ್ಮನ್ನು ಋಣಬಾಧೆಯಲ್ಲಿ ಇಟ್ಟಿಲ್ಲವೆಂದು ಹೇಳುತ್ತಾರೆ. ಋಣಬಾಧೆಯೆಂದರೆ ಸಾಲವೆಂದು ಅರ್ಥ. ಸಾಲವನ್ನು ಇಡದಿದ್ದರೆ ಅರ್ಧ ಆಸ್ತಿಯನ್ನು ಮಾಡಿ ಇಟ್ಟಂತೆ. ಆದರೆ, ಜನರ ಋಣ ನಮ್ಮ ಮೇಲೆ ಇಲ್ಲವೇ? ಪಕ್ಷಗಳನ್ನು ಬದಿಗಿಟ್ಟು ನಮ್ಮೆಲ್ಲರ ಮೇಲೆ ಜನರ ಋಣವಿಲ್ಲವೇ? ಜನರ ಋಣವನ್ನು ನಾವು ತೀರಿಸಬೇಕಾಗಿಲ್ಲವೇ? ಜನರ ಋಣವನ್ನು ತೀರಿಸುವ ದಿಕ್ಕಿನಲ್ಲಿ ನಮ್ಮ ಪ್ರಮಾಣ ಎಷ್ಟು ದೂರ ಸಾಗಿದೆ. I am not very happy. Corruptionನ ಒಂದು view of it ಹೇಳಿದೆ. ಪುಟ್ಟಣ್ಣಯ್ಯನವರೆ ನಾಳೆ ನೀವು ಮಂತ್ರಿ ಆಗುತ್ತೀರೆಂದು ಇಟ್ಟುಕೊಳ್ಳಿ. ನೀವು ಅಂದಾಜು ಎಷ್ಟು ಹಣವನ್ನು ಮಾಡಬಹುದು? ನೀವು ಶಾಲನ್ನು

ಹಾಕಿಕೊಳ್ಳುತ್ತೀರಿ 50 ಜೊತೆ ಶಾಲುಗಳನ್ನು ತೆಗೆದುಕೊಳ್ಳಿ ನನ್ನ ಆಕ್ಷೇಪಣೆಯಿಲ್ಲ. ನಿಮ್ಮ ಮಕ್ಕಳಿಗೆ ಮನೆ ಮಾಡಿಕೊಡಿ, ನಿಮಗೊಂದು ದೊಡ್ಡ ಮನೆ ಬೇಕು ಕಟ್ಟಿಸಿಕೊಳ್ಳಿ, extra ಎರಡು ಮನೆ ಇದೆ alright ಅವರಿಗೂ ಕೂಡ safety ಮಾಡಿಕೊಳ್ಳಿ. ನಿಮ್ಮ ಪ್ರಯಾಣಕ್ಕೆ ಏನೇನು ಬೇಕೋ ಎಲ್ಲವನ್ನು ಮಾಡಿಕೊಳ್ಳಿ ಎಲ್ಲಾ ಸೇರಿದರೆ ಎಷ್ಟಾಗುತ್ತದೆ? ಆದರೆ ದನಗಳ ರೀತಿ ನಾಚಿಕೆ, ಹೇಸಿಗೆ ಬಿಟ್ಟು, ಎಣಿಸುವುದಕ್ಕಾಗದೆ ಇರುವಷ್ಟು, ಯೋಚನೆ ಮಾಡುವುದಕ್ಕೆ ಆಗದಷ್ಟು, ಜಗತ್ತೆಲ್ಲವನ್ನೂ ವಿಸ್ತರಿಸಬೇಕು, ಎಲ್ಲವನ್ನು ಆಕ್ರಮಿಸಿಕೊಳ್ಳಬೇಕೆಂಬುದು ಎಷ್ಟು ಸರಿ. ಇವರೇನಾದರೂ ಅದನ್ನು ತಿನ್ನುತ್ತಾರಾ, ಉಣ್ಣುತ್ತಾರಾ, ಅನುಭವಿಸುತ್ತಾರಾ? ನನಗೆ 100 ಜೊತೆ ಸೂಟ್ ಇದ್ದು, ಮನೆಯೊಳಗಿನ ಗೂಟಕ್ಕೆ ಹಾಕಿರುತ್ತೇನೆ. ರಾತ್ರೋ ರಾತ್ರಿ ನಾನು ಮರಣ ಹೊಂದಿದರೆ ಏನು ಮಾಡುವುದು. 4–5 ಜೊತೆ ಬಟ್ಟೆ ಇರಬೇಕು ಸಾಕು. ನಮ್ಮವರಿಗೆ ದಾಹ ಬಂದಿದೆ, ಅಧಿಕಾರಿಗಳ ವಿಚಾರ ನಮಗೆ ಬೇಡ. Judge ಗಳು ತೆಗೆದುಕೊಂಡರೋ ಇಲ್ಲವೋ ನಾವು ನೋಡಿಲ್ಲ, ಮೀಡಿಯಾ ಬಗ್ಗೆ ನಮಗೆ ಗೊತ್ತಿಲ್ಲ ನಮ್ಮವರ ವಿಷಯ ನಾವು ಮಾತನಾಡಿಕೊಳ್ಳೋಣ. ಏನಪ್ಪ ನಿಮಗೆ ಮೀಟರ್ ಇದೆಯೇ ಇಡುವುದಕ್ಕೆ ಹಾಗಾದರೆ prove ಮಾಡು ಎಂದು ಹೇಳುತ್ತಾರೆ. ನಾವು ಎಲ್ಲಿ prove ಮಾಡುವುದು, prove ಮಾಡುವಷ್ಟರಲ್ಲಿ ನಾವು ಸತ್ತು ಹೋಗುತ್ತೇವೆ. ಪ್ರತಿ ಮನುಷ್ಯ ತನ್ನ ಶರೀರಕ್ಕೆ, ತನ್ನ ಮನಸ್ಸಿಗೆ, ತನ್ನ ಕುಟುಂಬಕ್ಕೆ ತನಗೆ ತಾನೇ ಒಂದು ಮೀಟರ್ ಫಿಕ್ಸ್ ಮಾಡಿಕೊಳ್ಳಬೇಕು. ನಾನು ಹೇಗೆ ಬದುಕುತ್ತಿದ್ದೇನೆ, ನಾನು ಎಲ್ಲಿಂದ ಹುಟ್ಟಿ ಬಂದಿದ್ದೇನೆ, ನನ್ನ ತಂದೆ–ತಾಯಿ ಯಾರು, ನನ್ನ ಬಳಿ ಇದ್ದದ್ದೇನು, ಕಳೆದದ್ದೇನು, ಉಳಿದದ್ದೇನೆಂದು ಚಿಂತನೆ ಮಾಡಬೇಕು. ನನಗೆ ನನ್ನ ಬಗ್ಗೆ ನೈಜವಾಗಿ ಉತ್ತರ ಕೊಡುವುದಕ್ಕೆ ಆಗದಿದ್ದ ಮೇಲೆ, ನಾನು ಮಲಗಿದಾಗ ನನ್ನ ಮನಸ್ಸು ಪ್ರತಿದಿವಸ ನೀನು ಕಳ್ಳ ಮಲಗಿದ್ದೀಯ, ನೀನು ಕಳ್ಳ ಮಲಗಿದ್ದೀಯ ಎಂದು ಹೇಳಿದಾಗ ನಾವು ಹೊರಗಿನ ಜನರ ಬಳಿ ಹೇಳುವುದೆಲ್ಲಾ ನಾಟಕವಾಗುತ್ತದೆಯೇ ಹೊರತು ಸತ್ಯವಾಗುವುದಿಲ್ಲ. Gandhi was a vey great man. ಆತ ಬೇರೆ ವಿಚಾರಗಳನ್ನೇನು ಹೇಳುವುದಿಲ್ಲ. ಗಾಂಧೀಜಿಯವರು

ಈ barrister dress ಹಾಕಿಕೊಂಡರೆ ನನ್ನ ಬಳಿ ಯಾರು ಬರುವುದಿಲ್ಲ, ನಾನು ಕೂಡ ಈ ದೇಶದಲ್ಲಿರುವ ಸಾಮಾನ್ಯ ಮನುಷ್ಯನ ರೀತಿ ಪೂರ್ತಿ ಬಟ್ಟೆ ಇಲ್ಲದೆ ಈ ರೀತಿ ಇದ್ದರೆ ನಾನು ಬೇರೆಯವರ ರೀತಿ common man ಆಗಿ ಕಾಣುತ್ತೇನೆಂದು ನೇರವಾಗಿ decide ಮಾಡಿಬಿಡುತ್ತಾನೆ. ಅವರದು ಎಷ್ಟು simple psychology ನೋಡಿ. ಇವರು ಓಡಾಡುತ್ತಿದ್ದರೆ ಕಷ್ಟವಾಗುತ್ತದೆ ನಮ್ಮ ಬಟ್ಟೆಯನ್ನು ಬಿಚ್ಚುತ್ತಾರೆಂದು ನಾವು ಯೋಚನೆ ಮಾಡಿ ಅವರನ್ನು ಫೋಟೋಗೆ ಏರಿಸಿದೆವು. ಕೆಲವು ಕಡೆ ಭದ್ರವಾಗಿ statue ಮಾಡಿ ಕೂರಿಸಿದ್ದೇವೆ. Political parties, ದೆಹಲಿಯಲ್ಲಿ ಚುನಾವಣೆ ನಡೆಸುವುದಕ್ಕೆ ಇವತ್ತು ಕಾಂಗ್ರೆಸ್‌ನಲ್ಲಿ ಹಣವಿರಲಿಲ್ಲವೇ? ಕೇಂದ್ರ ಸರ್ಕಾರವನ್ನು ಕೈಯಲಿಟ್ಟುಕೊಂಡಿರುವ ನಿಮ್ಮ ಬಳಿ ಹಣ ಇರಲಿಲ್ಲವೇ? ಕೇಜ್ರಿವಾಲ್‌ರವರ ಬಳಿ ಕೋಟಿಗಟ್ಟಲೆ ಹಣವಿತ್ತೇ? People's power, ಜನಶಕ್ತಿ. I am not bothered about the consequences. As a citizen of the this country, I salute the electorate of Delhi. They have demonstrated to the people of this country and to the whole world what the people's power is. ಜನಶಕ್ತಿ ಸಾಮ್ರಾಜ್ಯವನ್ನು ಆಳಬೇಕು. ನಾವು ಯೋಚನೆ ಮಾಡುವುದು, ನಾವು ಕಲ್ಪನೆ ಮಾಡಿಕೊಳ್ಳುವುದು, ನಾವು ಮಾತನಾಡುವುದು ಆ ದಿಕ್ಕಿನಲ್ಲಿರಬೇಕು. ಜಗದೀಶ್ ಶೆಟ್ಟರ್‌ರವರೆ ಜನ ಸಮುದಾಯಕ್ಕೆ ಸಂಬಂಧ ಇಲ್ಲದಿರುವ ವಿಚಾರಗಳನ್ನು, ನಾವು ನಮ್ಮ ಅಜೆಂಡಾವನ್ನು ಜನರ ಅಜೆಂಡಾ ಎಂದು ಹೇಳಿ ಜನರ ಮೇಲೆ ಹೇರುವುದಕ್ಕೆ ಹೋದಾಗ ನಾವು ಸಂಘಟಿತರಾಗಿರುತ್ತೇವೆ ಅವರು ಅಸಂಘಟಿತರಾಗಿರುತ್ತಾರೆ. Victims ಆದವರು they are disorganized, ಅವರು ಹೇಳುವುದಕ್ಕೆ forum ಇಲ್ಲ. ನಮಗೆ ನಮ್ಮ views ಅನ್ನು force ಮಾಡುವುದಕ್ಕೆ ನಮಗೆ forum ಇದೆ. ಅವರು ಯಾವಾಗ organize ಆಗುತ್ತಾರೆಂದರೆ ದೆಹಲಿಯಲ್ಲಿ ಎಲ್ಲರೂ ಒಬ್ಬರಿಗೊಬ್ಬರು phone ಮಾಡಿ ಮಾತನಾಡಿಕೊಂಡು mobile ಮೆಸೇಜ್ ಕೊಟ್ಟ ಹಾಗೆ ಮಾಡುತ್ತಾರೆ. We should understand. ನಾನು ಆಗಲೇ 1977ರ ಬಗ್ಗೆ ಹೇಳಿದೆ. ಇಂದಿರಾಗಾಂಧಿಯವರೆಂದರೆ ನಮಗೆ ದೇವರ ಸಮಾನ. ತಾಯಿ ಇದ್ದ ಹಾಗೆ.

1977 ರಲ್ಲಿ ಇಂದಿರಾಗಾಂಧಿಯವರು ಚುನಾವಣೆಯಲ್ಲಿ ಸೋತ ವಿಷಯ ತಿಳಿದಾಗ ನಾವೆಲ್ಲರೂ ಗಳಗಳ ಎಂದು ಅತ್ತುಬಿಟ್ಟಿದ್ದೇವೆ. ಸಂಜಯ್‌ಗಾಂಧಿ ಮತ್ತು ಇಂದಿರಾಗಾಂಧಿ ಇಬ್ಬರು ಸೋತು ಹೋದರು. ಇದರಲ್ಲಿ ಯಾರ greatness ಎಂದರೆ ಜನರದ್ದು. ಮುಖ್ಯಮಂತ್ರಿಗಳಾದ ನಮ್ಮ ಸಿದ್ದರಾಮಯ್ಯನವರಿಗೆ ನಾನು ಮೊನ್ನೆ ಕೂಡ ಹೇಳಿದ್ದೇನೆ, ಇದರ ಬಗ್ಗೆ ಹೆಚ್.ಡಿ. ಕುಮಾರಸ್ವಾಮಿಯವರು ಕೂಡ ತಮ್ಮ reservations express ಮಾಡಿದ್ದಾರೆ. ಈಗಲೂ ಕೂಡ ನಾನು ಧೈರ್ಯವಾಗಿ ಹೇಳುತ್ತೇನೆ. ವೈಯಕ್ತಿಕವಾಗಿ ಅಧಿಕಾರದ ಕಾರಣದಿಂದ ನಾನು ಹಣ ಸಂಪಾದನೆ ಮಾಡಬೇಕು, ಗುಡ್ಡೆಹಾಕಿಕೊಳ್ಳಬೇಕೆಂಬ ಆಲೋಚನೆ ಅವರಿಗೆ ಈ ಕ್ಷಣದವರೆಗೂ ಕೂಡ ಬಂದಿಲ್ಲವೆಂದು ಧೈರ್ಯವಾಗಿ ನಾನು ಹೇಳುತ್ತೇನೆ. ಇದನ್ನು ನಾನು watch ಮಾಡುತ್ತಲೇ ಇರುತ್ತೇನೆ. ಈ ಖಾಯಿಲೆ ಮನುಷ್ಯನಿಗಿದ್ದರೆ ಅದರ symptoms ಕಾಣುತ್ತದೆ. ಈ ರಥವನ್ನು ನಡೆಸಬೇಕಾದ ಕಾರಣ ಎಣ್ಣೆ ಹಾಕಬೇಕಲ್ಲವೇ, ಚಕ್ರ ಮುಂದಕ್ಕೆ ಹೋಗಬೇಕಲ್ಲ adjustment ಆಗುತ್ತಿರಬಹುದು. ಇದೆಲ್ಲಾ ಮಾಡಿದಾಗ ಕೀಲಿ ಕೈಗೆ, ಕಾಲಿಗೆ ಮೆತ್ತಿಕೊಂಡಿರುತ್ತದೆ ಬಣ್ಣಗಿಣ್ಣವಾಗಿರುತ್ತದೆ ನಿಜ. ಅವರು ಇದನ್ನು ಇಲ್ಲವೆಂದು ಹೇಳಿದರೆ ನಾವು ಒಪ್ಪುವುದಕ್ಕೆ ತಯಾರಿಲ್ಲ, ನಮ್ಮವೆಲ್ಲಾ ಹಳೆ ಗಾಡಿಗಳು ಮುಂದಕ್ಕೆ ತಳ್ಳಬೇಕಲ್ಲವೇ? ಅಷ್ಟರಮಟ್ಟಿಗೆ ಆಗಿರಬಹುದು, exemption ಏನಿಲ್ಲ. ನೋಡಿ ಇವರು ಮೈಸೂರಿನವರು, ಬಹಳ cautious ಇವರು. ಇನ್ನು defense ಮಾಡಲಿ ಎಂದು. ನಾನು ಅಷ್ಟೇ ಮಾಡುವುದು ಅದಕ್ಕಿಂತ ಜಾಸ್ತಿ ಮಾಡುವುದಿಲ್ಲ. ಶಿವಕುಮಾರ್‌ರವರೆ ನಿಮ್ಮ ವಿಷಯವನ್ನೇನು ನಾನು ಮಾತನಾಡಲಿಲ್ಲ, ಏಕೆ ಅಷ್ಟು ದೂರ ಹೋಗಿದ್ದೀರಿ? ಪುಟ್ಟಣ್ಣಯ್ಯರವರ ಹಿಂದೆ ಕುಳಿತರೆ ನಿಮಗೆ ರಕ್ಷಣೆ ಸಿಗುತ್ತದೆಂದು ಹೋಗಿದ್ದೀರಾ? ಪುಟ್ಟಣ್ಣಯ್ಯನವರೇ ಬೇರೆ, ನೀವೇ ಬೇರೆ ದಯಮಾಡಿ ಈ ಕಡೆಗೆ ಬನ್ನಿ.

ಮಾನ್ಯ ಅಧ್ಯಕ್ಷರೆ, ನಾವು ವಿದ್ಯಾರ್ಥಿಗಳಾಗಿದ್ದಂತಹ ಕಾಲದಲ್ಲಿ ನಿಜಲಿಂಗಪ್ಪ ಅವರ ಬಗ್ಗೆ ನಮಗೆ ಅಷ್ಟು ಪರಿಚಯವಿರಲಿಲ್ಲ. ನಿಜಲಿಂಗಪ್ಪ ಅವರ ಬಗ್ಗೆ ಜನರು ಅವರು ರಾಜಾಜಿನಗರದಲ್ಲಿ ಲೈನ್ ಲೈನ್ ಕಟ್ಟುತ್ತಾರೆಂದು

ಮಾತನಾಡಿಕೊಳ್ಳುತ್ತಿದ್ದರು. ಕಡೆ ಕಡೆಯಲ್ಲಿ ಅವರ ಪರಿಚಯವಾಗಿ, ಅವರನ್ನು ನೋಡಿದಾಗ, ಅವರ ಪ್ರಾಮಾಣಿಕತೆ, ಜೀವನ, ಬದುಕೆಲ್ಲವನ್ನು ನೋಡಿದಾಗ ಇದು ಎಂಥಹ ಸಮಾಜ ಎಂದು ಅನ್ನಿಸಿತು. Devaraj Urs my leader, I can shout from the top of the hill. No hesitation, no reservations. ಅದಕ್ಕಿಂತಲೂ ದೊಡ್ಡ pleasure ನನಗೆ ಇಲ್ಲ than declaring him as my leader. ಎಷ್ಟು ಹಿಂಸೆ ಮಾಡಿದರೂ, ಎಷ್ಟೆಲ್ಲಾ ಹೇಳಿದರೂ, Grover Commission ಮುಂದೆ 28 charges ಬಗ್ಗೆ, ದಯಮಾಡಿ ಕುಮಾರಸ್ವಾಮಿಯವರೆ, ನಿಮ್ಮ ತಂದೆಯವರನ್ನು ಕೇಳಿ. 28 charges ಪೈಕಿ ಅವರಿಗೆ ಸಂಬಂಧಿಸಿದ್ದು only two charges. ನೆಲಮಂಗಲದ ಹತ್ತಿರ ಅವರ ಅಳಿಯನಾದ ಡಾ|| ನಟರಾಜ್ ಅವರಿಗೆ ಹರ್ಬೇರಿಯಂ ಮಾಡುವ ಸಲುವಾಗಿ 15 ಎಕರೆ ಜಮೀನನ್ನು Land Grant Rules ಅನ್ನು ವಿರೋಧ ಮಾಡಿ ಕೊಡುವುದರಲ್ಲಿ Revenue Minister ಗೆ ಶಿಫಾರಸ್ಸು ಮಾಡಿದ್ದಾರೆನ್ನುವುದು ಮೊದಲನೆಯದು. ಎರಡನೇಯದಾಗಿ ಸದಾಶಿವನಗರದಲ್ಲಿ ಒಂದು ದೊಡ್ಡ ಬಿ.ಡಿ.ಎ. ನಿವೇಶವನ್ನು ತೆಗೆದುಕೊಂಡಿದ್ದಾರೆ. ಅವರಿಗೆ ಮೂರು ಜನ ಹೆಣ್ಣು ಮಕ್ಕಳು. ಮೂವರಲ್ಲಿ ಒಬ್ಬ ಹೆಣ್ಣು ಮಗಳಿಲ್ಲ, ಇಬ್ಬರು ಹೆಣ್ಣು ಮಕ್ಕಳು ಮಾತ್ರ ಉಳಿದುಕೊಂಡಿದ್ದಾರೆ. ಅವರು ಏನು ಮಾಡಿಕೊಂಡಿದ್ದಾರೆನ್ನುವುದು ನಮಗೆ ಗೊತ್ತಿಲ್ಲ. ಮಕ್ಕಳ safety ಗೆ ಎಂದು ಹೇಳಿ, ಗಾಡಿ ತಳ್ಳುವುದಕ್ಕೆ ಬಂದ ಎಣ್ಣೇ ಏನಿದೆ ಅದನ್ನು ಎಂದಿಗೂ ಮಕ್ಕಳಿಗೆ ಯಾವತ್ತೂ ಎಲ್ಲಿಯೂ ಎತ್ತಿಡಲಿಲ್ಲ. ಆದರೆ ಇಂದು ದೇವರಾಜ್ ಅರಸು ಅವರ ಜಯಂತಿಯನ್ನು ಇಷ್ಟವಿಲ್ಲದವರೂ ಸಹ ಮಾಡುತ್ತಾರೆ. ಅದು ಅನಿವಾರ್ಯವಾಗಿದೆ. ಸಿದ್ಧರಾಮಯ್ಯನವರಿಗೆ ನಾನು ಸದನದ ಮೂಲಕ ಅಪೀಲ್ ಮಾಡುವುದೇನೆಂದರೆ, ಅವರಿಗೂ ಮತ್ತು ನನಗೆ 6 ತಿಂಗಳಿನಿಂದ ಒಂದು ವರ್ಷದವರೆಗೆ age difference ಇರಬಹುದು. ನನಗೀಗ 64 ವರ್ಷ, ಅವರಿಗೆ 65 ವರ್ಷ ಇರಬಹುದು ಅಥವಾ 64 ವರ್ಷ ಇರಬಹುದು. ನಮಗೆ ಇನ್ನೂ ಕಡಿಮೆಯಾಗುತ್ತಾ ಹೋಗುತ್ತದೆ. ನಾವು ಎಷ್ಟು ಜಾಣರೆಂದರೆ, ಆಯಸ್ಸು ಕಡಿಮೆಯಾಗುತ್ತಿದೆ ಎಂದು ಹೇಳುವ ಬದಲು ವಯಸ್ಸಾಗುತ್ತಾ ಹೋಗುತ್ತಿದೆ

ಎನ್ನುತ್ತೇವೆ. ನಾವು ಬಹಳ ಬುದ್ಧಿವಂತರು, ನಮಗೆ ಸಾಯುವುದಕ್ಕೆ ಭಯ, ನಮಗೆ ಬದುಕುವುದಕ್ಕೆ ಆಸೆ. ಆಯಸ್ಸಾಯಿತೆಂದು ಹೇಳುವ ಬದಲು ವಯಸ್ಸು ಬೆಳೆಯುತ್ತಿದೆಯೆಂದು ಹೇಳುತ್ತೇವೆ. ಯಾವಾಗ ಏನಾಗುತ್ತದೋ ಗೊತ್ತಿಲ್ಲ. ದಿವಂಗತರಾದ ದೇವರಾಜು ಅರಸು ಅವರನ್ನು ಮತ್ತು ನಿಜಲಿಂಗಪ್ಪ ಅವರನ್ನು ನೆನಪು ಮಾಡಿಕೊಳ್ಳಿ. ಚರಿತ್ರೆಯ ಒಂದು ಭಾಗವಾಗಿ ಉಳಿಯಬೇಕು. Lower level corruption ಏನಿದೆ, ನೀವು ಮನಸ್ಸು ಮಾಡಿದರೆ ಲಗಾಮು ಹಾಕಬಹುದು. You start this from transfers, start this from postings. ಇವು ಯಾವ ರೀತಿ ನಡೆಯಬೇಕೆಂದರೆ, ಅವರು ನಿರ್ಧಾರ ಮಾಡಿರುವುದರಿಂದ ಯಾರಿಗೂ ಬಗ್ಗುವುದಿಲ್ಲ, ಜನರನ್ನು ನಿಮ್ಮ ಕಡೆ ನೀವು ತೆಗೆದುಕೊಳ್ಳಿ.

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಕೆ.ಆರ್. ರಮೇಶ್ ಕುಮಾರ್:- ಮಾನ್ಯ ಅಧ್ಯಕ್ಷರೆ, ಇನ್ನು ಐದೇ ನಿಮಿಷ ಅಷ್ಟೆ. ಮುಗಿಸುತ್ತೇನೆ.

ಶ್ರೀ ಆರ್. ಅಶೋಕ್:- ಇದು ಎರಡನೇ ಬ್ರೇಕ್. ಮೊದಲು ಒಂದು ಆಯಿತು.

ಶ್ರೀ ಕೆ.ಆರ್. ರಮೇಶ್ ಕುಮಾರ್:- ನೀವು ಬಂದರೆ ಇನ್ನೂ ಹೆಚ್ಚಿಗೆ ಮಾತನಾಡಬೇಕೆನ್ನುವ ಉತ್ಸಾಹ ಬರುತ್ತದೆ. ನಿಮ್ಮ ಲವಲವಿಕೆ ಬಹಳ ಚೆನ್ನಾಗಿದೆ. ಆದರೆ ನೀವು ಬೆಲ್ ಕಡೆ ಕೈ ಮಾಡುತ್ತಾ ಇರುತ್ತೀರಿ.

ಅಧ್ಯಕ್ಷರು:- ನಿಮ್ಮ ಭಾಷಣ ಕೇಳಬೇಕೆಂದೇ ಇವತ್ತು ಮಧ್ಯಾಹ್ನದ ಮೇಲೆ ಇಷ್ಟು ಜನ ಸೇರಿದ್ದಾರೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್:- ಈ ಅಸೆಂಬ್ಲಿ ಕಥೆಯನ್ನು ಹೇಳುತ್ತೇನೆ ಕೇಳಿ. ಯಾರೂ ಯಾರ್ಯಾರನ್ನೂ ಕೇಳುವುದಿಲ್ಲ. ನಾನೇನೋ ಟ್ರಿಕ್ ಮಾಡಿ ಇವರುಗಳನ್ನು ಹಿಡಿದಿಟ್ಟುಕೊಳ್ಳುವ ಉಪಾಯವನ್ನು ಕಂಡುಹಿಡಿದುಕೊಂಡಿದ್ದೇನೆ. ಆ ಒಂದು ಮಾತನ್ನು ಮುಖ್ಯಮಂತ್ರಿಗಳಿಗೆ

ಹೇಳುತ್ತಾ, ಬರುವ ವರ್ಷದ ವಂದನಾ ನಿರ್ಣಯದಲ್ಲಿ ಇಡೀ ಸದನ ಹೆಮ್ಮೆಯಿಂದ, ಸಂತೋಷದಿಂದ ಪಾಸ್ ಮಾಡುವಂತಹ ಪಾಲಿಸಿ statement ನಿಮ್ಮ ಕಡೆಯಿಂದ ಬರಲಿ. 1972 ನೇ ಇಸವಿಯಲ್ಲಿ Houseಗೆ ಬಂದವರ ಪೈಕಿ ಇವರು ಮತ್ತು ಕೋಳಿವಾಡ್ ಇಬ್ಬರು ಉಳಿದಿದ್ದಾರೆಂದು ಹೇಳಿದೆ. ಅವರೂ ಕೂಡ Chief Ministership ಗೆ empanel ಆಗಿದ್ದವರೇ? ಆಗಲಿಲ್ಲ. ಆದರೆ Chief Minister ಆಗಬೇಕೆಂದು ಒಂಭತ್ತನೇ ವರ್ಷದಲ್ಲಿಯೇ ಝಂಡಾ ಹಿಡಿದುಕೊಂಡು ಬಂದವರಲ್ಲ. ಪ್ರಮಾಣ ಸವೆಯುತ್ತಾ, ಸವೆಯುತ್ತಾ ಎಲ್ಲೆಲ್ಲಿ ಹೋಗುತ್ತೇವೆಯೋ ಗೊತ್ತಿರುವುದಿಲ್ಲ. ಜವಾಬ್ದಾರಿ ಮೈಮೇಲೆ ಬಿದ್ದರೆ, ಅದನ್ನು ದಕ್ಷತೆ, ನಿಷ್ಠೂರ, ನಿಷ್ಟೆಯಿಂದ, ಪ್ರಾಮಾಣಿಕತೆಯಿಂದ ನಿರ್ವಹಣೆ ಮಾಡುತ್ತಾರೆ. ಇಂತಹ ಅವಕಾಶ ಜೀವನದಲ್ಲಿ ಸಿಗಬೇಕಲ್ಲವೇ? ನೀವು ಮಾಡುತ್ತೀರೆನ್ನುವ ವಿಶ್ವಾಸವನ್ನು ವ್ಯಕ್ತಪಡಿಸಿ, ಮಾನ್ಯ ರಾಜ್ಯಪಾಲರ ಕೈಯಲ್ಲಿ ಏನು ಓದಿಸಿದಿರಿ, on the report ಮೇಲೆ ನಾಲ್ಕೈದು ವಿಷಯಗಳನ್ನು ಮಾತನಾಡಿ ನನ್ನ ಮಾತುಗಳನ್ನು ಮುಗಿಸಿ ಬಿಡುತ್ತೇನೆ.

ಮಾನ್ಯ ಅಧ್ಯಕ್ಷರೆ, ಪುಟ ಸಂಖ್ಯೆ 2 ರಲ್ಲಿ ಪ್ಯಾರಾ ನಂ. 3 ರಲ್ಲಿ 'ನನ್ನ ಸರ್ಕಾರವು ಆಡಳಿತವನ್ನು ನಾಗರಿಕರ ಮನೆ ಬಾಗಿಲಿಗೆ ಕೊಂಡೊಯ್ಯಲು ನಿರಂತರವಾಗಿ ಶ್ರಮಿಸುತ್ತಿದೆ ಹಾಗೂ ರೈತರ, ಬಡವರ ಮತ್ತು ಸಮಾಜದಲ್ಲಿ ಹಿಂದುಳಿದವರ ಅಭಿವೃದ್ಧಿಗೆ ಹಾಗೂ ಅವರ ಜೀವನದ ಗುಣಮಟ್ಟವನ್ನು ಸುಧಾರಿಸಲು ಕಟಿಬದ್ಧವಾಗಿರುತ್ತದೆ'. ಇದು ನಿಮ್ಮ ಉದ್ದೇಶ ಹಾಗೂ ಅಂತರಂಗ. ಇದು ಜಾರಿಗೆ ಬಂದಿರುವುದಿಲ್ಲ. ಆದರೂ ತೊಂದರೆಯಿಲ್ಲ. Atleast ನಿಮಗೆ ಒಳ್ಳೆಯ ಉದ್ದೇಶವಿದೆ. ಬರುವ ವರ್ಷಕ್ಕಾದರೂ ಇದು ಅನುಷ್ಠಾನಗೊಳ್ಳಲಿ ಎಂಬ ಹಾರೈಕೆಯಿಂದ ಅದನ್ನು ಅಲ್ಲಿಗೆ ಕೈ ಬಿಡುತ್ತಿದ್ದೇನೆ. That is only the intension expressed. That is not the achievement so far.

ಪುಟ ಸಂಖ್ಯೆ 3 ರಲ್ಲಿ ಪ್ಯಾರಾ ಸಂಖ್ಯೆ 7 ರಲ್ಲಿ ತೋಟಗಾರಿಕಾ ಕ್ಷೇತ್ರದ ಬಗ್ಗೆ ಹೇಳುವುದಾದರೆ, ನನ್ನ ಮತಕ್ಷೇತ್ರಕ್ಕೆ ಸಂಬಂಧಿಸಿದಂತೆ ಈಗಾಗಲೇ ಮೂರು ವರ್ಷ ಕಳೆದು ನಾಲ್ಕನೇ ವರ್ಷದ ಬರಗಾಲವನ್ನು

ಎದುರಿಸುತ್ತಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ದಯಾಪರರಾದ ತಾವು ಕೇಳಿಸಿಕೊಳ್ಳಬೇಕು. ಕೋಲಾರ ಮತ್ತು ಚಿಕ್ಕಬಳ್ಳಾಪುರ ಎರಡು ಜಿಲ್ಲೆಗಳಲ್ಲಿ ಇಲ್ಲಿಯವರೆಗೆ ಮಳೆ ಇಲ್ಲದ ಕಾರಣ ಭೂಮಿ ಸಂಪೂರ್ಣವಾಗಿ ಒಣಗಿ 40,000 ಹೆಕ್ಟೇರ್ ಮಾವಿನ ಮರಗಳು ಸಂಪೂರ್ಣವಾಗಿ ಉರುಳಿ ಹೋದವು. ಅದೇ ನಮ್ಮ ಜೀವನದ ಬಂಡವಾಳವಾಗಿತ್ತು. ಹೈನುಗಾರಿಕೆಯೂ ಬಿದ್ದು ಹೋಗುತ್ತಿದೆ. ರೇಷ್ಮೆ ಕೃಷಿಯನ್ನು ಕೈ ಬಿಟ್ಟೇ ಬಿಟ್ಟಿದ್ದೇವೆ. ತಾವು ಈ ಬಗ್ಗೆ ಯೋಚನೆ ಮಾಡಿ. ಯೂನಿವರ್ಸಿಟಿ ಮತ್ತು ಇಲಾಖೆಯವರು ಬಂದಿದ್ದು ಇದುವರೆವಿಗೂ ಕೂಡ ಸರ್ಕಾರ 2–3 ಕಾರ್ಯಕ್ರಮಗಳನ್ನು ಮಾಡಿದೆ. ನೀವು ನಮಗೆ ಪ್ಯಾಕೇಜ್ ಕೊಡುತ್ತೀರೋ, ಪರಿಹಾರ ಕೊಡುತ್ತೀರೋ, ಏನು ಮಾಡುತ್ತೀರೋ? . . . ಸರ್ಕಾರ ಮಾಡದಿದ್ದರೆ ಪರವಾಗಿಲ್ಲ. ನೀವು ನಮ್ಮ ವಿರೋಧ ಪಕ್ಷದ ನಾಯಕರು, ನೀವಾದರೂ ನಮ್ಮ ಮಾವು ಬೆಳೆಗಾರರ ಬಗ್ಗೆ ಮಾತನಾಡಿದ್ದರೆ ನಾವು ಬಹಳ ಖುಷಿ ಪಡುತ್ತಿದ್ದೆವು ಜಗದೀಶ್ ಶೆಟ್ಟರ್ ಅವರೆ. ನೀವು ಹುಬ್ಬಳ್ಳಿಯವರಾಗಿದ್ದರೂ, ಮುಖ್ಯಮಂತ್ರಿಗಳಾದ ಸಂದರ್ಭದಲ್ಲಿ ನಮ್ಮ ಊರಿನಲ್ಲಿ ಸಂತೋಷ ಪಡಲಿಲ್ಲವೇ? ನಮ್ಮ ಬಗ್ಗೆ ನೀವು ಏಕೆ ಮಾತನಾಡಲಿಲ್ಲ? ನೀವು ಬರೀ ಹುಬ್ಬಳ್ಳಿ, ಧಾರವಾಡದಲ್ಲೇ ಸುತ್ತುತ್ತೀರಿ. ಬೆಂಗಳೂರು ದಾಟಿ ಈ ಕಡೆಗೂ ಬನ್ನಿ. ಆಂಧ್ರಕ್ಕೆ ಕರೆದುಕೊಂಡು ರಾಜಮಂಡರಿ ಮತ್ತು ಸುತ್ತಲಿನ ಊರುಗಳನ್ನು ತೋರಿಸುತ್ತೇವೆ. ಅಲ್ಲೆಲ್ಲಾ ಬಹಳ ಚೆನ್ನಾಗಿದೆ.

ಶ್ರೀ ಬಸವರಾಜ್ ಬೊಮ್ಮಾಯಿ:– ಅಲ್ಲೇ ಏನಿದೆ?

ಶ್ರೀ ಕೆ.ಆರ್. ರಮೇಶ್ ಕುಮಾರ್:– ಮಾನ್ಯ ಸದಸ್ಯರಾದ ಬಸವರಾಜ್ ಅವರಿಗೆ ರಾಜಮಂಡ್ರಿ, ಹೈದ್ರಾಬಾದ್, ಪುನಾದಲ್ಲಿ ಏನಿದೆ ಎಎನ್ನುವುದು ಗೊತ್ತು. ಸುಮ್ಮ ಸುಮ್ಮನೆ ಅಲ್ಲೇನಿದೆ ಎಂದು ಕೇಳುತ್ತಾರೆ.

ಶ್ರೀ ಬಸವರಾಜ್ ಬೊಮ್ಮಾಯಿ:– ನಿಮ್ಮ ಜೊತೆಯಲ್ಲಿ ಸುತ್ತಿದ ಕಾರಣ ಸ್ವಲ್ಪ ಗೊತ್ತು.

ಶ್ರೀ ಕೆ.ಆರ್. ರಮೇಶ್‌ಕುಮಾರ್:– ನಾನು ನಿಮ್ಮ ತಂದೆಯವರ ಜೊತೆ ಸುತ್ತಾಡಿದ್ದೇನೆ. ನೀವು ನನಗೆ ಏನು ಸಾಕಾಗುತ್ತೀರಾ ಹೇಳಿ. ಬಹಳ pathetic situation. ಅಧ್ಯಕ್ಷರೆ ತಾವು ಈ ಬಗ್ಗೆ ಯೋಚನೆ ಮಾಡಿ. ನಾನು ತಮಗೆ ಹೇಳುವುದೇನೆಂದರೆ, ಒಂದೊಂದು ಗಿಡ ಬೆಳೆಸಬೇಕಾದರೂ ನಮ್ಮ ಜೀವವನ್ನು ಕೊಟ್ಟಿರುತ್ತೇವೆ. ಲಾರಿಗಳ ಮುಖಾಂತರ ಡಬ್ಬಗಳಲ್ಲಿ ರತ್ನಗಿರಿ ಆಲ್ಫಂನ್ಸೋ ಗಿಡಗಳನ್ನು ತರಬೇಕಾದರೆ, ಮಕ್ಕಳನ್ನು ತರುವ ಹಾಗೆ ಜೋಪಾನವಾಗಿ ತಂದಿರುತ್ತೇವೆ. ನಾವು ಬೆಳೆಸಿದ ಗಿಡಗಳು ಫಸಲು ಕೊಡಬೇಕಾದ ಸಮಯದಲ್ಲಿ ಕಣ್ಣೆದುರಿಗೆ ಉರುಳಿದರೆ ಹೇಗಾಗುತ್ತದೆ? 40,000 ಹೆಕ್ಟೇರ್ ಪ್ರದೇಶ ಮಾನ್ಯ ಜಗದೀಶ್ ಶೆಟ್ಟರ್ ಅವರೆ. ಮುಖ್ಯಮಂತ್ರಿಗಳ ಮುಖಾಂತರ I appeal to the whole House. United ಆಗಿ you give us some relief. Please bail us out of this crisis.

ಇನ್ನೂ ನೀರಾವರಿಯ ಬಗ್ಗೆ ನಂತರ ಮಾತನಾಡುತ್ತೇನೆ. ಸಹಕಾರ ಸಂಘ ಬಗ್ಗೆ ಹೇಳುವುದಾದರೆ ಇದು ಬಹಳ ವಿಚಿತ್ರ. ನಮ್ಮ ರಾಜ್ಯದಲ್ಲಿ ಸೌಹಾರ್ದಗಳು ಸೇರಿ, ಒಟ್ಟು 32,000 ಸಹಕಾರ ಸಂಘಗಳಿವೆ. ಇವುಗಳ ಎಲ್ಲದರ percentage ಸೇರಿದರೆ ರಾಜ್ಯದ ಜನಸಂಖ್ಯೆ ಶೇ. 5.6 ರಷ್ಟು ಅಷ್ಟೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್:– Membership ಇಲ್ಲ. ನಾವು 0% interest ಕೊಡತಕ್ಕಂಥದ್ದು, 3% interest ಕೊಡತಕ್ಕಂಥದ್ದು ಇದು ಎಲ್ಲ ಯಾರಿಗೆ ಅನ್ವಯಿಸುವುದು? ಮಾನ್ಯ ಕಾರಜೋಳರವರೆ, only 5.6%. ನೀವು ಅದರಲ್ಲಿ ಇಲ್ಲ. ನೀವು ಕೇಳಲೇ ಇಲ್ಲ. ಬೆಳಿಗ್ಗೆ ಯಾವುದೋ accident ವಿಷಯ ಇಟ್ಟುಕೊಂಡು ಕುಳಿತುಕೊಂಡಿರಿ.

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ರಮೇಶ್‌ಕುಮಾರ್ ರವರೆ, ನಾನು ಬೆಳಿಗ್ಗೆ ಕೇಳಿದ್ದೆ. ತಾವು ಬಂದಿರಲಿಲ್ಲವೆಂದು ಕಾಣಿಸುತ್ತದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಮಾನ್ಯ ರಮೇಶ್‌ಕುಮಾರ್ ರವರೆ, ತಾವು ಏನು ಹೇಳುತ್ತಿದ್ದೀರಿ ಕಳೆದ ಎರಡು ವರ್ಷದಲ್ಲಿ ಸರ್ಕಾರಕ್ಕೆ ಅಂಕಿ–ಅಂಶಗಳ ಸಮೇತ 3–3 ಗಂಟೆ, 4–4 ಗಂಟೆ ಇಟ್ಟಿದ್ದೀವಿ. ನಿಮ್ಮ

Agricultural Sector ದ್ದು ಇರಬಹುದು. ರೈತರನ್ನು ಉಳಿಸಿ ಎಂದು ನಾನು ನಿನ್ನೆಯೂ ಹೇಳಿದೆ. ನೀವು, ಏನು ಸಹಕಾರಿ ಬ್ಯಾಂಕ್ ಬಗ್ಗೆ ಹೇಳಿದ್ದೀರಿ, ಬಹುಶಃ, ತಾವು ನನ್ನ ಮೊದಲ ಭಾಷಣವನ್ನು ತೆಗೆದು ನೋಡಿ. ನೀವು ಕೊಡತಕ್ಕಂಥದ್ದರಲ್ಲಿ ಯಾವ ಯಾವ ರೀತಿಯಲ್ಲಿ ಎಷ್ಟು percentage ರೈತರಿಗೆ ಹೋಗುತ್ತದೆ? ಎಲ್ಲ ವಿವರಣೆಯನ್ನು ಇಟ್ಟಿದ್ದೇನೆ. ಆದರೂ, ನಾವು ಬದಲಾವಣೆಯನ್ನು ಕಾಣುತ್ತಿಲ್ಲ. ನಿನ್ನೆ ಎಲ್ಲಾ ಭಾಗದ ರೈತರ ಬಗ್ಗೆ ಚರ್ಚೆ ಮಾಡಿದ್ದೇವೆ. ಮೊದಲು ರೈತರ ಬಗ್ಗೆ ಚರ್ಚೆ ಮಾಡಿ, ಇರುವ ಸಮಸ್ಯೆ ಹೇಳಿ ನಂತರ ಆ ವಿಷಯಕ್ಕೆ ಹೋದೆ.

ಅಧ್ಯಕ್ಷರು:– ಅವರು ಹೇಳುವುದನ್ನು ಅವರು ಹೇಳಲಿ. ನೀವು ಹೇಳುವುದನ್ನು ನೀವು ಹೇಳಿ.

ಶ್ರೀ ಕೆ.ಆರ್. ರಮೇಶ್‌ಕುಮಾರ್:– ಮಾನ್ಯ ಅಧ್ಯಕ್ಷರೆ, ನಾನು, ಏಕೆ ಈ ಮಾತನ್ನು ಹೇಳಿದೆ ಎಂದರೆ, ಹೋದ ವರ್ಷ ಸರ್ಕಾರದ ಅಂಕಿ–ಅಂಶಗಳ ಪ್ರಕಾರ, 16.5 ಲಕ್ಷ ಕುಟುಂಬಗಳಿಗೆ ನಮ್ಮ benefit reach ಆಗಿರುತ್ತದೆ. Scheduled Caste, Scheduled Tribes Development Corporation, Women & Children Development Corporation, Minorities Development Corporation, BCM Development Corporation ಈ ನಾಲ್ಕು ಸಂಸ್ಥೆಗಳು ಸೇರಿ 2014 ರ ಮಾರ್ಚ್‌ನ ಅಂತ್ಯದ ವೇಳೆಗೆ ಸಬ್ಸಿಡಿ, ಸಹಾಯ, ಸಾಲ ಎಲ್ಲ ಸೇರಿ ಕೊಟ್ಟಿರುವಂಥದ್ದು 493 ಕೋಟಿ ರೂ.ಗಳು. 1,32,000 ಕುಟುಂಬಗಳು ಫಲಾನುಭವಿಗಳಾಗಿದ್ದಾರೆ. ಅದೇ KSFC ಯಲ್ಲಿ ರಾಜ್ಯ ಹಣಕಾಸು ಸಂಸ್ಥೆಯಲ್ಲಿ 1,317 ಯೂನಿಟ್ಸ್‌ಗೆ ಅಂದರೆ ಅವರು ಕೂಡ familiesಗಳೆ. ನಾವು ಕೊಟ್ಟ ಹಣ 709 ಕೋಟಿ ರೂ.ಗಳು. ಎಲ್ಲಿ ಸಾಮಾಜಿಕ ನ್ಯಾಯ? ನೀವು ಏಕೆ raise ಮಾಡುವುದಿಲ್ಲ? ನಾನು ರೂಲಿಂಗ್ ಪಾರ್ಟಿನವನಾದರೂ ನಾನೇ raise ಮಾಡಬೇಕು. It is not the question of ruling party or opposition party. ಇದನ್ನು ಅವರು ಬಂದು ಮಾಡಿದ್ದಲ್ಲ. ಅವರ ವಿರುದ್ಧ ಮಾತನಾಡಿದ್ದವರು ಪರ ಮಾತನಾಡಿದ ಹಾಗೆ. System ನಲ್ಲಿ ಇರತಕ್ಕಂಥ deficiencies, ಈ Assembly, ಇದರ ಕಲಾಪ,, ನಮ್ಮ ಸಮಯ

ಎಲ್ಲ ಕಡಾಯ. ಉಳ್ಳವರ ಪರವಾಗಿ ಆಗಿ ಹೋದರೆ ಬಾಯಿ ಇಲ್ಲದವನ ಪರವಾಗಿ ಮಾತನಾಡುವುದಕ್ಕೆ ನಾವು ಇಲ್ಲಿ ಬಂದಿರುವುದು. ಅವನ ಧ್ವನಿಯನ್ನು ನಾವು ಎತ್ತದೇ ಹೋದರೆ ಪ್ರಯೋಜನವಾಗುವುದಿಲ್ಲ. ಸಹಕಾರ ಕ್ಷೇತ್ರವನ್ನು last man ವರೆಗೆ ತಾವು extend ಮಾಡದೆ ಹೋದರೆ, membership ಅನ್ನು ಕೊಡದೆ ಹೋದರೆ, 3% interest ಸಿಗದೆ ಹೋದರೆ, ನಾನು ಕಳೆದ ಬಾರಿಯೂ ಹೇಳಿದ್ದೇನೆ. ಈ private money leaders ಕಾಟಕ್ಕೆ ಜನ ಸರ್ವನಾಶ ಆಗಿಬಿಡುತ್ತಾರೆ. 1963 ರಲ್ಲಿ, ಪಂಡಿತ ಜವಹರಲಾಲ್ ನೆಹರುರವರು ಎಲ್ಲ ರಾಜ್ಯದ ಮುಖ್ಯಮಂತ್ರಿಗಳಿಗೆ ಪತ್ರ ಬರೆಯುತ್ತಾರೆ. Letters of Prime Minister to Nation ಎಂದು ಒಂದು ಪುಸ್ತಕ release ಆಗಿದೆ. ಆ ಪುಸ್ತಕ release ಆಗಿ ಬಹಳ ದಿನಗಳೇ ಆಗಿವೆ. 1963 ರಲ್ಲಿ ಮಾನ್ಯ ಪ್ರಧಾನ ಮಂತ್ರಿಗಳು ಬರೆದ ಪತ್ರದಲ್ಲಿ ನೆಹರು ರವರು ಬರೆಯುತ್ತಾರೆ. ಅದರಲ್ಲಿ 'ನೀವು ಸಹಕಾರ ಕ್ಷೇತ್ರದಲ್ಲಿ, ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ last unitಗೆ ಹೆಣ್ಣುಮಕ್ಕಳನ್ನು ತೆಗೆದುಕೊಂಡು ಹೋಗಿ members ಮಾಡದೇ ಹೋದರೆ, ಕಡೆ ಮನುಷ್ಯರನ್ನು ನೀವು member ಮಾಡದೇ ಹೋದರೆ ಈ ದೇಶ ಉಳಿಯುವುದಿಲ್ಲ' ಎಂದು ಹೇಳುತ್ತಾರೆ. 1963 ರಿಂದ 2015ರವರೆಗೆ ನಮ್ಮ membership percentage 5.6%. Sir, I will leave it. Certain proposals are coming. ನಾನು, ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ. Land reforms ಆಗಿ ಹೋಯಿತು. ಬೇರೆ ಬೇರೆ ಆಗಿ ಹೋಯಿತು. ಇವೆಲ್ಲಾ ಕೆಲವು drastic measures, revolutionary measures. ನೀವು ಆ place ಗೆ substitute ಆಗಬೇಕಾಗಿದ್ದರೆ take a bold decision. How to bring in, all these people? ನಾನು ಅವರಿಗೆ benefit ಅನ್ನು ಹೇಗೆ extend ಮಾಡಿಸುವುದು? ಆರ್ಥಿಕ ಸಂಕಷ್ಟಗಳು ಯಾವಾಗಲೂ ಇದ್ದದ್ದೆ, ಎಲ್ಲರಿಗೂ ಇದ್ದೇ ಇರುತ್ತದೆ. ಅದರ ಬಗ್ಗೆ ನಾವು ಹೊಸದಾಗಿ ಏನೂ ಮಾತನಾಡಿಕೊಳ್ಳಬೇಕಾಗಿಲ್ಲ. Agriculture Price Commision (ಕೃಷಿ ಬೆಲೆ ಆಯೋಗ). ನಿಮ್ಮ ಎದುರಿನಲ್ಲಿಯೇ ಜಗಳವಾಗಿದೆ. ನಾವು ಮಾಡಿರತಕ್ಕಂಥ ಕೃಷಿ ಬೆಲೆ ಆಯೋಗ ಕೇವಲ ನಾಮಾಕಾವಸ್ಥೆ ಆಯೋಗ. ರೈತರಿಗೆ ಇದರಿಂದ

ಪ್ರಯೋಜನವಿಲ್ಲ. ರೈತ ತನ್ನ ಉತ್ಪನ್ನಕ್ಕೆ ತಾನು ಬೆಲೆಯನ್ನು ನಿಗದಿ ಮಾಡತಕ್ಕಂಥ ವೈಜ್ಞಾನಿಕ ವ್ಯವಸ್ಥೆಯನ್ನು ನಾವು ರೂಪಿಸದೆ ಹೋದರೆ ಅದಕ್ಕೆ ಅರ್ಥವೇ ಇರುವುದಿಲ್ಲ. ಪಾನಿಪುರಿ ಮಾರುವವನು ಒಂದು ಪ್ಲೇಟ್‌ಗೆ ಇಷ್ಟು ಎಂದು ಹೇಳುತ್ತಾನೆ. ಅಷ್ಟು ಕೊಟ್ಟು ನಾವು ತಿನ್ನಬೇಕು. ಫುಟ್‌ಬಾತ್ ಮೇಲೆ ಏನಾದರೂ ಪದಾರ್ಥ ಕಂಡರೆ ಅದಕ್ಕೆ ರೇಟ್ ನಿಗದಿ ಮಾಡಿದ್ದಾರೆ. ನಮ್ಮನ್ನು ಏತಕ್ಕೆ ಇಷ್ಟು ಕಡೆಯಾಗಿ ಕಾಣುತ್ತೀರಿ? ದಯಮಾಡಿ, ನಿಮ್ಮ ಕಷ್ಟ ಸಾವಿರ ಇರಬಹುದು. ಒಂದೇ ಹಂತದಲ್ಲಿ ತೆಗೆದುಕೊಂಡು ಬರಬೇಕೆಂದು ಹೇಳುವುದಿಲ್ಲ. ಇದನ್ನು party ಮೇಲೆ ಹೋಗುವುದಕ್ಕಿಂತ take the whole House into confidence. ಕೃಷಿ ಬೆಲೆ ಆಯೋಗದ ವಿಚಾರದಲ್ಲಿ ನೀವು ಬಜೆಟ್‌ನಲ್ಲಿ you most come forth with some progressive statement. These are all the avenues for you. ನೀವು ಈ ರಾಜ್ಯದ ಜನರ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿಯಬೇಕೆನ್ನುವುದು ನಿಮ್ಮ ಆಸೆ ಆದರೆ ಇವೆಲ್ಲಾ ಕೆಲವು ಅವಕಾಶಗಳು ನಿಮಗೆ ಇವೆ ಎನ್ನತಕ್ಕಂಥ ಮಾತನ್ನು ನಾನು ಹೇಳುತ್ತಿದ್ದೇನೆ. ಅದರ ಜೊತೆಗೆ, ನೀರಾವರಿ. ಇದು ಬಹಳ interesting ಆಗಿದೆ. ನಮ್ಮಲ್ಲಿ ಈಗ ಲಭ್ಯವಿರುವ ನೀರು ಎಲ್ಲ ಜಲಾಶಯಗಳಲ್ಲಿ ಕೂಡ as on 4th February, 2015, 462 TMC ಆಗಿದೆ. Am I right Mr. Basavaraj Bommai? All put together as per the information given to me. ನಮಗೆ ಯಾವ ರೀತಿ ಆಗಿದೆ ಎಂದರೆ, ನಮ್ಮ ರಾಜ್ಯದ ಬಜೆಟ್ 1,20,000 ಕೋಟಿ ಇದೆ. ಈಗ 38.66 ಲಕ್ಷ.. .. What is stored now?

ಶ್ರೀ ಬಸವರಾಜ್ ಬೊಮ್ಮಾಯಿ:– ಡ್ಯಾಮ್‌ನಲ್ಲಿ ಇರುವಂಥ storage capacity ಸಾಮಾನ್ಯವಾಗಿ from 1.5%, 3 times more is the utilization.

ಶ್ರೀ ಕೆ.ಆರ್. ರಮೇಶ್ ಕುಮಾರ್:– Fine, I am talking about available water, what is stored.

ಶ್ರೀ ಬಸವರಾಜ್ ಬೊಮ್ಮಾಯಿ:- ಮಾನ್ಯ ರಮೇಶ್‌ಕುಮಾರ್ ರವರೆ, ಅಂದರೆ, ಡ್ಯಾಮ್ ನಲ್ಲಿ 1 TMC ನೀರು store ಆದರೆ 3 TMC ನೀರು ಅಂದರೆ 3 ಬಾರಿ ತುಂಬಿ utilize ಆಗುತ್ತದೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್:- ಮಾನ್ಯ ಅಧ್ಯಕ್ಷರೆ, ನಮಗೆ ಇನ್ನೂ irrigate ಮಾಡುವುದು ಬಾಕಿ ಇರುವುದು another 10.30 ಲಕ್ಷ ಹೆಕ್ಟೇರ್ಸ್‌ಗಳಷ್ಟು ನಾವು ಇನ್ನು irrigate ಮಾಡಬೇಕಾಗಿದೆ. 2000-01 ರಲ್ಲಿ ನಾವು ಜಲಸಂಪನ್ಮೂಲ ಇಲಾಖೆಗೆ ನೀಡಿದ ಹಣ 2,879.14 ಕೋಟಿ ರೂ.ಗಳು ಆಗಿದೆ. In terms of percentage 39.58% 2007-08 ರಲ್ಲಿ amount ಜಾಸ್ತಿಯಾಗಿದೆ. ಅಂದರೆ, 3,145.77 ಕೋಟಿ ರೂ.ಗಳು ಆಗಿದೆ. ಆದರೆ, percentage wise 39.58 ರಿಂದ 17.69 ಕ್ಕೆ ಬಂದಿದೆ. The volume increases. The percentage comes down. ನಾವು ಹೇಗೆ ಮಾಡುವುದು? ಬಹಳ interesting ಆಗಿದೆ. 2014-15 ರಲ್ಲಿ Budget proposals ಪ್ರಕಾರ, ನಾವು Irrigation ಗೆ ಮೀಸಲು ಇಟ್ಟ ಹಣ 10,454 ಕೋಟಿ ರೂ.ಗಳು.

percentage is 16% Mr. Basavaraj. Hon'ble Speaker, out of the money that you talk of the budget is 10,454 crores constitutes only 60%. ನಾವು graph ಕೆಳಗಡೆ ಹೋಗುತ್ತಿದ್ದೇವೆ. ನಾವು ಇದನ್ನು irrigate ಮಾಡುವುದು ಯಾವಾಗ? If we don't earmark more money ಇದರಲ್ಲಿ ಇವರು ಒಟ್ಟು ಹಣ ಕೊಡುತ್ತಾರಲ್ಲ ಅದು ಬಹಳ ಚೆನ್ನಾಗಿದೆ. Details of

budget allocation for 2014-15 total grant for Water Resources Department 10,000 ಕೋಟಿ ರೂ.ಗಳು ಕಾಡಾಗೆ 5,533.75. AIBPಗೆ 3,741. Grants available for works 5,725. ಅಲ್ಲಿಗೆ 8% ಗೆ ಬಂದರು. ನೀವು ಒಂದು ವರ್ಷಕ್ಕೆ 5,000 ಕೋಟಿ ರೂ.ಗಳನ್ನು ಇಟ್ಟುಕೊಂಡು ಹೋದರೆ ಯಾವ ಕಾಲಕ್ಕೆ ನಾವು ಮಾಡುವುದಕ್ಕೆ ಆಗುತ್ತದೆ? ಬೆಳಿಗ್ಗೆ ಜಗಳ ಆಯಿತು. ವ್ಯಂಗ್ಯ ಮಾಡಿದರು. ನೀವು ನಡಿಗೆ ಮಾಡಿದ್ದಿರಿ. ಬಸವೇಶ್ವರನ ಹೆಸರಿನಲ್ಲಿ promise ಮಾಡಿದ್ದಿರಿ. Now, let us be very sincere to ourselves. At this rate, ಈ ಬಜೆಟ್ allocationsಅನ್ನು ನಾವಿಟ್ಟುಕೊಂಡು

ಐದು ಸಾವಿರ, ಆರು ಸಾವಿರ ಕೋಟಿ ಕೊಟ್ಟರೆ ನಮ್ಮ ಎತ್ತಿನಹೊಳೆ ಪ್ರಾಜೆಕ್ಟ್ ಪೂರ್ಣಗೊಳಿಸಿ ಯಾವ ಕಾಲಕ್ಕೆ ಕೊಡುತ್ತೀರಿ? ಇನ್ನೂ ಎರಡು on going projects ಇವೆ. ಹೊಸ ಪ್ರಾಜೆಕ್ಟ್‌ಗೆ ಅನುದಾನ, ಸಮಯ ಬಹಳ ಕಡಿಮೆಯಿದೆ, ನೀವು utilization ಮಾಡಿಕೊಳ್ಳಲೇಬೇಕು. ನಿಮಗೆ ಬಾಕಿ ಇರುವಂಥದ್ದು 10 ಲಕ್ಷ ಹೆಕ್ಟೇರ್, ಅದನ್ನು ನೀವು ಶೀಘ್ರಗತಿಯಲ್ಲಿ ಮಾಡದೇ ಹೋದರೆ ಕಷ್ಟವಾಗುತ್ತದೆ. ಆದ್ದರಿಂದ, ನಾನು ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ, I think ನಿಜಲಿಂಗಪ್ಪನವರು ಲೋಕಾಪವಾದಕ್ಕೆ ಗುರಿಯಾಗಿ ಶಿಲುಬೆಗೆ ಏರಿದರು. ಅವರು ಪ್ರಾರಂಭಿಕ ಹೆಜ್ಜೆಯನ್ನಿಡದೆ ಹೋಗಿದ್ದರೆ UKPಯಲ್ಲಿ ಇಷ್ಟೊಂದು ಕೆಲಸ ಆಗುತ್ತಿರಲಿಲ್ಲ. ದೇವರಾಜ ಅರಸು ಕಾಲದಲ್ಲಿ National Development Council Meeting ನಲ್ಲಿ he took the first place or the second place. The competition is to be between him and Bansi Lal of Haryana. We were surplus in power, today the situation is otherwise. So, ದಯಮಾಡಿ irrigationಗೆ ನೀವೇನು allocation ಮಾಡಬೇಕೆಂದು ಇದ್ದೀರೋ, let this House have the honesty of purpose. It is not the Government, it is not the question of Congress or BJP or JDS. ನಮ್ಮಲ್ಲಿ ಹಣ ಎಷ್ಟಿದೆ, ನಾವು ಎಷ್ಟು ಕೊಡುತ್ತೇವೆ, ಎಷ್ಟು ಮಾಡುವುದಕ್ಕಾಗುತ್ತದೆ, ಎಷ್ಟು ಮಾಡುವುದಕ್ಕಾಗುವುದಿಲ್ಲ. ನಾವು ಎತ್ತಿನಹೊಳೆಯನ್ನೂ ಮಾಡುತ್ತೇವೆ, ಬೆಣ್ಣೆತೊರೆಯನ್ನೂ ಮಾಡುತ್ತೇವೆ, ಯುಕೆಪಿ ಪ್ರಾಜೆಕ್ಟ್‌ನ್ನೂ complete ಮಾಡುತ್ತೇವೆ, ಎಲ್ಲವನ್ನೂ ಮಾಡುತ್ತೇವೆ, ದುಡ್ಡು ಮಾತ್ರ ಇಷ್ಟೇ ಕೊಡುತ್ತೇವೆಯೆಂದರೆ 10,000 ಕಾರ್ಡ್ ಪ್ರಿಂಟ್ ಮಾಡಿ ಊರಿನವರನ್ನೆಲ್ಲಾ ಊಟಕ್ಕೆ ಕರೆದು ಅಲ್ಲಿ 130 ಜನರಿಗೆ ಅಡುಗೆ ಮಾಡಿಸಿದರೆ ಅಲ್ಲಿ ಎಲ್ಲಾ ಬಡಿದುಕೊಂಡು ಸಾಯುವುದಕ್ಕೇ? Irrigationಗೆ ನೀವು ಖರ್ಚು ಮಾಡುವಂಥ ಹಣ it is for the State, it is not for individuals, ಯಾವುದನ್ನು ಸೆಕೆಂಡರಿ ಮಾಡಿಕೊಳ್ಳಬೇಕು, consensus meeting ಮಾಡಿ, take all the parties into confidence. ನಾವು priority ಮೇಲೆ ಇದನ್ನು ಮಾಡಬೇಕಾಗುತ್ತದೆ ಎನ್ನುವ ಮಾತನ್ನು ಹೇಳಿ, ರಾಜ್ಯಪಾಲರ ಭಾಷಣದ

ಮೇಲೆ ಮಾತನಾಡುವುದಕ್ಕೆ ತಾವು ಅವಕಾಶ ಕೊಟ್ಟಿದ್ದೀರಿ. ಕಡೆಯದಾಗಿ, ನಮಗೆ ಇವತ್ತು ಬಹಳ ದುಃಖದ ದಿನ ಅಧ್ಯಕ್ಷರೆ, ಕಾರಣ, ದೆಹಲಿಯಲ್ಲಿ ನಮ್ಮ ಪಾರ್ಟಿ ಒಂದು ಕಡೆಯೂ ಗೆದ್ದಿಲ್ಲ. ನೀವೇನೋ ಈಗ ಪಾರ್ಟಿಯಲ್ಲಿಲ್ಲ, ನೀವು ಯಾವುದೇ ಪಾರ್ಟಿಗೆ ಸೇರಿದವರಲ್ಲ. ನಿಮಗೇನು ಅಷ್ಟು ದುಃಖವಿರುವುದಿಲ್ಲ. ನಿವೇನೋ ಬಿಟ್ಟು ಬಂದರೆ ಮತ್ತೆ ದುಃಖ ಹಂಚಿಕೊಳ್ಳಬಹುದು.

ಅಧ್ಯಕ್ಷರು:– ಏನೂ ಇಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್:– ನಿಮಗೇನು ದುಃಖವಿಲ್ಲವೇ, ಬಿಡಿ. ಆದರೆ, ಇವರ ದುಸ್ಥಿತಿ.

ಅಧ್ಯಕ್ಷರು:– ಒಂದು ಮಾತನ್ನು ಹೇಳುತ್ತೇನೆ, ಇನ್ನು ನಾನು politicsಗೆ ಬರುವುದಿಲ್ಲ. ಈ ಅರಣ್ಯ ಭೂಮಿಯ ಸಮಸ್ಯೆಯನ್ನು ಬಗೆಹರಿಸಬೇಕೆನ್ನುವ ಕಾರಣಕ್ಕಾಗಿ ನಾನು ಬಂದಿದ್ದೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್:– ಇರಲಿ ಅಧ್ಯಕ್ಷರೆ, ನೀವು ಹಾಗೇ ಇರಿ.

ಅಧ್ಯಕ್ಷರು:– ಹಾಗೇ ಇರುವುದಿಲ್ಲ, ಹಾಗೆ ಇರುವುದು. ನನ್ನ ಕೇತ್ರದಲ್ಲಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:– ಹಾಗೇ ಇರಿ, ಎಂದರೆ ಅರಣ್ಯದಲ್ಲೇ ಇರಿ ಅಂತಾನಾ?

ಅಧ್ಯಕ್ಷರು:– ಪುಟ್ಟಣ್ಣಯ್ಯನವರೆ, ನನ್ನ ಕ್ಷೇತ್ರದಲ್ಲಿ ಕೊನೆ ಪಕ್ಷ ಮಾರ್ಚ್ endನೊಳಗಾಗಿ ಒಂದು ಸಾವಿರ ಜನಕ್ಕಾದರೂ ಹಕ್ಕುಪತ್ರ ಕೊಡೋಣವೆಂದು ಹತ್ತತ್ತು ಸಾರಿ ತಿರುಗಿ ತಿರುಗಿ ಹೆಣ ಬಿದ್ದಿದೆ, ಇವತ್ತು ಅಲ್ಲಿ ಮೀಟಿಂಗ್ ಇಟ್ಟುಕೊಂಡರೆ ಆ ಎ.ಸಿ. ಹೇಳುತ್ತಾರೆ, ಎಸ್.ಟಿ.ಯವರದ್ದು ಮಾತ್ರ ಮಾಡೋಣ, ಬಾಕಿಯದ್ದು ಹಾಗೆ ಇಟ್ಟುಕೊಳ್ಳೋಣ ಎನ್ನುತ್ತಾರೆ. ಅದಕ್ಕಾಗಿ ಹುಷಾರ್ ಎಂದು ಈಗ ಫೋನ್ ಮಾಡಿ ಹೇಳಿದ್ದೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್:- ಮಾನ್ಯ ಅಧ್ಯಕ್ಷರೆ, ನೀವು ಅಷ್ಟು ಪರಿತಪ್ಪಿಸಬೇಕಾಗಿಲ್ಲ. ನಿಮ್ಮ ಶಕ್ತಿ, ನಿಮ್ಮ ವ್ಯಕ್ತಿತ್ವ, ನಿಮ್ಮ ನೆರಳು, ನೋಡಿ ನಾನು ಈ ವಿಧಾನಸಭೆಯಲ್ಲಿ ಗ್ಯಾಲರೀಸ್‌ಗೆ ಬಂದು ನಿಮ್ಮ ಭಾಷಣವನ್ನು ಕುಳಿತುಕೊಂಡು ನೋಡುತ್ತಿದ್ದೆ. ಇವತ್ತು ನನಗೆ ಈ ಸೌಭಾಗ್ಯ ಸಿಕ್ಕಿದೆ. You are an institution, ಒಳ್ಳೆಯ Chief Minister ಇದ್ದಾರೆ. ಯಾವುದೂ ನಿಮಗೆ ಮೀರಿದ್ದಿಲ್ಲ, ನೀವು ನೆನೆಸಬೇಕಷ್ಟೆ, ನೀವು ಹೇಳಿದರೆ ಎಲ್ಲವೂ ನಡೆಯುತ್ತದೆ. ಆದರೆ, ನೀವು ಮಾತನಾಡುತ್ತಾ result ವಿಚಾರವನ್ನು ತಪ್ಪಿಸಿಬಿಟ್ಟಿರಿ. ನಾವು lastಗೆ ಒಂದು decision ತೆಗೆದುಕೊಂಡೆವು. ನಮಗೆಲ್ಲಾ ದೆಹಲಿಯಿಂದ ಫೋನ್ ಮಾಡಿ ಹೇಳಿದರು. ಏನು ಮಾಡೋಣಪ್ಪಾ, ಥತ್, ಬೇಡವೇ ಬೇಡ ನಮಗೆ ಒಂದು ಸಿಟು ಸಹ ಬೇಡ ನಮಗೆ. ಹೇಳಿಬಿಡಿ ಆ ದೆಹಲಿ ಜನಕ್ಕೆ ಎಂದೆವು. ಇವರು ಪ್ರದಾನಮಂತ್ರಿಯನ್ನಿಟ್ಟುಕೊಂಡು ಇಷ್ಟು ದೊಡ್ಡ ಆರ್ಭಟ ಮಾಡಿ ಅದು ಎಂಥ ಕಿಲಾಡಿಗಳು ನೋಡಿ ಆ ದೆಹಲಿ ಜನರು. ಕೊಡುವುದು ಕೊಟ್ಟರೋ 4 ಕಡೆಗಾದರೂ ಗೆಲ್ಲಿಸಿದರಾ, ಕೆಲಸಕ್ಕೆ ಬರುತ್ತಿತ್ತು. 3 ಕಡೆ ಗೆಲ್ಲಿಸಿ ಒಬ್ಬ ಆಳನ್ನು ಇವರಿಗೆ shortage ಬೇರೆ ಇಟ್ಟಿದ್ದಾರೆ. ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾವು ಗೆದ್ದವರಲ್ಲ, ನೀವು ಗೆದ್ದವರಲ್ಲ, ಯಾವಾಗಲೂ ಗೆಲ್ಲುವುದು ಜನ. ಜನರಿಗೆ ಸಮಯ ಬಂದಾಗ ಹೇಳುತ್ತಾರೆ. ನಾವು ಸಮಯ ಬೇಡದೆ ಇದ್ದಾಗಲೆಲ್ಲಾ ಹೇಳುತ್ತೇವೆ. ಇದೇ ನಮಗೂ ಅವರಿಗೂ ಇರುವ ವ್ಯತ್ಯಾಸ. ಹೇಗೆ ಹಾರ್ಮೋನಿಯಂ, ತಬಲ ಆರ್ಕೆಸ್ಟ್ರಾಗೆ ಮ್ಯಾಚ್ ಆಗಬೇಕೋ ಜನರ ಭಾವನೆಗಳು ನಮ್ಮ ಕಲಾಪಗಳು ಈ ಆರ್ಕೆಸ್ಟ್ರಾದಲ್ಲಿ ಮ್ಯಾಚ್ ಆದಂತೆ ಯಾವಾಗ ನಾವು ಅವರ ಭಾವನೆಗಳನ್ನು ಇಲ್ಲಿ ಬಿತ್ತರಿಸುತ್ತೇವೆ, ಅವರ ಹಾಡಿಗೆ ತಕ್ಕಂತೆ ನಾವು ಇಲ್ಲಿ ಕುಣಿಯುತ್ತೇವೆ, ಇಲ್ಲಿ ತಾಳ ಹಾಕುತ್ತೇವೆ, ಆಗ ಈ ಸಂಸತ್ತಿಗೆ, ಸಂಸದೀಯ ವೇದಿಕೆಗೆ ಬೆಲೆ ಬರುತ್ತದೆ, ಗೌರವ ಬರುತ್ತದೆ. ಈ ವಂದನಾ ನಿರ್ಣಯಕ್ಕೆ, ಇನ್ನೊಂದಕ್ಕೆ ಮತ್ತೊಂದಕ್ಕೆ ಒಂದು ವೈಭವ ಬರುತ್ತದೆ. ಇಲ್ಲದೇ ಹೋದರೆ ಇದು ವೈದಿಕ ಸಂಪ್ರದಾಯವಾಗಿ ಬಿಡುತ್ತದೆ. ವೈದಿಕ ಸಂಪ್ರದಾಯದಲ್ಲಿ ಶ್ರಾದ್ಧ ಮಾಡುವಾಗ ಹೇಳುವವನಿಗೆ ಮಂತ್ರ ಗೊತ್ತಿರುತ್ತದೆ. ಮಾಡುವವನಿಗೆ ಅದರ ಪರಿಣಾಮ ಗೊತ್ತಿರುವುದಿಲ್ಲ. ಮೂಗು ಹಿಡಿದುಕೋ

ಎಂದರೆ ಮೂಗು ಹಿಡಿದುಕೊಳ್ಳುವುದು, ಬಲಗಡೆಗೆ ತಿರುಗಿಕೋ ಎಂದರೆ ಬಲಗಡೆಗೆ ತಿರುಗಿಕೊಳ್ಳುವುದು, ಎಲ್ಲಾ lastಗೆ ಏನೋ ಮಾಡಿದ್ದು, ಒಂದಷ್ಟನ್ನು ತಿಂದು ಮಲಗಿಕೊಳ್ಳುವುದು. ಶ್ರದ್ಧೆ ಇಲ್ಲದೇ ಮಾಡುವಂಥ ಶ್ರಾದ್ಧ, ಆದ್ದರಿಂದ ನಮ್ಮ ಕಲಾಪಗಳು ಶ್ರದ್ಧೆ ಇಲ್ಲದ ಶ್ರಾದ್ಧವಾಗುವುದು ಬೇಡ ಎಂದು ಹೇಳಿ ತಮಗೆ ವಂದಿಸಿ ನನ್ನ ಗೌರವಪೂರ್ವಕ ನಮಸ್ಕಾರಗಳನ್ನು ತಿಳಿಸಿ ಇಡೀ ಸದನ ಕುತೂಹಲದಿಂದ, ಗೌರವರದಿಂದ ನನಗೆ ಈ ಮಾತನ್ನಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಅವರೆಲ್ಲರಿಗೂ ವಂದಿಸಿ ನನ್ನ ಮಾತನ್ನು ಮುಕ್ತಾಯಗೊಳಿಸುತ್ತಿದ್ದೇನೆ.

ಅಧ್ಯಕ್ಷರು:- ಮಾನ್ಯ ಮುಖ್ಯಮಂತ್ರಿಗಳೆ, ಮಾನ್ಯ ರಮೇಶ್‌ಕುಮಾರ್‌ರವರು ಮಾತನಾಡುವ ಸಂದರ್ಭದಲ್ಲಿ ಹರಿಜನ, ಗಿರಿಜನ ಇವರ ಗಂಗಾಕಲ್ಯಾಣದ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದರು. ನೀರಿನ ವಿಚಾರ, ಈ ವರ್ಷದ ಕೊನೆಯಾಗುತ್ತಾ ಬಂದಿದೆ, ಇನ್ನೂ ಗಂಗಾಕಲ್ಯಾಣ ಯೋಜನೆಯಡಿ ಎರಡು-ಮೂರು ವರ್ಷದಿಂದ ಬೋರ್‌ವೆಲ್ ಕೊರೆಯದೇ ಹಾಗೆ ಬಿದ್ದಿದ್ದಾವೆ. ಅದಕ್ಕಾಗಿ ಜಿಲ್ಲಾಧಿಕಾರಿಗಳಿಗೆ ಜವಾಬ್ದಾರಿ ಕೊಟ್ಟು ಟೆಂಡರ್ ಕರೆದು ಕೊಡಿ ಎಂದು ಹೇಳಿ ನಿಮಗೆ ಪತ್ರ ಬರೆದಿದ್ದೇನೆ. ದಯವಿಟ್ಟು you take a personal decision. ಇವರಿಗೆ ಗೊತ್ತಾಗುತ್ತದೆ, ನಿಮಗೆ ಹೇಳುವುದಕ್ಕೆ ಬರುತ್ತಿಲ್ಲ ಅಲ್ಲವೇ?

ಶ್ರೀ ಆರ್.ವಿ. ದೇಶಪಾಂಡೆ:- ಅದನ್ನೇ ಮಾತನಾಡುತ್ತಿದ್ದೇನೆ. Departmentನಿಂದ ಜನರಿಗೆ ಕೆಲಸಗಳಾಗಬೇಕು.

ಶ್ರೀ ತನ್ವೀರ್ ಸೇಠ್:- ಮಾನ್ಯ ಸಭಾಧ್ಯಕ್ಷರೆ, ನಮ್ಮ ಎಲ್ಲಾ ಸಮಿತಿಗಳಲ್ಲಿ ವರದಿ ಮಾಡಿಕೊಟ್ಟಿದ್ದೇವೆ. ಪತ್ರಗಳನ್ನು ಬರೆದಿದ್ದೇವೆ.

ಅಧ್ಯಕ್ಷರು:- ದಯವಿಟ್ಟು ಬೇಗ, ಇನ್ನೆರಡು ತಿಂಗಳುಗಳಿದೆ. ಅದಕ್ಕೋಸ್ಕರ ಹೇಳುತ್ತಿದ್ದೇನೆ. ಈಗ question hour.

ಶ್ರೀ ತನ್ವೀರ್ ಸೇಠ್:- ಮಾನ್ಯ ಅಧ್ಯಕ್ಷರೆ, ಗಂಗಾ ಕಲ್ಯಾಣ ವಿಚಾರವಾಗಿ ಕೇಂದ್ರೀಕೃತವಾಗಿ ಬೆಂಗಳೂರಿನಲ್ಲಿ ನೀವು ಟೆಂಡರ್ ಕರೆದಾಗ

ಅದು ಎಲ್ಲಾ ನಿಗಮಗಳು ಸೇರಿ ಒಬ್ಬರೇ ಕರೆಯುವುದು. ಹೀಗಾಗಿ ಏನಾಗುತ್ತಿದೆಯೆಂದರೆ. . . . . .

ಅಧ್ಯಕ್ಷರು:– ಮತ್ತೆ, ಈ ವಿಚಾರ ಮಾತನಾಡುವಾಗ ಏಕೆ ನೀವು ಮಾತನಾಡಲಿಲ್ಲ.

ಶ್ರೀ ತನ್ವೀರ್ ಸೇಠ್:– ಮಾನ್ಯ ಅಧ್ಯಕ್ಷರೆ, ನಾವು ವರದಿಯಲ್ಲಿ ಕೊಟ್ಟಿದ್ದೇವೆ. ಪತ್ರ ಬರೆದಿದ್ದೇನೆ. ಸರಳೀಕರಣ ಮಾಡಿ ನಾವು ಜಿಲ್ಲಾವಾರು ಮಾಡಬೇಕೆಂದು ಹೇಳಿದ್ದೇವೆ. ಹಾಸ್ಟೆಲ್ ವ್ಯವಸ್ಥೆನೂ ಸಹ ಅದೇ ಆಗಿದೆ. ಆಹಾರಧಾನ್ಯಗಳನ್ನು ಕೇಂದ್ರೀಕೃತವಾಗಿ ಇಲ್ಲಿ ಇವರು ಟೆಂಡರ್ ಕರೆದು . . .

ಅಧ್ಯಕ್ಷರು:– ಪಾರ್ಟಿ ಮೀಟಿಂಗ್‌ನಲ್ಲಿ ಹೇಳ್ರಿ ಅಲ್ಲಿ.

ಶ್ರೀ ತನ್ವೀರ್ ಸೇಠ್:– ಹೇಳಿದ್ದೇವೆ.

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಸಭಾಧ್ಯಕ್ಷರೆ, ನನ್ನ ವಿಧಾನಸಭಾ ಕ್ಷೇತ್ರದಲ್ಲಿ ಬೆಳಿಗ್ಗೆ ಕಾರಿನಲ್ಲಿ ಹೋಗುವಾಗ ದನಕರುಗಳು ಅಡ್ಡ ಬಿದ್ದು 5 ಜನ ಪ್ರಾಣ ಕಳೆದುಕೊಂಡು ಅಲ್ಲಿ ಸಾಯುತ್ತಿದ್ದಾರೆ. ಯಾರೂ ಎತ್ತುವುದಕ್ಕೆ ಹೋಗಿಲ್ಲ. ದಯಮಾಡಿ ಹೇಳಿ.

ಅಧ್ಯಕ್ಷರು:– ಆಮೇಲೆ ಕೇಳುವಿರಂತೆ, ಆಯಿತು ಈಗಲೇ ಎಲ್ಲರೂ ಹೋಗೋಣ.

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಅಧ್ಯಕ್ಷರೆ, 5 ಜನ ಹೆಣ್ಣುಮಕ್ಕಳು ಕೆರೆಯೊಳಗೆ ಬಿದ್ದಿದ್ದು, ಬೆಳಿಗ್ಗೆಯಿಂದ ಯಾರೂ ಎತ್ತುವುದಕ್ಕೆ ಹೋಗಿಲ್ಲ. ದಯಮಾಡಿ ಮುಖ್ಯಮಂತ್ರಿಗಳು ಮತ್ತು ಗೃಹಮಂತ್ರಿಗಳ ಗಮನಕ್ಕಾದರೂ ಹೇಳಿ ಸಾರ್. ಬೆಳಿಗ್ಗೆಯಿಂದ ಒಬ್ಬರೂ ಹೋಗಿಲ್ಲ. ತಹಸೀಲ್ದಾರ್ ಕೋರ್ಟಿನಲ್ಲಿ ಕುಳಿತಿದ್ದಾರೆ.

ಅಧ್ಯಕ್ಷರು:– ಹಾಗಾದರೆ ಈಗ question hour ಬೇಡವೇ?

ಶ್ರೀ ಹೆಚ್.ಡಿ. ರೇವಣ್ಣ:- ಮಾನ್ಯ ಅಧ್ಯಕ್ಷರೆ, Question hour ಎಂದರೆ ಅಲ್ಲಿ 5 ಜನ ಕೆರೆಯೊಳಗೆ ಬಿದ್ದು ಸಾಯುತ್ತಿದ್ದಾರೆ.

ಅಧ್ಯಕ್ಷರು:- ಈಗ ಬರೆದು ಕೊಟ್ಟಿದ್ದೀರಿ, ಈಗಲೇ ನಿಮಗೆ ಮಾತನಾಡಲು ಅವಕಾಶ ಕೊಡುವುದಕ್ಕಾಗುತ್ತದೆಯೇ?

ಶ್ರೀ ಹೆಚ್.ಡಿ. ರೇವಣ್ಣ:- ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು:- ಈಗ ನೀವು ಕೊಟ್ಟ ಕೂಡಲೇ ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ಇದು ಶಾಸನಸಭೆ, ಇದಕ್ಕೆ ತನ್ನದೇ ಆದ ನಿಯಮಗಳಿವೆ.

ಶ್ರೀ ಹೆಚ್.ಡಿ. ರೇವಣ್ಣ:- ಮಾನ್ಯ ಅಧ್ಯಕ್ಷರೆ, ನಾನೇನು question hour ಬೇಡ ಎಂದು ಹೇಳುತ್ತಿಲ್ಲ.

ಅಧ್ಯಕ್ಷರು:- ನಿನ್ನೆ, ಮೊನ್ನೆಯಿಂದ ವಿಚಾರಗಳನ್ನು ಪ್ರಸ್ತಾಪ ಮಾಡಲು ಬರೆದು ಕೊಟ್ಟವರು ಇದ್ದಾರೆ. ಅವರಿಗೇ ಇನ್ನೂ ಅವಕಾಶ ಬಂದಿಲ್ಲ. ನೀವು ಈಗ ಕೊಟ್ಟು ಮಾತನಾಡುತ್ತೇನೆ ಅವಕಾಶ ಕೊಡಿ ಎಂದು ಹೇಳಿದರೆ ಸರಿಯಲ್ಲ.

ಶ್ರೀ ಹೆಚ್.ಡಿ. ರೇವಣ್ಣ:- ಮಾನ್ಯ ಅಧ್ಯಕ್ಷರೆ, ಬೆಳಗ್ಗೆ ಬರೆದು ಕೊಟ್ಟಿದ್ದೇನೆ.

ಅಧ್ಯಕ್ಷರು:- ಈಗ ಪ್ರಶ್ನೋತ್ತರ. ಡಾ॥ ಸಿ.ಎನ್. ಅಶ್ವತ್ಥ್ ನಾರಾಯಣ್.